ಅಲೋ ಮಾಡಬಹುದು. ಏಕೆಂದರೆ ಮೊನ್ನೆ ಆ ರೀತಿಯೇ ಕಮಿಟ್‌ಮೆಂಟ್ ಆಗಿದೆ. ಈಗ ವೇಳೆ 10.15 10–15 ರಿಂದ 11–15 ಗಂಟೆಯವರೆಗೂ ಚರ್ಚೆಗೆ ಅವಕಾಶ ಕೊಡುತ್ತೇನೆ.

**ಶ್ರೀ ಡಿ.ಬಿ. ಚಂದ್ರೇಗೌಡ** : ಮಾನ್ಯ ಅಧ್ಯಕ್ಷರೆ, ಆ ರೀತಿ ಆಗುವುದಿಲ್ಲ.

**ಶ್ರೀ ಶಿವಾನಂದ ಎಸ್ ಪಾಟೀಲ್** : ಮೊನ್ನೆಯೇ ಆ ರೀತಿಯಲ್ಲಿ ಡಿಸಿಶನ್ ಆಗಿದೆ. ತಾವೂ ಕೂಡ ಒಪ್ಪಿಕೊಂಡಿದ್ದೀರಿ.

**ಶ್ರೀ ಡಿ.ಬಿ. ಚಂದ್ರೇಗೌಡ** : ನಾನು ಮೊನ್ನೆ ಒಪ್ಪಿಕೊಂಡಿದ್ದು ನಿನ್ನೆ ಒಂದು ಗಂಟೆ ಚರ್ಚೆ ಮಾಡುವ ಬಗ್ಗೆ; ಅಂದರೆ ನಿನ್ನೆಯೇ ಆಗಿದ್ದರೆ ಆಗುತ್ತಿತ್ತು.

**ಶ್ರೀ ಎಸ್ ಸುರೇಶ್ ಕುಮಾರ್** : ನಿನ್ನೆ ನಮ್ಮ ಕೈಯಲ್ಲೂ ಆಗುತ್ತಿರಲಿಲ್ಲ; ನಿಮ್ಮ ಕೈಯಲ್ಲೂ ಚರ್ಚೆ ಮಾಡುವುದಕ್ಕೆ ಆಗುತ್ತಿರಲಿಲ್ಲ.

**ಶ್ರೀ ಡಿ.ಬಿ. ಚಂದ್ರೇಗೌಡ** : ಮಾನ್ಯ ಅಧ್ಯಕ್ಷರೆ, ಇವೊತ್ತು ಆಗುವುದಿಲ್ಲ. ನಿನ್ನೆ ನಮ್ಮ ಕೈಯಲ್ಲೂ ಇರಲಿಲ್ಲ, ನಿಮ್ಮ ಕೈಯಲ್ಲೂ ಇರಲಿಲ್ಲ. ಇವೊತ್ತು ನಮ್ಮ ಕೈಯಲ್ಲಿ ಇಲ್ಲ. He has to reply. It has to go the Governor for final approval. The Appropriation Bill has to be passed today. ಅದು ಇವೊತ್ತೇ ಆಗಬೇಕು.

**ಶ್ರೀ ಶಿವಾನಂದ ಎಸ್ ಪಾಟೀಲ್** : ಪಾಸ್ ಮಾಡೋಣವಂತೆ. ಒಂದು ಪಾರ್ಟಿಗೆ ಒಂದೊಂದು ಗಂಟೆಯ ಕಾಲ ಬೇಡಿಕೆ ಮೇಲೆ ಮಾತನಾಡಲು ಅವಕಾಶ ಕೊಡುವುದಾಗಿ ಮೊನ್ನೆಯೇ ಡಿಸಿಶನ್ ಮಾಡಿದ್ದೀರಿ.

**ಅಧ್ಯಕ್ಷರು** : ಒಂದು ಕೆಲಸ ಮಾಡೋಣ. ಇನ್ನು ಒಂದು ಗಂಟೆ ಅವಕಾಶ ಕೊಡೋಣ. ಒಬ್ಬೊಬ್ಬರು ಹತ್ತತ್ತು ನಿಮಿಷಗಳ ಕಾಲ ಹೆಸರು ಕೊಟ್ಟಿರುವವರು ಮಾತನಾಡಿ. ಈಗ ಮೊದಲು ಸದಾನಂದಗೌಡರೆ, ತಾವು ಶುರು ಮಾಡಿ.

## 2) ವಿತ್ತೀಯ ಕಾರ್ಯಕಲಾಪಗಳು

## 2003–04ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ ಸರ್ಕಾರದಿಂದ ಉತ್ತರ ಹಾಗು ಮತಕ್ಕೆ ಹಾಕುವುದು

**†ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು)** : ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ರಾಜ್ಯದ ಬಜೆಟ್ ಮೇಲೆ ಹಾಗೂ ರಾಜ್ಯದಲ್ಲಿ ನಡೆಯುವಂಥ ಹಣಕಾಸು ವ್ಯವಸ್ಥೆ ಬಗ್ಗೆ, ವಿವಿಧ ಇಲಾಖೆಗಳ ಬಗ್ಗೆ ನಾವು ಸುದೀರ್ಘವಾದ ಚರ್ಚೆಯನ್ನು ಮಾಡುತ್ತಿದ್ದೇವೆ. ಪ್ರಾಯಶಃ ಯಾವುದೇ ಒಂದು ರಾಜ್ಯದ ಆ ಆಡಳಿತ ವೈಖರಿಯ ಹೊಂದಾಣಿಕೆ ಮೇಲೆ, ಆ ರಾಜ್ಯದ ಎಲ್ಲಾ ವ್ಯವಸ್ಥೆಗಳು ನಡೆಯುತ್ತಿವೆಯೆಂದು ನಾನು ಭಾವಿಸುತ್ತಿದ್ದೇನೆ. ಪ್ರಾಯಶಃ ನಮಗೆಲ್ಲರಿಗೂ ಗೊತ್ತಿದೆ, ಕರ್ನಾಟಕ ರಾಜ್ಯದಲ್ಲಿ ಇರುವಂಥ ಈ ಸರ್ಕಾರ ಯಾವತ್ತು ಆಡಳಿತ ವೆಚ್ಚವನ್ನು ಕಡಿಮೆ ಮಾಡುತ್ತದೋ ಆ ಹಿನ್ನೆಲೆಯಲ್ಲಿ ಈ ರಾಜ್ಯದ ಎಲ್ಲ ಕೆಲಸ ಕಾರ್ಯಗಳು ನಡೆಯುವುದಕ್ಕೆ ಸಾಧ್ಯವಿದೆ. ಆದರೆ ಈ ರಾಜ್ಯದಲ್ಲಿ ಆ ನಿಟ್ಟಿನಲ್ಲಿ ಆ ರೀತಿಯ ಪ್ರಯತ್ನಗಳನ್ನು ಮಾಡುವಂಥ ಯಾವುದೇ ಕೆಲಸ ಕಾರ್ಯಗಳನ್ನು ಈ ಸರ್ಕಾರ ಮಾಡದೇ ಇರುವಂಥದ್ದು ಶೋಚನೀಯವೆಂದು ನಾನು ಭಾವಿಸುತ್ತಿದ್ದೇನೆ. ಆಡಳಿತ ಸುಧಾರಣೆ ಹೆಸರಿನಲ್ಲಿ ಸುದೀರ್ಘವಾದ ವರದಿಯನ್ನು ಸದನದಲ್ಲಿ ಮಂಡನೆ ಮಾಡಿದ್ದರೂ ಕೂಡ ಅದನ್ನು ಯಾವುದೇ ರೀತಿಯಲ್ಲೂ ಅನುಷ್ಠಾನ ಮಾಡದೇ ಇರುವಂಥದ್ದರ ಬಗ್ಗೆ ನಾನು ಸದನದ

ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಪ್ರಾಯಶಃ ಇವೊತ್ತು ನಮಗೆ ಗೊತ್ತಿದೆ; ಬೇಡಿಕೆ ಸಂಖ್ಯೆ 4ರಲ್ಲಿ ರಾಜ್ಯ ಸಚಿವ ಸಂಪುಟದ, ಸಚಿವರ ವೇತನ ಭತ್ಯೆಗಳಿಗೆ ಸಂಬಂಧಪಟ್ಟಂಥದ್ದು ಸಚಿವಾಲಯದ ವ್ಯಾಪ್ತಿಯಲ್ಲಿ ಬರುವಂಥ ವಿವಿಧ ಇಲಾಖೆಗಳ ನೌಕರರ ಸಂಬಳ, ಭತ್ಯೆ ಹಾಗೂ ಇತರ ಕೆಲಸಗಳ ಬಗ್ಗೆ ಇರುವಂಥ ಮೊತ್ತವನ್ನು ತೆಗೆದಿಟ್ಟಿರುವಂಥದ್ದನ್ನು ನಾವು ನೋಡುತ್ತಿದ್ದೇವೆ. ರಾಜ್ಯದ ಆಯವ್ಯಯದ ಮೊತ್ತ, ಹೆಚ್ಚಾಗಿ ಸರ್ಕಾರಿ ನೌಕರರ ಸಂಬಳ, ಭತ್ಯೆಗಳಿಗೆ ಹೋಗುವಂಥದ್ದನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ ಸಿಬ್ಬಂದಿ ಸಂಖ್ಯೆಯಲ್ಲಿ ಶೇಕಡ 5ರಷ್ಟು ಹುದ್ದೆಗಳನ್ನು ಕಡಿತ ಮಾಡಬೇಕು ಎನ್ನುವ ಮಾತುಗಳು ಬರುತ್ತಿದ್ದರೂ ಕೂಡ ಇಲ್ಲಿಯವರೆಗೆ ಸರ್ಕಾರ ಅದಕ್ಕೆ ಯಾವುದೇ ಬೆಂಬಲವನ್ನು ಕೊಡುತ್ತಿಲ್ಲ. ಅಂಕಿ ಅಂಶಗಳ ಆಧಾರದಲ್ಲಿ ಕಡಿಮೆ ಮಾಡಿದ್ದೇವೆ ಎಂದು ಕೊಟ್ಟಿರಬಹುದು. ಆದರೆ ಹೀಗೆ ಕಡಿಮೆ ಮಾಡಿದ್ದಾರೆ ಎನ್ನುವಂಥದ್ದನ್ನು ನೋಡುವ ಅವಶ್ಯಕತೆ ಇದೆ. ಇವೊತ್ತು ಒಂದು ಕಡೆ ಗಜಗಾತ್ರದ ಸಂಪುಟ. ಇಷ್ಟು ದೊಡ್ಡ ಗಜಗಾತ್ರದ ಸಂಪುಟದ ಅವಶ್ಯಕತೆ ಏನಿದೆ? ಕೇವಲ ಒಂದು ಇಲಾಖೆಗೆ ಎರಡು ಮೂರು ಮಂದಿ ಮಂತ್ರಿಗಳು. ಸದನದಲ್ಲಿ ಅವರು ಇರುವುದಿಲ್ಲ ಬಿಡಿ, ಅದರ ಬಗ್ಗೆ ನಾನು ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೂ ಕೂಡ ಈ ರೀತಿಯ ಗಜಗಾತ್ರದ ಸಂಪುಟ ಏಕಿರಬೇಕು? ಈಗಾಗಲೇ ವಾಸ್ತವಿಕವಾಗಿ ಒಟ್ಟು ಮೊತ್ತದ ಶೇಕಡ ಹತ್ತರಷ್ಟು ಮಾತ್ರ ಮಂತ್ರಿಗಳನ್ನಾಗಿ ನೇಮಕ ಮಾಡಿದರೆ ಯಾವುದೇ ರಾಜ್ಯಕ್ಕೂ ಕೂಡ ಒಳ್ಳೆಯದು ಎಂದು ಹೇಳುವಂಥ ವಿಚಾರ ಬರುತ್ತಿದೆ.

**ಶ್ರೀ ಅಲ್ಲಂ ವೀರಭದ್ರಪ್ಪ** : ಕೇಂದ್ರದಲ್ಲಿ ಎಷ್ಟಿದ್ದಾರೆ ಎಂಬ ಬಗ್ಗೆ ಹೇಳಿ.

**ಶ್ರೀ ಡಿ.ವಿ. ಸದಾನಂದಗೌಡ** : ಕೇಂದ್ರದಲ್ಲಿ ಎಷ್ಟು ಜನ ಮಂತ್ರಿಗಳಿದ್ದಾರೆ ಎಂದು ಸನ್ಮಾನ್ಯ ಅಲ್ಲಂ ವೀರಭದ್ರಪ್ಪನವರು ಕೇಳುತ್ತಿದ್ದಾರೆ. ಕೇಂದ್ರದಲ್ಲಿ 543 ಜನ ಲೋಕಸಭಾ ಸದಸ್ಯರು ಹಾಗೂ 175 ಜನ ರಾಜ್ಯಸಭಾ ಸದಸ್ಯರನ್ನೊಳಗೊಂಡಂತೆ 718 ಜನ ಸದಸ್ಯರುಗಳು ಇದ್ದಾರೆ. ಇವೊತ್ತು ಲೋಕಸಭೆಯಲ್ಲಿ ಇರುವ ಮಂತ್ರಿಗಳ ಸಂಖ್ಯೆ 78 ಆಗಿದೆ.

**ಶ್ರೀ ಬಿ.ಆರ್. ಯಾವಗಲ್** : ಯು.ಪಿ.ಯಲ್ಲಿ ಒಂದು ಕಾಲಕ್ಕೆ ಎಷ್ಟು ಸಂಖ್ಯೆ ಇತ್ತು?

**ಗೊಂದಲ**

**ಅಧ್ಯಕ್ಷರು** : ಯಾವಗಲ್‌ರವರೆ, ನೀವು ಸುಮ್ಮನೆ ಕುಳಿತುಕೊಳ್ಳಿಯಪ್ಪ. ನೋಡಿ, ಆರ್ಗ್ಯುಮೆಂಟ್ ಮಾಡಿಕೊಂಡು ಇಂಟರಪ್‌ಶನ್ ಮಾಡುತ್ತಾ ಹೋದರೆ ಸಂಜೆಯವರೆಗೆ ಬೇಕಾದರೆ ಚರ್ಚೆ ಮಾಡಬಹುದು. ಫೈನಲ್ ಆಗುವುದಿಲ್ಲ. ಇವೊತ್ತು ಬೇಡಿ. ನೋ ಇಂಟರ್‌ಪ್‌ಶನ್ ಟುಡೇ, ಪ್ಲೀಸ್.

**ಶ್ರೀ ಡಿ.ವಿ. ಸದಾನಂದಗೌಡ** : ಮಾನ್ಯ ಅಧ್ಯಕ್ಷರೆ, ಮೊನ್ನೆ ಮೊನ್ನೆ ಮಂತ್ರಿಗಳಾದ ಸನ್ಮಾನ್ಯ ಅಲ್ಲಂ ವೀರಭದ್ರಪ್ಪನವರು ಈ ಬಗ್ಗೆ ಕೇಳಿದ ಮೇಲೆ ನಾನು ಹೇಳಲೇಬೇಕಾಗುತ್ತದಲ್ಲವೇ?

**ಮಾನ್ಯ ಸದಸ್ಯರು** : ಸ್ವಾಮಿ, ಅಲ್ಲಂ ವೀರಭದ್ರಪ್ಪನವರು ಹಿಂದೆಯೂ ಮಂತ್ರಿ ಆಗಿದ್ದರು. ಕೆ.ಪಿ.ಸಿ.ಸಿ ಅಧ್ಯಕ್ಷರೂ ಆಗಿದ್ದರು. ನೀವು ಅವರನ್ನು ಮೊನ್ನೆ ಮೊನ್ನೆ ಮಂತ್ರಿ ಆದವರು ಎಂದು ಹೇಳುತ್ತಿದ್ದೀರಿ.

**ಅಧ್ಯಕ್ಷರು** : ನೀವು ಸುಮ್ಮನೆ ಕುಳಿತುಕೊಳ್ಳಿ. ಸದಾನಂದಗೌಡರೆ, don't yield to others.

**ಶ್ರೀ ಡಿ.ವಿ. ಸದಾನಂದಗೌಡ** : ಮಾನ್ಯ ಅಧ್ಯಕ್ಷರೆ, Yes, I don't yield. ಕರ್ನಾಟಕ ರಾಜ್ಯದ ಪರಿಸ್ಥಿತಿ ನೋಡಿ. ಕರ್ನಾಟಕ ರಾಜ್ಯದಲ್ಲಿ 49 ಜನ ಮಂತ್ರಿಗಳು, ನಿಗಮ ಮಂಡಳಿಗೆ 29 ಜನ ಅಧ್ಯಕ್ಷರುಗಳು. ನೀವು ಆಲೋಚನೆ ಮಾಡಿ. ಇವೊತ್ತು ಇಷ್ಟು ಸಂಖ್ಯೆಯಲ್ಲಿ ಹತ್ತಿರ ಹತ್ತಿರ ಸುಮಾರು 80ರಷ್ಟು ಮಂತ್ರಿ ಸ್ಥಾನಮಾನಗಳ ಜನಗಳನ್ನು ಇಟ್ಟುಕೊಂಡು ಈ ರಾಜ್ಯದಲ್ಲಿ ಬರವನ್ನು ನಿಭಾಯಿಸುವಂಥ ಪ್ರಯತ್ನಗಳನ್ನು ಕರ್ನಾಟಕ ರಾಜ್ಯ ಸರ್ಕಾರ ಮಾಡುತ್ತಿದೆ. ಇವೊತ್ತು ಕೂಡ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಹಾಗೂ ರಾಜ್ಯ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ಈಗಲಾದರೂ ಗಜಗಾತ್ರದ ಸಂಪುಟವನ್ನು ಕಡಿತ ಮಾಡುವಂಥ ಕೆಲಸವನ್ನು ಮಾಡಿ. ಏಕೆಂದರೆ ಗಜಗಾತ್ರದ ಸಂಪುಟದ ಅವಶ್ಯಕತೆ ಇಲ್ಲ. ಇದು ಕೇವಲ ಆಡಳಿತ ವೆಚ್ಚವನ್ನು ಹೆಚ್ಚು ಮಾಡುವಂಥ ಪ್ರಯತ್ನ ಆಗುತ್ತದೆಯೇ ಹೊರತು ಬೇರೆ ಏನೂ ಕೆಲಸಗಳಾಗುತ್ತಿಲ್ಲ.

**ಶ್ರೀ ಎಂ. ಮಹದೇವು** : ಯಾರನ್ನು ತೆಗೆಯಬೇಕು?

**ಅಧ್ಯಕ್ಷರು** : ಸುಮ್ನೆ ಇರಿಯಪ್ಪ. ಇವೊತ್ತು ಟೈಮ್ ಇಲ್ಲ. ನಿಮಗೆ ಅರ್ಥವಾಗುವುದಿಲ್ಲವೆ? ಫೈನಾನ್ಸ್ ಬಿಲ್ ಇವೊತ್ತು ಆಗಬೇಕು ಎಂದಿರುವಾಗ ನೀವು ಹೀಗೆ ಮಧ್ಯೆ ಇಂಟರ್‌ಫ್ಟ್ ಮಾಡಿದರೆ ದೇವರೇ ಗತಿ. ಸದಾನಂದಗೌಡರೆ, ನೀವು ಈ ಕಡೆ ನೋಡಿ ಅಡ್ರೆಸ್ ಮಾಡಿ ಮಾತನಾಡಿರಿ.

**ಶ್ರೀ ಡಿ.ವಿ. ಸದಾನಂದಗೌಡ** : ನಾನು ಆ ಕಡೆ ನೋಡುತ್ತಿಲ್ಲ. ನಿಮ್ಮ ಕಡೆ ಮಾತ್ರ ನಾನು ನೋಡುತ್ತಿದ್ದೇನೆ. ಈಗ ಮಹದೇವುರವರು ಯಾರನ್ನು ಬಿಡಬೇಕು ಎಂದು ಕೇಳಿದರು. ನನ್ನ ಸಲಹೆ ಏನೆಂದರೆ ಅವರನ್ನೇ ಮೊದಲು ಮಂತ್ರಿಮಂಡಲದಿಂದ ಬಿಟ್ಟರೆ ಬಹುಶಃ ಸೂಕ್ತವಾಗಬಹುದು ಎಂಬುದು ನನ್ನ ಅನಿಸಿಕೆ. ಏಕೆಂದರೆ ಅವರು ಯಾರನ್ನು ಬಿಡಬೇಕು ಎಂದು ಕೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, 5 ಪರ್ಸೆಂಟ್ ಹುದ್ದೆಗಳನ್ನು ಕಡಿತಗೊಳಿಸುವಂತೆ ನಿರ್ಧಾರ ಮಾಡಿದ್ದಾರೆ. ಯಾರನ್ನು ಕಡಿತ ಮಾಡಲು ನಿರ್ಧರಿಸಿದ್ದಾರೆಂದರೆ ಸಿ ಮತ್ತು ಡಿ ಗುಂಪಿನ ನೌಕರರ ಹುದ್ದೆಗಳನ್ನು ಮಾತ್ರ ಕಡಿತ ಮಾಡಲು ಹೊರಟಿದ್ದಾರೆ.

**ಶ್ರೀ ಎಂ. ಮಹದೇವು** : ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮಂತ್ರಿಗಳನ್ನು ಮಾಡುವ ಅಥವಾ ಬಿಡುವ ಅಧಿಕಾರವನ್ನು ಕೊಟ್ಟಿದ್ದೇವೆ. ನೀವೇಕೆ ಆ ಅಧಿಕಾರ ತೆಗೆದುಕೊಳ್ಳುತ್ತೀರಿ?

**ಅಧ್ಯಕ್ಷರು** : ಮಹದೇವುರವರೆ, ಇವೊತ್ತೇನು ಫೈನಾನ್ಸ್ ಬಿಲ್ ಪಾಸ್ ಮಾಡಬೇಕೆನ್ನುತ್ತೀರೋ ಅಥವಾ ಬೇಡವೋ ಹೇಳಿ.

**ಶ್ರೀ ಸಿ.ಆರ್. ಸಗೀರ್ ಅಹಮದ್** : ಫೈನಾನ್ಸ್ ಬಿಲ್ ಪಾಸ್ ಮಾಡಿಸುವುದಕ್ಕೆ ನಾವು ತಯಾರಿದ್ದೇವೆ. ಅವರು ಎಷ್ಟು ಮಾತನಾಡಿದರೂ ಕೊನೆಗೆ ಅವರ ತೀರ್ಮಾನ ಏನು ಎಂಬುದು ಗೊತ್ತೇ ಇದೆಯಲ್ಲಾ ನಿಮಗೆ.

**ಶ್ರೀ ಡಿ.ವಿ. ಸದಾನಂದಗೌಡ** : ಮಾನ್ಯ ಅಧ್ಯಕ್ಷರೆ, ನಾನು ಇಷ್ಟೇ ಹೇಳುವಂಥದ್ದು. ನಮ್ಮ ಕಡೆಯಿಂದ ನಾವು ಅಧಿಕೃತ ವಿರೋಧ ಪಕ್ಷದವರಾಗಿ ರಾಜ್ಯದ ಹಣಕಾಸು ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿಡಬೇಕಾದರೆ ಏನು ಮಾಡಬೇಕು ಎಂಬ ಬಗ್ಗೆ ಸಲಹೆಗಳನ್ನು ಕೊಡುತ್ತೇವೆ. ಆದರೆ ಇವರು ನಾವು ನಡೆದದ್ದೇ ದಾರಿ ಎಂದು ಹೇಳಿದರೆ ನಾವು ಎಷ್ಟು ಮಾತನಾಡಿದರೂ ಏನೂ ಸುಖವಿಲ್ಲ. ಕಣ್ಣಿದ್ದು ಕುರುಡರಾಗಿ, ಕಿವಿಯಿದ್ದು ಕಿವುಡರಾಗಿ, ಈ ರೀತಿಯಲ್ಲಿ ವರ್ತನೆ ಮಾಡುವಂಥ ಈ ಸರ್ಕಾರದ ಬಗ್ಗೆ, ಆದರೂ ಕೂಡ ರಾಜ್ಯದ ಜನರು ತಿಳಿದುಕೊಳ್ಳಲಿ ಎನ್ನುವಂಥ ದೃಷ್ಟಿಕೋನದಿಂದ

ನಾವು ಇದನ್ನು ಹೇಳುವಂಥದ್ದು ನಮಗೆ ಅನಿವಾರ್ಯ ಎಂದು ನಾನು ಭಾವಿಸುತ್ತಿದ್ದೇನೆ. 5 ಪರ್ಸೆಂಟ್ ಹುದ್ದೆಗಳನ್ನು ಕಡಿತಗೊಳಿಸುವಂಥ ನಿರ್ಧಾರ ಮಾಡಿದ್ದಾರೆ. ಎಷ್ಟು ಜನರನ್ನು ಮಾಡಿದ್ದಾರೆ ಸ್ವಾಮಿ? ಸಿ ಮತ್ತು ಡಿ ಗ್ರೂಪ್‌ನಲ್ಲಿರುವಂಥ ಹುದ್ದೆಗಳನ್ನು ಕಡಿತ ಮಾಡಿದ್ದಾರೆಯೇ ಹೊರತು ಬೇರೆ ಯಾವುದೇ ಉನ್ನತ ಮಟ್ಟದ ಹುದ್ದೆಗಳನ್ನು ಮಾಡಿಲ್ಲ. ಇವರು ಇದರ ಬದಲಾಗಿ ಏನು ಮಾಡಿದ್ದಾರೆಂದರೆ ಸಚಿವಾಲಯದ ಮಟ್ಟದಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳನ್ನು, ಪ್ರಧಾನ ಕಾರ್ಯದರ್ಶಿಗಳನ್ನು, ಹೀಗೆ ಇವರನ್ನೆಲ್ಲಾ ಹೆಚ್ಚು ಮಾಡಿದ್ದಾರೆ. ನಾವು ಆಲೋಚನೆಯನ್ನು ಮಾಡಬೇಕು. ಒಂದು ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿಗಳನ್ನು ಹೆಚ್ಚು ಮಾಡುವುದರಿಂದ ಏನಾಗುತ್ತದೆಂದರೆ ಅವರಿಗೆ ಬೇಕಾಗಿರುವ ಆಪ್ತ ಸಹಾಯಕರು ಇರಬಹುದು. ಬೆರಳಚ್ಚುಗಾರರು ಇರಬಹುದು, ಶೀಘ್ರಲಿಪಿಗಾರರು ಇರಬಹುದು ಹೀಗೆ ಹತ್ತು ಹಲವು ಹುದ್ದೆಗಳನ್ನು ನಾವು ಮತ್ತೆ ಅವರಿಗೆ ಕೊಟ್ಟು ಒಂದು ಬಿಳಿಯಾನೆಯ ರೀತಿಯಲ್ಲಿ ಅವರಿಗೆ ನಾವು ಬೆಂಬಲ ಕೊಡುವಂಥ ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ ಇವೊತ್ತಿಗೂ ಕೂಡ ನಾನು ಏನು ಹೇಳುತ್ತೇನೆಂದರೆ ಈಗಾಗಲೇ ಸರ್ಕಾರ 5 ಪರ್ಸೆಂಟ್ ಹುದ್ದೆಗಳನ್ನು ಕಡಿತ ಮಾಡಲು ಏನು ಒಪ್ಪಿಕೊಂಡಿದೆಯೋ ಆ 5 ಪರ್ಸೆಂಟ್ ಕಡಿತವನ್ನು ಐ.ಪಿ.ಎಸ್, ಐ.ಎ.ಎಸ್ ಅಥವಾ ಉನ್ನತ ಮಟ್ಟದ ಕಾರ್ಯದರ್ಶಿ ಮಟ್ಟದಲ್ಲೂ ಕೂಡ ಅವರು ಕಡಿತಗೊಳಿಸಿದರೆ ಮಾತ್ರ ಈ 5 ಪರ್ಸೆಂಟ್ ಕಡಿತಗೊಳಿಸುವುದಕ್ಕೆ ಒಂದು ಗೌರವ ಬರುತ್ತದೆ. ನಾನು ಒಂದೆರಡು ಉದಾಹರಣೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಉದಾಹರಣೆಗೆ ನಮ್ಮ ಪೊಲೀಸ್ ಇಲಾಖೆ. ಪೊಲೀಸ್ ಇಲಾಖೆಯಲ್ಲಿ ಎಷ್ಟು ಹುದ್ದೆಗಳು ಇವೆ ಹೇಳಿ. ನಾಲ್ಕು ಜನ ಡಿ.ಜಿ.ಪಿ, ಮೂವತ್ತೊಂದು ಜನ ಐ.ಜಿ.ಪಿಗಳು ಇಪ್ಪತ್ತೆಂಟು ಜನ ಡಿ.ಐ.ಜಿ.ಗಳು ಇವರಲ್ಲಿ 5 ಪರ್ಸೆಂಟ್ ಹುದ್ದೆಯನ್ನು ಕಡಿತ ಮಾಡಿದರೆ ಎಷ್ಟು ಉಳಿತಾಯ ಮಾಡಬಹುದು ಆಲೋಚನೆ ಮಾಡಿ. ಇವತ್ತು ಅತಿ ಅವಶ್ಯವಿರುವ ಪಿ.ಸಿ.ಗಳನ್ನು ನೇಮಕ ಮಾಡುವುದಕ್ಕೆ ಇವರು ಹೋಗುವುದಿಲ್ಲ. ಇದಕ್ಕೆ ಬದಲಾಗಿ ಇವರಿಗೆಲ್ಲ ಪ್ರಮೋಶನ್‌ಗಳನ್ನು ಮಾಡಿ ಐ.ಪಿ.ಎಸ್, ಐ.ಎ.ಎಸ್, ಇಂಥ ಅಧಿಕಾರಿಗಳ ಆಪ್ತ ವಲಯದಲ್ಲಿಯೇ ಇಡೀ ಆಡಳಿತ ನಡೆಸುವಂಥ ಪ್ರಯತ್ನ ಸರ್ಕಾರದಿಂದ ಆಗುತ್ತದೆ. ಒಂದು ಪ್ರಧಾನ ಕಾರ್ಯದರ್ಶಿಯಾಗಲಿ, ಅಪರ ಮುಖ್ಯ ಕಾರ್ಯದರ್ಶಿಯಾಗಲಿ, ಆ ಹುದ್ದೆಯನ್ನು ಇವೊತ್ತು ರದ್ದು ಮಾಡಿದರೆ ಸುಮಾರು 25 ರಿಂದ 30 ಲಕ್ಷ ರೂಪಾಯಿ ಉಳಿತಾಯವಾಗುತ್ತದೆ. ಆದರೆ ಸಿ ಅಥವಾ ಡಿ ಗ್ರೂಪ್‌ನಲ್ಲಿ ಒಂದು ಹುದ್ದೆ ಕಟ್ ಮಾಡಿದರೆ ಕೇವಲ ಎರಡು ಲಕ್ಷ ರೂಪಾಯಿಗಳಷ್ಟು ಮಾತ್ರ ಉಳಿತಾಯವಾಗುತ್ತದೆಯೇ ಹೊರತು ಹೆಚ್ಚು ಹಣ ಉಳಿತಾಯವಾಗುವುದಿಲ್ಲ. ನೋಡಿ ಇವರ ಕಾರ್ಯವೈಖರಿ ಹೇಗಿದೆ? ಆಡಳಿತ ಸುಧಾರಣಾ ವರದಿಯ ಶಿಫಾರಸ್ಸು ಎಂದು ಹೇಳಿ – ಆರೋಗ್ಯ ಇಲಾಖೆಯಲ್ಲಿ ಮೂರು ಸಾವಿರ ಹುದ್ದೆಗಳನ್ನು ಕಡಿತಗೊಳಿಸಬೇಕೆಂದು ಮಾಡಿದ್ದಾರೆ. ಇದರಲ್ಲಿ 'ಎ' ಗ್ರೂಫ್‌ನ 1, 'ಬಿ' ಗ್ರೂಪ್‌ನ 21, 'ಸಿ' ಗ್ರೂಪ್‌ನ 1044, 'ಡಿ' ಗ್ರೂಪ್‌ನ 1934 ಹುದ್ದೆಗಳನ್ನು ಕಡಿತಗೊಳಿಸಿದ್ದಾರೆ. ನೋಡಿ! ಇವರು ಹುದ್ದೆಗಳನ್ನು ಕಡಿತಗೊಳಿಸಿದ ಕಾರ್ಯವೈಖರಿಯನ್ನು 'ಎ' ಮತ್ತು 'ಬಿ' ಗುಂಪಿನವರಿಗೆ ಯಾವುದೇ ಸಂಬಂಧಗಳಿಲ್ಲ. ಇನ್ನು ಶಿಕ್ಷಣ ಇಲಾಖೆಯಲ್ಲಿ 1447 ಹುದ್ದೆಗಳನ್ನು ಕಡಿತಗೊಳಿಸಬೇಕೆಂದು ಮಾಡಿದರು. ಯಾರನ್ನು ಮಾಡಿದ್ದಾರೆ? 'ಬಿ' ಗ್ರೂಪ್‌ನಲ್ಲಿ 461 ಮತ್ತು 'ಸಿ' ಗ್ರೂಪ್‌ನಲ್ಲಿ 461, 'ಡಿ' ಗ್ರೂಪ್‌ನಲ್ಲಿ 724, ಇದೇ ರೀತಿ ಹೋಗುತ್ತದೆ ಅಧ್ಯಕ್ಷರೆ ಪಶು ಸಂಗೋಪನಾ ಇಲಾಖೆಯಲ್ಲಿ 1115 ಹುದ್ದೆಗಳನ್ನು ಕಡಿತ

ಮಾಡಬೇಕೆಂಬುದರಲ್ಲಿ 977 'ಡಿ' ಗ್ರೂಪ್ ನೌಕರರು ಸೇರಿದ್ದಾರೆ. ಇವೊತ್ತು ನಾವು ಲೋಕೋಪಯೋಗಿ ಇಲಾಖೆಯಲ್ಲಿ ನೋಡುತ್ತಿದ್ದೇವೆ. ಎಲ್ಲಾ ರೀತಿಯಲ್ಲಿ ಒಟ್ಟು ಸುಮಾರು 20142 ಜನರನ್ನು ಇವರು ಕಡಿತಗೊಳಿಸಬೇಕು ಎಂದು ಹೇಳಿರುವುದರಲ್ಲಿ 18314 ಜನರು 'ಸಿ' ಮತ್ತು 'ಡಿ' ಗುಂಪಿನ ನೌಕರರು ಇದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಚೀಫ್ ಇಂಜಿನಿಯರ್‌ಗಳು ಎಷ್ಟು ಜನ ಇದ್ದಾರೆ ಸ್ವಾಮಿ? ಇನ್ನು ಅರಣ್ಯ ಇಲಾಖೆಯಲ್ಲಿ, ಚೀಫ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಹುದ್ದೆಗಳು ಎಷ್ಟಿವೆ? ಯಾವು ಯಾವುದಕ್ಕೋ, ಬೇಕಾದ್ದಕ್ಕೆ, ಬೇಡದ್ದಕ್ಕೆ ಎಲ್ಲಾ ಕಡೆ ಬೋರ್ಡ್‌ಗಳಿವೆ. ಅದೂ ಅರಣ್ಯ ಭವನ ಆಗಿದೆ. ಮತ್ತೆ ಇವರಿಗೆ ನಾವು ಹೇಳುವಂಥದ್ದು ಅರಣ್ಯರೋಧನವೇ ಆಗಿದೆ. ಇದರಲ್ಲಿ ಏನೂ ಕೂಡ ವ್ಯತ್ಯಾಸಗಳಾದಂಥದ್ದನ್ನು ನಾವು ನೋಡುತ್ತಿಲ್ಲ. ಆದ್ದರಿಂದ ನಾನು ಹೇಳಿದ ಸಲಹೆಯ ರೀತಿಯಲ್ಲಿ ಇವರು ಮಾಡದಿದ್ದರೆ ಬಹುಶಃ ಖಂಡಿತ ನಮ್ಮ ರಾಜ್ಯದ ಆಡಳಿತವನ್ನು ಸುಧಾರಣೆ ಮಾಡುವುದಕ್ಕೆ, ಆರ್ಥಿಕ ವ್ಯವಸ್ಥೆಯ ಸುಧಾರಣೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಇನ್ನು ಸಿ.ಓ.ಡಿಯಲ್ಲಿರುವಂಥ ನೌಕರರ ಸಂಖ್ಯೆಯನ್ನು ನೋಡೋಣ. 1992–93ರಲ್ಲಿ ಸಿ.ಓ.ಡಿ.ಗೆ ಭಾರಿ ಸಂಖ್ಯೆಯಲ್ಲಿ ಕೇಸ್‌ಗಳು ರೆಫರ್ ಆಗುತ್ತಿದ್ದುದ್ದನ್ನು ನಾವು ನೋಡುತ್ತಿದ್ದೆವು. 1992ರಲ್ಲಿ 1975, 1993ರಲ್ಲಿ 2013 ಕೇಸ್‌ಗಳು ರೆಫರ್ ಆಗಿವೆ. ಆದರೆ ಇತ್ತೀಚೆಗೆ ಅಂದರೆ 1994ರ ನಂತರ 250 ರಿಂದ 300 ಕೇಸ್‌ಗಳು ಮಾತ್ರ ಸಿ.ಓ.ಡಿಗೆ ರೆಫರ್ ಆಗುತ್ತಿವೆ. ಆದರೆ ಅಲ್ಲಿರುವಂಥ ಅಧಿಕ್ಕಾರಿಗಳ ಸಂಖ್ಯೆಯನ್ನು ನೋಡಿ. ಐ.ಜಿ.ಪಿ 2, ಡಿ.ಐ.ಜಿ.ಪಿ 2, ಎಸ್.ಪಿ. 7, ಡಿ.ಎಸ್.ಪಿ. 32 ಇನ್ಸ್‌ಪೆಕ್ಟರ್ಸ್ 85, ನೂರಾರು ಸಬ್–ಇನ್ಸ್‌ಪೆಕ್ಟರ್‌ಗಳು ನಮಗೆ ಅನ್ನಿಸುತ್ತದೆ ಇವೊತ್ತು ಪೊಲೀಸ್ ಇಲಾಖೆಯ ಕಾರ್ಯವೈಖರಿಗಳನ್ನು ನೋಡಿದರೆ ದರೋಡೆ ಪ್ರತಿಬಂಧಕ ದಳ ಎಂದು ಹೇಳುವಂಥದ್ದು, ಅವರೇ ದರೋಡೆ ಮಾಡುವುದಕ್ಕೆ ಶುರು ಮಾಡುವಂಥದ್ದು ಕರ್ನಾಟಕ ರಾಜ್ಯದಲ್ಲಿ ನಡೆದಿದೆ. ಇಂಥದ್ದಕ್ಕೆ ಈ ಸಿ.ಓ.ಡಿ., ಈ ಸಿ.ಓ.ಡಿ.ಗೆ ಇಷ್ಟು ದೊಡ್ಡ ಮೊತ್ತದಲ್ಲಿ ಖರ್ಚು ಮಾಡಿ ಹೀಗೇಕೆ? ಸಿ.ಓ.ಡಿ. ಎಂದರೆ ಸಾಧಾರಣ ಅಧ್ಯಕ್ಷರಿಗೆ ಗೊತ್ತಿದೆ. ಸಿ.ಓ.ಡಿ.ಗೆ ಬರುವಂಥವರು ಎಲ್ಲಿಯೂ ಸಲ್ಲದವರು ಇಲ್ಲಿ ಸಲ್ಲುವರು ಎಂದು ಹೇಳಲಾಗುತ್ತದೆ. ಅಂದರೆ ಎಲ್ಲೂ ಒಳ್ಳೆಯ ಸ್ಟೇಶನ್‌ಗಳು, ಮತ್ತೊಂದು, ಯಾರ ಕೃಪಾ ಕಟಾಕ್ಷ ಇಲ್ಲದವರು, ಅಂಥವರನ್ನು ಕೊನೆಗೆ ಸಿ.ಓ.ಡಿ.ಗೆ ಹಾಕುವಂಥದ್ದು. ಇನ್ನು ಸಿ.ಓ.ಡಿಗೆ ರೆಫರ್ ಆಗುವಂಥ ವಿಚಾರಗಳು ಎಂದರೆ ಎಲ್ಲಿಯೂ ಡಿಟೆಕ್ಟ್ ಆಗದ್ದು, ಮತ್ತೊಂದಾಗದ್ದು, ಗಂಭೀರವಾದಂಥ ವಿಚಾರಗಳು ಸಿ.ಓ.ಡಿ.ಗೆ ರೆಫರ್ ಆಗುತ್ತವೆ. ಆದರೆ ಇದರ ಕಾರ್ಯವೈಖರಿಯನ್ನು ನೋಡಿದರೆ ಪ್ರಾಯಶಃ ಈ ರಾಜ್ಯ ಸರ್ಕಾರ ಅದಕ್ಕೆ ಮಾಡುವಂಥ ಖರ್ಚು ಮತ್ತು ಅದರಿಂದ ಬರುವಂಥ ಪ್ರತಿಫಲಗಳು ತುಂಬಾ ಒಂದು ರೀತಿಯಲ್ಲಿ ಆಡಳಿತ ವ್ಯವಸ್ಥೆಗೆ ಹಿಡಿದಂಥ ಕೈಗನ್ನಡಿ ಎಂದು ನನಗೆ ಕಾಣಿಸುತ್ತಿದೆ. ಇನ್ನು ಲೋಕಾಯುಕ್ತದವರು; ಇವರು ಅಲ್ಲಿ ದಾಳಿ ಮಾಡಿದರು, ಇಲ್ಲಿ ದಾಳಿ ಮಾಡಿದರು ಎಂದು ದಿನ ನಿತ್ಯ ಪತ್ರಿಕೆಗಳಲ್ಲಿ ಬರುತ್ತಿರುತ್ತದೆ. ಪ್ರಾಯಶಃ ಇವರು ಪ್ರಥಮ ಬಾರಿಗೆ ಒಬ್ಬ ದೊಡ್ಡ ಅಧಿಕಾರಿಯಾದ ರಾಜು ಎನ್ನುವವರ ಮೇಲೆ ಮೊನ್ನೆಯ ದಿನ ಧಾಳಿ ಮಾಡಿದ್ದಾರೆ. ಇದನ್ನು ಬಿಟ್ಟರೆ ಬೇರೆ ಧಾಳಿಯೆಲ್ಲಾ ಸಣ್ಣಪುಟ್ಟವರ ಮೇಲೆ ಮಾಡಿರುವುದು. ಯಾರೆಲ್ಲಾ ತಿಮಿಂಗಿಲಗಳಿದ್ದಾರೆ ಅವರ ಸುದ್ದಿಗೆ ಹೋಗುವುದಿಲ್ಲ. ಅವರು ವಿಪರೀತ ಪ್ರಚಾರ ಪಡೆದುಕೊಳ್ಳುತ್ತಾರೆ. ಇದರಲ್ಲಿ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ.

ಆದರೆ ಅಪರಾಧಿಗಳಿಗೆ ಶಿಕ್ಷೆಯಾದದ್ದು ಎಲ್ಲಾದರೂ ಉಂಟೆ ಅಧ್ಯಕ್ಷರೆ? ತಾವು ದಯವಿಟ್ಟು ಹೇಳಬೇಕು. ಶಿಕ್ಷೆಯಾಗುವಂಥ ಸಂದರ್ಭ ಇದ್ದರೂ ಕೂಡ ಅವರಿಗೆ ಪ್ರಮೋಶನ್ ಆಗುವಂಥ ಕೆಲಸ ಕಾರ್ಯಗಳನ್ನು ಮಾಡುತ್ತಾರೆ.

**ಶ್ರೀ ಡಿ.ಬಿ. ಚಂದ್ರೇಗೌಡ** : ನೀವು ಹೇಳಬೇಕು ಎಂದು ಅಧ್ಯಕ್ಷರನ್ನು ಕೇಳಿದರೆ ಅವರು ಏನು ಹೇಳುತ್ತಾರೆ?

**ಶ್ರೀ ಡಿ.ವಿ. ಸದಾನಂದಗೌಡ** : ನೀವು ಹೇಳುವುದಿಲ್ಲ ಬಿಡಿ. ಅಧ್ಯಕ್ಷರು ತಮ್ಮ ಕಡೆಯಿಂದ ಹೇಳಿಸಲಿ ಎಂದು ಹೇಳಿದೆ. ನಮ್ಮ ದುರ್ದೈವ ನೀವಂತೂ ಬಾಯಿ ಬಿಡುವುದಿಲ್ಲ. ಬಾಯಿ ಬಿಟ್ಟರೂ ಸಮರ್ಪಕವಾಗಿ ಹೇಳುತ್ತಿಲ್ಲ. ಮತ್ತೆ ಒಮ್ಮೊಮ್ಮೆ ಅಧ್ಯಕ್ಷರು ನಮ್ಮ ರಕ್ಷಣೆಗೆ ಬಂದು ಏನಾದರೂ ಹೇಳಿಸಿಬಿಡುತ್ತಾರೆ, ಇಲ್ಲದಿದ್ದರೆ ಅವರಾದರೂ ಹೇಳುತ್ತಾರೆ. ಆದಕಾರಣ ನಾವು ಅಧ್ಯಕ್ಷರನ್ನು ಸ್ವಲ್ಪ ನಂಬಿ ಈ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಹಿಂದೆ ವಿಜಿಲೆನ್ಸ್ ಕಮಿಷನ್ ಅಸ್ತಿತ್ವದಲ್ಲಿ ಇತ್ತು. ಆಗ ಲಂಚದ ಪ್ರಮಾಣ ಕೂಡ ಕಡಿಮೆ ಇತ್ತು. ಆದರೆ ಇವತ್ತು ಏನಾಗಿದೆ ಎಂದರೆ, ಈ ಲೋಕಾಯುಕ್ತದ ವ್ಯಾಪ್ತಿಗೆ ಬರುವಂತಹ ಕೇಸ್‌ಗಳ ಬಗ್ಗೆ ಯಾವುದೇ ರೀತಿಯಲ್ಲಿ ಕಾರ್ಯಾಚರಣೆ ಆಗುತ್ತಿಲ್ಲ. ಉದಾಹರಣೆಗೆ ಹೈಕೋರ್ಟಿನಲ್ಲಿ ಮೊನ್ನೆ ಮೊನ್ನೆ ತೆಗೆದುಕೊಂಡ ಡಿಸಿಷನ್ ಮಾನ್ಯ ಚಂದ್ರೇಗೌಡರಿಗೆ ಗೊತ್ತಿರಬಹುದು. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎಇಇ ಮೇಲೆ ಲೋಕಾಯುಕ್ತರು ಛಾರ್ಜ್ ಮಾಡಿ ಅವರು ಕಂಪಲ್ಸರಿ ರಿಟೈರ್‌ಮೆಂಟ್‌ಗೆ ಹೋಗಬೇಕೆಂದು ಹೇಳಿದ್ದರು. ಅದರ ಮೇಲೆ ಅವರು ಹೈಕೋರ್ಟಿಗೆ ಹೋದರು. ಹೈಕೋರ್ಟ್ ಏನು ಹೇಳಿತು? ಅದು ಲೋಕಾಯುಕ್ತದವರು ಮಾಡುವ ಕೆಲಸ ಅಲ್ಲ, ಉಪ ಲೋಕಾಯುಕ್ತರು ಮಾಡುವಂಥದ್ದು. ಉಪ ಲೋಕಾಯುಕ್ತರ ನೇಮಕಾತಿ ಆಗಲಿಲ್ಲವೆಂದು ಅವರು ಹೇಳುತ್ತಾರೆ. ಸರ್ಕಾರದವರು ಲೋಕಾಯುಕ್ತರ ಕೈ ಬಲಪಡಿಸುತ್ತೇವೆಂದು, ಲೋಕಾಯುಕ್ತ ಕಾನೂನಿಗೆ ತಿದ್ದುಪಡಿ ತರುತ್ತೇವೆಂದು ಹೇಳುತ್ತಾರೆ, ಯಾವಾಗ ತಿದ್ದುಪಡಿ ತರುತ್ತೀರಿ? ಉಪ ಲೋಕಾಯುಕ್ತರು ಮಾಡಬೇಕಾದ ಕೆಲಸವನ್ನು ಅವರು ಮಾಡದ ಕಾರಣ ಎಇಇಯವರು ಹೈಕೋರ್ಟಿಗೆ ಹೋಗಿ ಸರ್ಕಾರಕ್ಕೆ ಛೀಮಾರಿ ಹಾಕಿ ಉಪ ಲೋಕಾಯುಕ್ತರು ಮಾಡುವ ಕೆಲಸವಾಗಿರುವ ಕಾರಣ ಅವರು ಯಾವುದೇ ರೀತಿಯಲ್ಲಿ ಪರ್ಮನೆಂಟ್ ರಿಟೈರ್‌ಮೆಂಟ್‌ಗೆ ಹೋಗಬಾರದು ಎಂದು ಹೇಳುವ ಮಾತು ಹೇಳಿದ್ದು ಕೂಡ ನಮಗೆ ಗೊತ್ತಿದೆ. ಈ ರೀತಿ ಕಳೆದ 10 ವರ್ಷಗಳಲ್ಲಿ ಸಿಓಡಿಯವರಿಗೆ ಸುಮಾರು 6736 ಪ್ರಕರಣಗಳು ಸಿಓಡಿಗೆ ರೆಫರ್ ಆಗಿವೆ. ಸರ್ಕಾರಿ ಅಂಕಿ ಅಂಶಗಳ ಆಧಾರದಲ್ಲಿ ಸಣ್ಣಪುಟ್ಟದಾಗಿ ಕೇವಲ 71 ಕೇಸ್‌ಗಳಿಗೆ ಪನಿಷ್‌ಮೆಂಟ್ ಆಗಿದೆ. ಅದೂ ಕೂಡ ಮೈನರ್ ಪನಿಷ್‌ಮೆಂಟ್. 6736 ಕೇಸ್‌ಗಳಲ್ಲಿ ಕಳೆದ 10 ವರ್ಷಗಳಲ್ಲಿ ಕೇವಲ 71 ಕೇಸ್‌ಗಳಿಗೆ ಪನಿಷ್‌ಮೆಂಟ್ ಆಗಿದೆ. ಏಕೆ ಇಷ್ಟು ದೊಡ್ಡ ಬಿಳಿ ಆನೆ ಸಾಕುವುದು? ಇದನ್ನೆಲ್ಲಾ ಸರ್ಕಾರ ಖಂಡಿತವಾಗಿ ನೋಡಬೇಕು. ನಿಮ್ಮ ಕಾರ್ಯವೈಖರಿ ಬಗ್ಗೆ ಸನ್ಮಾನ್ಯ ಚಂದ್ರೇಗೌಡರಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಪ್ರಾಯಶಃ ಇದನ್ನು ಪ್ರಸ್ತಾಪ ಮಾಡುವುದು ಅಷ್ಟು ಸೂಕ್ತ ಅಲ್ಲದಿದ್ದರೂ ಪ್ರಸ್ತಾಪ ಮಾಡಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿದ್ದೇನೆ. ಕಳೆದ ಸಾರಿ ಲೆಜಿಸ್ಲೇಟರ್ಸ್ ಸ್ಯಾಲರಿ ಬಿಲ್ ಅನ್ನು ಸದನದಲ್ಲಿ ಮಂಡನೆ ಮಾಡಿದಿರಿ. ಅದು ಏನಾಯಿತು? ಗವರ್ನರ್ ಅವರಿಂದ ಪುನಃ ಇಲ್ಲಿಗೆ ಬಂದಿತು. ಏಕೆ ಬಂದಿತು? ಆರ್ಥಿಕ ಇಲಾಖೆಯಿಂದ ಕನ್‌ಕರೆನ್ಸ್ ಪಡೆದಿಲ್ಲ ಎಂದು ಹಿಂದೆ ಬರುವ ಸಂಗತಿ. ಲೆಜಿಸ್ಲೇಟರ್ಸ್ ಬಿಲ್ ಅನ್ನು ಮಂಡನೆ ಮಾಡುವುದು.

ಅದನ್ನು ಮಂಡನೆ ಮಾಡುವಾಗ ಏನೆಲ್ಲಾ ಕಾನೂನು ಜಾರಿ ಆಗಬೇಕಾಗಿತ್ತು ಎಂದು ಹೇಳುವುದನ್ನು ನೋಡುವುದು ಬೇಡವೆ? ಇದಕ್ಕಿಂಥ ಹೆಚ್ಚಿಗೆ ಏನು ಗಮನಿಸಬೇಕಾದುದು ಇದೆ? ಒಮ್ಮೆ ಈ ಸದನದಲ್ಲಿ ಯಾವುದೇ ಒಂದು ಬಿಲ್ ಅಪ್ರೂವ್ ಮಾಡಿದ ಮೇಲೆ ಆ ಬಿಲ್ ಬಗ್ಗೆ ಗವರ್ನರ್ ಏನಾದರೂ ಸ್ಪೀಕರ್ ಹತ್ತಿರ ಕ್ಲ್ಯಾರಿಫಿಕೇಶನ್ ಕೇಳಬಹುದು. ಆ ಬಿಲ್ ರೀ ಕನ್‌ಸಿಡರ್ ಮಾಡಬಹುದೇ ಎಂದು ಕೇಳಬಹುದು; ಅಥವಾ ಅವರು ಪ್ರೆಸಿಡೆಂಟ್‌ಗೆ ರೆಫರ್ ಮಾಡಬಹುದು. ಅದರ ಬದಲು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಒಬ್ಬ ಅಧಿಕಾರಿ ಕ್ಲಾರಿಫಿಕೇಶನ್ ಕೇಳಿದ್ದಾರೆ. ನೀವು ಹೇಗೆ ಮಾಡಿದ್ದೀರಿ ಎಂದು ಕೇಳಿದ್ದಾರೆ. ಇದು ನಮ್ಮ ರಾಜ್ಯದಲ್ಲಿ ಇರುವಂತಹ ಆಡಳಿತ ವೈಖರಿ! ಆರ್ಥಿಕ ಇಲಾಖೆಯ ಅಧಿಕಾರಿ ಯಾರು ಎಂದು ನೀವು ತಿಳಿದುಕೊಳ್ಳಿ. ಈ ರೀತಿ ಒಂದು ಕಾನೂನನ್ನು ಲೆಜಿಸ್ಲೇಚರ್‌ನಲ್ಲಿ ತರುವಂತಹ ಸಂದರ್ಭದಲ್ಲಿ ಕೂಡ ಅದಕ್ಕೆ ಬೇಕಾದ ಮೂಲಭೂತ ವ್ಯವಸ್ಥೆಗಳು ಆಗದೆ, ಅದು ಅಲ್ಲಿ ರೆಫರ್ ಆಗುವುದು, ಎಷ್ಟರ ಮಟ್ಟಿಗೆ ಈ ರೀತಿ ಒಂದು ಆಡಳಿತ ಇದ್ದೂ ಕೂಡ ಆಡಳಿತ ಇಲ್ಲದ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ನಡೆಯತಕ್ಕಂಥದ್ದು, ಲೋಕಾಯುಕ್ತ ಇರಬಹುದು, ಸಿಒಡಿ ಇರಬಹುದು, ಗಜಗಾತ್ರದ ಸಂಪುಟ ಇರಬಹುದು, ಇವೆಲ್ಲವೂ ಈ ರೀತಿ ಆಗುತ್ತದೆ. ನಾನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೂ ಕೂಡ ನನ್ನ ಜಿಲ್ಲೆಯ ಒಂದು ಸಂಗತಿಯನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಪೊಲೀಸ್ ಅಧಿಕಾರಿಯ ಕಾರ್ಯವೈಖರಿ ಬಗ್ಗೆ ಹೇಳುತ್ತೇನೆ. ಮೊನ್ನೆ ಮೊನ್ನೆ ಈ ಸದನದಲ್ಲಿ ಆದ ಸಂಗತಿಗಳು ನಮಗೆ ಗೊತ್ತಿವೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿರುವಂತಹ ನಮ್ಮ ಮೂಲಭೂತ ಸಂವಿಧಾನ ಬದ್ಧವಾದ ಹಕ್ಕುಗಳನ್ನು ಕಸಿದುಕೊಳ್ಳುವುದು ಸರಿ ಅಲ್ಲವೆಂದು ಹೇಳಿ ಕೋರ್ಟ್‌ಗಳು ನಿರಂತರವಾಗಿ ಸರ್ಕಾರಕ್ಕೆ ಛೀಮಾರಿ ಹಾಕುತ್ತಿವೆ. ಆದರೂ ಕೂಡ ದಮನಕಾರಿ ಪ್ರವೃತ್ತಿ ಈ ರಾಜ್ಯದಲ್ಲಿ ನಡೆಯುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬ ಎಸ್‌ಪಿ ಇದ್ದರು. ಮೊನ್ನೆ ಮೊನ್ನೆ ಅವರಿಗೆ ಟ್ರಾನ್ಸ್‌ಫರ್ ಆಯಿತು. ಇದು ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿತ್ತು. ಎರಡು ದಿವಸಗಳಲ್ಲಿ ಅವರೇ ಪುನಃ ಅಲ್ಲಿ ಎಸ್‌ಪಿ ಆಗಿ ಮುಂದುವರೆದಿದ್ದಾರೆ. ಮುಂದುವರೆದ ಮರುದಿವಸ ಯಾರೆಲ್ಲಾ ಒಂದು ರೀತಿಯಲ್ಲಿ ರಾಜಕೀಯವಾಗಿ ಆಡಳಿತ ಯಂತ್ರದ ಪರವಾಗಿ ಬೇರೆ ಪಕ್ಷದವರು ಇದ್ದಾರೆ ಅವರ ಮೇಲೆ ಸವಾರಿ ಮಾಡುವ ಕೆಲಸಗಳು ನಡೆದಿವೆ. ಕಲ್ಲಡ್ಕದಲ್ಲಿ ನಿರಪರಾಧಿ ಹಿಂದುಗಳನ್ನು ಕರೆದುಕೊಂಡು ಹೋಗಿ ಅಮಾಯಕರಿಗೆ ಸಿಕ್ಕಾಬಟ್ಟೆ ಬಡಿದು ಅವರ ಮೇಲೆ ಕೇಸ್ ಹಾಕುವ ಕೆಲಸ, ಆಗಿದೆ. ಜಿಲ್ಲಾ ಪಂಚಾಯಿತಿ ಸದಸ್ಯರು ಒಬ್ಬರು ಇದ್ದಾರೆ, ಇವತ್ತಿಗೂ ಕೂಡ ಯಾರು ಬೇಕಾದರೂ ಅವರನ್ನು ತನಿಖೆ ಮಾಡಬಹುದು, ಆ ಜಿಲ್ಲಾ ಪಂಚಾಯಿತಿ ಸದಸ್ಯ ಎಷ್ಟು ನಿಷ್ಪಕ್ಷಪಾತವಾದಿ, ಎಷ್ಟು ಸಜ್ಜನಿಕೆಯ ಸಾಮಾನ್ಯ ಮನುಷ್ಯ ಎಂದರೆ ಅವನ ಮೇಲೆ ಕೇಸ್ ಹಾಕಲಿಕ್ಕೆ ಬೆಳಿಗ್ಗೆ ಆರು ಗಂಟೆಗೆ ಅವರ ಮನೆಗೆ ಪೊಲೀಸ್ ಧಾಳಿ. ರಮಾನಾಥ್ ರೈ ಅವರೇ, ಈ ಬಗ್ಗೆ ನೀವು ಉತ್ತರ ಕೊಡುವಾಗ ಹೇಳಿ.

**ಗೊಂದಲ**

**ಶ್ರೀ ಬಿ. ರಮಾನಾಥ್ ರೈ** : ಒಬ್ಬ ಪೊಲೀಸ್ ಅಧಿಕಾರ ಅವನ ಕರ್ತವ್ಯ ಮಾಡಿದರೆ ಈ ರೀತಿಯಾಗಿ ಅವರ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡಬಾರದು. ನಾವು ಯಾವುದೇ ಜಾಗದಲ್ಲಿ, ಯಾವುದೇ ರೀತಿಯಲ್ಲಿ ನಿಮ್ಮ ತನಿಖೆ ನಡೆಸುವುದಾದರೆ ನಡೆಸಿ, ನಾವು ದೇವರ ಮೇಲೆ ಪ್ರಮಾಣ ಮಾಡುತ್ತೇವೆ, ಯಾವ ಅಧಿಕಾರಿಯ ಕೈವಾಡವೂ ಇಲ್ಲ. ಪೊಲೀಸರ ಕರ್ತವ್ಯ ಏನಿದೆ ಅದನ್ನು ಅವರು ಮಾಡಿದ್ದಾರೆ. ಆ ಕರ್ತವ್ಯ ಮಾಡಿದ ಮೇಲೆ ಕೂಡ ಸುಮ್ಮನೆ ಏಕೆ ಆರೋಪ ಮಾಡುತ್ತಿದ್ದೀರಿ?

**ಶ್ರೀ ಡಿ.ವಿ. ಸದಾನಂದಗೌಡ** : ನಾನು ನಿಮ್ಮ ಮೇಲೆ ಏನೂ ಆರೋಪ ಮಾಡಲಿಲ್ಲ.

**ಶ್ರೀ ಬಿ. ರಮಾನಾಥ್ ರೈ** : ಆಡಳಿತ ಪಕ್ಷ ಎಂದರೆ ಯಾರು? ಅವರು ಜವಾಬ್ದಾರಿಯಿಂದ ಕರ್ತವ್ಯ ಮಾಡಲಿಕ್ಕೆ ಇಲ್ಲವೇ.

**ಗೊಂದಲ**

ಈ ವಿಚಾರದಲ್ಲಿ ನಾವು ಯಾವುದೇ ಜಾಗದಲ್ಲಿ ಬೇಕಾದರೆ ಪ್ರಮಾಣ ಮಾಡಲಿಕ್ಕೆ ತಯಾರಿದ್ದೇವೆ. ಸುಮ್ಮನೆ ರಾಜಕೀಯ ಮಾಡಿಕೊಂಡು ತಪ್ಪು ಮಾಡಿ ಯಾರನ್ನೋ ಹೊಣೆಗಾರರನ್ನಾಗಿ ಮಾಡಬೇಡಿ. ನಿಮ್ಮ ತಪ್ಪು ಆಗಿದ್ದರೆ ಒಪ್ಪಿಕೊಳ್ಳಿ.

**ಶ್ರೀ ಡಿ.ವಿ. ಸದಾನಂದಗೌಡ** : ನಾನು ವೈಯಕ್ತಿಕವಾಗಿ ಏನೂ ಹೇಳಲಿಲ್ಲ. ಸುಮ್ಮನೆ ಏಕೆ ಮೈಮೇಲೆ ಹಾಕಿಕೊಳ್ಳುತ್ತೀರಿ?

**ಅಧ್ಯಕ್ಷರು** : ಅವರು ತಮ್ಮ ಮೇಲೆ ಏನೂ ಹೇಳಲಿಲ್ಲ.

**ಶ್ರೀ ಬಿ. ರಮಾನಾಥ್ ರೈ** : ಆಡಳಿತ ಪಕ್ಷದವರು ದಮನ ಮಾಡಲಿಕ್ಕೆ ಹೊರಟಿದ್ದಾರೆ ಎಂದರೆ, ನಾವು ಯಾವುದಕ್ಕೂ ಹಸ್ತಕ್ಷೇಪ ಮಾಡಿಲ್ಲವೆಂದು ಪ್ರಮಾಣಪೂರ್ವಕವಾಗಿ ನಮ್ಮ ಪಕ್ಷದವತಿಯಿಂದ ಹೇಳುತ್ತೇನೆ. ಸುಮ್ಮನೆ ಇವರು ಕಪೋಲ ಕಲ್ಪಿತ ಸುಳ್ಳನ್ನು ಪ್ರತಿಪಾದನೆ ಮಾಡುತ್ತಿದ್ದಾರೆ. ಅದನ್ನು ನಾನು ಖಡಾಖಂಡಿತವಾಗಿ ವಿರೋಧಿಸುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ** : ಸುಮಾರು ವರ್ಷಗಳಿಂದ ನಿರಂತರವಾಗಿ ಇರುವಂತಹ ಒಬ್ಬ ಪೊಲೀಸ್ ವರಿಷ್ಠ ಅಧಿಕಾರಿಯ ವರ್ಗಾವಣೆಯಾಗಿದೆ. ಅವರ ಮೇಲೆ ಹಿಂದಿನಿಂದಲೂ ಹೈಕೋರ್ಟಿನಿಂದ ಸ್ಟ್ರಿಕ್ಚರ್ಸ್ ಪಾಸ್ ಆದ ಘಟನೆಗಳು ಇವೆ. ಟ್ರಾನ್ಸ್‌ಫರ್ ಆದ ಎರಡು ದಿವಸಗಳಲ್ಲಿ ಏಕೆ ಅವರನ್ನು ಮತ್ತೆ ಅಲ್ಲೇ ಉಳಿಸಬೇಕಾಗಿತ್ತು?

**ಶ್ರೀ ಎನ್. ಯೋಗೀಶ್ ಭಟ್** : ಅವರು ಉಲ್ಲೇಖ ಮಾಡಿದ್ದರ ಬಗ್ಗೆ ಬಹುಶಃ ಕ್ರೈಮ್‌ಗೆ ಸಂಬಂಧಪಟ್ಟವು, ಪೊಲೀಸ್ ವ್ಯವಸ್ಥೆಗೆ ಸಂಬಂಧಪಟ್ಟವು, ದಕ್ಷಿಣ ಕನ್ನಡ ಜಿಲ್ಲೆ ಪೊಲೀಸ್ ವ್ಯವಸ್ಥೆ ಬಗ್ಗೆ ಸಂಶೋಧನೆ ಮಾಡುವ ವಿಷಯ ಇದು. ಏಕೆಂದರೆ, 15 ವರ್ಷಗಳಿಂದ ಅಲ್ಲಿರುವಂತಹ ಪೊಲೀಸ್ ಅಧಿಕಾರಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಟ್ರಾನ್ಸ್‌ಫರ್ ಮಾಡುವುದಕ್ಕಾಗುತ್ತಿಲ್ಲ. ಅಷ್ಟು ಹಸ್ತಕ್ಷೇಪವಾಗುತ್ತಿದೆ. ಎರಡು ಮನೆಗಳು ಎರಡು ಮದುವೆ ಆಗುವ ಹಂತಕ್ಕೆ ಬಂದಿವೆ.

**ಶ್ರೀ ಬಿ. ರಮಾನಾಥ್ ರೈ** : ರೌಡಿ ನಿಗ್ರಹ ದಳಕ್ಕೆ ಒಬ್ಬ ಇನ್ ಸ್ಪೆಕ್ಟರ್ ಬಂದಿದ್ದಾನೆ, ಒಬ್ಬ ಪ್ರಾಮಾಣಿಕ ವ್ಯಕ್ತಿ ಎಂದು ಎಲ್ಲಾ ಜನರಿಂದ ಹೆಸರು ಪಡೆದುಕೊಂಡಿದ್ದಾರೆ. ಒಬ್ಬ ರೌಡಿ ನಿಗ್ರಹ ದಳಕ್ಕೆ ಒಬ್ಬ ಪೊಲೀಸ್ ಅಧಿಕಾರಿ ಬಂದಿದ್ದಾನೆ ವಿನಯ್‌ಗಾವ್‌ಕರ್ ಎಂದು ಅವನ ಪ್ರಾಮಾಣಿಕತೆ ಬಗ್ಗೆ ಇನ್ನೊಂದು ಮಾತು ಇಲ್ಲ. ಆದ್ದರಿಂದಾಗಿ ಯಾವ ಒತ್ತಡವೂ ಅವರ ಮೇಲೆ ಪರಿಣಾಮ ಬೀರುವುದಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ** : ಈ ರಾಜ್ಯದಲ್ಲಿ ಇರುವಂತಹ ಆಡಳಿತ ವೈಖರಿ ಯಾವ ರೀತಿ ಇದೆ ಎಂದರೆ; ಒಂದು, ಅಧಿಕಾರಿಗಳ ಮೇಲೆ ಅವರಿಗೆ ಹತೋಟಿ ಇಲ್ಲ. ಅಧಿಕಾರಿಗಳು ಯಾವ ರೀತಿ ವರ್ತನೆ ಮಾಡಬೇಕೆಂದು ಸೂಚ್ಯವಾಗಿ ಅವರಿಗೆ ತಿಳುವಳಿಕೆ ಇದ್ದರೆ, ಆ ರೀತಿ ಮಾಡಿದರೆ ಮಾತ್ರ ಅವರಿಗೆ ಶಹಭಾಸ್‌ಗಿರಿ ಸಿಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಎರಡೂವರೆ ವರ್ಷಗಳಿಂದ ನಿರಂತರವಾಗಿ ನಡೆದ ಘಟನೆಗಳನ್ನು ನೋಡಿದರೆ ಹಾಡು ಹಗಲಿನಲ್ಲಿ ಒಂದೆರಡು

– ಮೂರು ಕೊಲೆಗಳು, ಸಾರಾಸಗಟು ಕೊಲೆಗಳು ದಿನ ನಿತ್ಯ 8–10 ಕೊಲೆಗಳು ಆಗಿವೆ. ಕಾನೂನು ಸುವ್ಯವಸ್ಥೆ ಎಷ್ಟು ಅಧ : ಪತನಕ್ಕೆ ಹೋಗಿದೆ ಎಂದರೆ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಒಂದು ರೀತಿಯ ಗೂಂಡಾಗಿರಿಯ ಕಾರಸ್ಥಾನವಾಗಿದೆ. ಆದರೂ ಈ ಎಸ್‌ಪಿ ಟ್ರಾನ್ಸ್‌ಫರ್ ಆದವರನ್ನು ಅಲ್ಲಿಯೇ ಉಳಿಸಿಕೊಂಡಿದ್ದಾರೆ, ಇದರ ಔಚಿತ್ಯವೇನು? ನಾನು ಪ್ರಶ್ನೆ ಮಾಡುವಂಥದ್ದು ಅವರನ್ನು ಏಕೆ ಅಲ್ಲಿ ಉಳಿಸಿಕೊಳ್ಳಬೇಕು? ಒಂದು ವೇಳೆ ಇಷ್ಟೆಲ್ಲ ಆಗಿದೆಯೆಂದು ಗೊತ್ತಾದ ಮೇಲೆ ಕೂಡ ಅವರನ್ನು ಏಕೆ ಉಳಿಸಿಕೊಳ್ಳಬೇಕು? ನಿರಂತರವಾಗಿ ಅವರ ಮೇಲೆ ಬೇಕಾದಷ್ಟು ಆರೋಪಗಳು ಇದ್ದಾಗ ಸಹಿತ ಒಮ್ಮೆ ಟ್ರಾನ್ಸ್‌ಫರ್ ಆದವರನ್ನು ಮತ್ತೆ ಏಕೆ ಅಲ್ಲಿಯೇ ಉಳಿಸಿಕೊಳ್ಳಬೇಕು? ಅವರನ್ನು ಉಳಿಸಿಕೊಂಡ ಮರುದಿವಸ ದಮನಕಾರಿ ಪ್ರವೃತ್ತಿಗೆ ಪ್ರಚೋದನೆ ಆಗುವುದು, ಅವರನ್ನು ಉಳಿಸಿಕೊಂಡದ್ದಕ್ಕೆ ಸರ್ಕಾರಕ್ಕೆ ರಿವಾರ್ಡ್ಸ್. ಯಾರು ಸರ್ಕಾರದ ವಿರುದ್ಧ ಮಾತನಾಡುತ್ತಾರೆ, ಅಂತಹವರ ಮೇಲೆ ಕೇಸ್ ಮಾಡುವುದು, ಇದು ಸರಿಯಲ್ಲವೆಂದು ನಾನು ಇವತ್ತು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಆದ್ದರಿಂದ, ದಯಮಾಡಿ ತಾವು ಇದನ್ನು ಸಿಓಡಿಗೆ ರೆಫರ್ ಮಾಡಿ.

**ಶ್ರೀ ಬಿ. ರಮಾನಾಥ್ ರೈ** : ನಾನು ಹೇಳುತ್ತೇನೆ, ನಮಗೆ ಧರ್ಮಸ್ಥಳದ ಮಂಜುನಾಥ ಸುಪ್ರೀಂ. ನಾನು ಅಲ್ಲಿ ಪ್ರಮಾಣ ಮಾಡುತ್ತೇನೆ. ನೀವೂ ಕೂಡ ಅದರಲ್ಲಿ ಯಾರ ಕೈವಾಡವೂ ಇಲ್ಲವೆಂದು ಪ್ರಮಾಣ ಮಾಡಬೇಕು. ನಮ್ಮ ಜಿಲ್ಲೆಯ ಬಗ್ಗೆ ನನಗೆ ವಿಶ್ವಾಸ ಇದೆ.

**ಗೊಂದಲ**

**ಶ್ರೀ ಜಗದೀಶ್ ಶೆಟ್ಟರ್** : ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಹಾಗಾಯಿತು.

**ಗೊಂದಲ**

**ಅಧ್ಯಕ್ಷರು** : ಸದಾನಂದ ಗೌಡರು ಹೇಳಿದ್ದನ್ನು ಮಾತ್ರ ಬರೆದುಕೊಳ್ಳಿ.

**ಶ್ರೀ ಡಿ.ವಿ. ಸದಾನಂದಗೌಡ** : ಇವರ ಕಾರ್ಯವೈಖರಿಯ ಬಗ್ಗೆ ನಾನು ಒಂದು ಹೇಳುತ್ತೇನೆ. ಇವರ ಬಿಸಿ ಊಟದ ಕಾರ್ಯಕ್ರಮಕ್ಕೆ ಉಸ್ತುವಾರಿ ಯಾರು? ರೇವಣ್ಣಸಿದ್ದಯ್ಯನವರು ಬಿಸಿ ಊಟದ ಉಸ್ತುವಾರಿಯನ್ನು ನೋಡಿಕೊಳ್ಳುವವರು. ಈ ಕಾರ್ಯಕ್ರಮಕ್ಕೆ ಎಷ್ಟು ಜನ ಉಸ್ತುವಾರಿ ಇದ್ದಾರೆ? ತಾಲ್ಲೂಕು ಪಂಚಾಯಿತಿಯವರು ಉಸ್ತುವಾರಿ ನೋಡುತ್ತಾರೆ, ಗ್ರಾಮ ಪಂಚಾಯಿತಿಯವರು ನೋಡುತ್ತಾರೆ. ಶಾಲಾ ಮೇಲುಸ್ತುವಾರಿ ಸಮಿತಿಯವರು ನೋಡುತ್ತಾರೆ, ಜಿಲ್ಲಾ ಉಸ್ತುವಾರಿ ಸಚಿವರೂ ನೋಡುತ್ತಾರೆ, ಶಾಸಕರೂ ನೋಡುತ್ತಾರೆ. ಈಗ ಪುನಃ ರೇವಣ್ಣಸಿದ್ದಯ್ಯನವರು ಅದಕ್ಕೆ ಮೇಲುಸ್ತುವಾರಿ ನೋಡಿಕೊಳ್ಳುವುದು. ಏಕೆ ಸರ್ ಇದು? ಸ್ಟೇಟ್ ಮಿನಿಸ್ಟರ್ ರ್‍ಯಾಂಕ್‌ನ ಬಿಳಿ ಆನೆಗಳನ್ನು ತಯಾರಿಸುವಂಥದ್ದು ಈ ರಾಜ್ಯ ಸರ್ಕಾರದ ಕೆಲಸವಾಗಿದೆ. ಇಷ್ಟು ಉಸ್ತುವಾರಿ ಮೇಲೆ ಇನ್ನೊಂದು ಉಸ್ತುವಾರಿ ರೇವಣ್ಣನವರು ಇದ್ದಾರೆ. ಇದು ಏಕೆ ಬೇಕಾಗಿತ್ತು? ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ನಾನು ಒಂದು ಹೇಳುವುದು, ಕಳೆದ ಬಾರಿ ಭೀಮನ ಅಮವಾಸ್ಯೆ, ಈ ಭೀಮನ ಅಮವಾಸ್ಯೆ ನಿರಂತರವಾಗಿ ಇರುವಂಥದ್ದು. ನಿನ್ನೆ ಕೂಡ ಒಂದು ದೊಡ್ಡ ದುರಂತವಾಗಿದೆ. ಕಳೆದ ಎರಡು ವರ್ಷಗಳಲ್ಲಿ ಆಗಿತ್ತು, ನಿನ್ನೆ ಬೈರೇಗೌಡರದ್ದು ಆಗಿದೆ.

**10.40 ಎಎಂ**

ಆದರೆ ಇವರ ಕಾರ್ಯವೈಖರಿ ಹೇಗಿದೆ ಎಂದರೆ, ಭಾರೀ ಚೆನ್ನಾಗಿ ಅಧಿಕಾರಿಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳುತ್ತೇವೆಂದು ಹೇಳಿ. ಇವರು ಮಾತನಾಡುತ್ತಾರಲ್ಲ ಇದಾ, ಇವರು ಮಾಡಿದಂತಹ

ವ್ಯವಸ್ಥೆಗಳು? ಶಿವಮೊಗ್ಗದ ಆರ್‌ಟಿಒ ಎಷ್ಟು ವರ್ಷದಿಂದ ಅಲ್ಲಿ ಇದ್ದಾರೆ? ನಾಲ್ಕು ವರ್ಷದಿಂದ ನಿರಂತರವಾಗಿ ಅಲ್ಲೇ ಇದ್ದಾರೆ. ಅವರಿಗೆ ಮೊನ್ನೆ ಟ್ರಾನ್ಸ್‌ಫರ್ ಆಯಿತು. ಮತ್ತೆ ಮಾರನೆ ದಿವಸ? ಸರ್, ಈ ಸರ್ಕಾರದ ಒಂದು ವ್ಯವಸ್ಥೆ ನೋಡಿದರೆ ಯಾರ್‍ಯಾರು ಎಲ್ಲೆಲ್ಲಿ ಹೇಗೆ ಹೇಗೆ ಉಳಿಯಬೇಕು ಎಂದು ಮಾಡುವಂತಾದ್ದರ ಬಗ್ಗೆ ನಿರಂತರವಾಗಿ ನಡೆಯುತ್ತಿದೆ. ಈ ಸಚಿವಾಲಯದಲ್ಲಿ ಇರುವಂತಹ ಒಂದು ಭ್ರಷ್ಟಾಚಾರ ಏನಿದೆ ಇದೆ ಇದರ ಬಗ್ಗೆ ನಾನು ಲೋಕಾಯುಕ್ತರಿಗೆ ವಿನಂತಿ ಮಾಡುತ್ತೇನೆ, ಈ ಸಚಿವಾಲಯದಲ್ಲಿ ಇರುವಂತಹ.

**ಅಧ್ಯಕ್ಷರು** : 25 ನಿಮಿಷ ನಿಮ್ಮೊಬ್ಬರಿಗೆ ಆಯಿತು. ನಿಮ್ಮ ಪಾರ್ಟಿಗೆ ಕೊಟ್ಟ ಸಮಯ ಕೈಬಿಟ್ಟು ಹೋಗುತ್ತದೆ.

**ಶ್ರೀ ಡಿ.ವಿ. ಸದಾನಂದಗೌಡ** : ಇವತ್ತು ಇಲ್ಲಿ ಟ್ರಾನ್ಸ್‌ಫರ್ ವಿಚಾರದಲ್ಲಿ ಬರುವಂತಹ ಸಂಗತಿಗಳು. ಆ ಕೆಳಹಂತದಿಂದ ಹಿಡಿದು ಮೇಲಿನ ಹಂತದವರೆಗೆ ಪೇಪರ್‌ಗಳು ಮೂವ್ ಆಗಬೇಕಾದರೆ ಎಲ್ಲಾ ಕಡೆಗೆ ಲಂಚ ಭ್ರಷ್ಟಾಚಾರ. ಬಹುಶಃ ಇತ್ತೀಚಿನ ದಿನಗಳಲ್ಲಿ ಯಾವುದೇ ರಾಜ್ಯದಲ್ಲಿ ಇಲ್ಲದೇ ಇರುವಂತಹ ಅತ್ಯಂತ ದೊಡ್ಡ ಭ್ರಷ್ಟಾಚಾರದ ಕೂಪ ಕರ್ನಾಟಕ ರಾಜ್ಯದ ಸಚಿವಾಲಯದಲ್ಲಿ ಇದೆಯೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಾನು ಲೋಕಾಯುಕ್ತದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಈ ಒಂದು ಭ್ರಷ್ಟಾಚಾರವನ್ನು ಪ್ರಥಮ ಹಂತದಲ್ಲಿ ತೆಗೆದು ಹಾಕುವಂತಹ ಕೆಲಸ ಕಾರ್ಯಗಳು ಆಗಬೇಕಾಗಿದೆ. ಒಟ್ಟಾರೆ ಆಡಳಿತ ವ್ಯವಸ್ಥೆಯಲ್ಲಿ ನೀವು ಈ ಟ್ರಾನ್ಸ್‌ಫರ್ ಆರ್ಡರ್ ನಿಲ್ಲಿಸಿ.

ಗೊಂದಲ

**ಶ್ರೀ ಸಿ.ಆರ್. ಸಗೀರ್ ಅಹಮದ್** : ಮಾನ್ಯ ಅಧ್ಯಕ್ಷರೆ, ನೀವು ಕೇಳಬೇಡಿ ಎಂದರೆ ನಾನು ಹೇಗೆ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುತ್ತದೆ?

**ಅಧ್ಯಕ್ಷರು** : ಸ್ಪೆಸಿಫಿಕ್ ಎಗ್ಸಾಂಪಲ್ ಇದ್ದರೆ ಹೇಳಿ. ಸ್ವೀಪಿಂಗ್ ಚಾರ್ಜ್‌ಸ್ ಮಾಡಬೇಡಿ. ಸ್ಪೆಸಿಫಿಕ್ ಎಗ್ಸಾಂಪಲ್ ಇದ್ದರೆ ಹೇಳಿ.

ಗೊಂದಲ

**ಶ್ರೀ ಆರಗ ಜ್ಞಾನೇಂದ್ರ** : ಇದ್ದದ್ದು ಇದ್ದ ಹಾಗೆ ಹೇಳಿದರೆ ಎದ್ದು ಬಂದು ಒದ್ದ ಹಾಗೆ ಆಯಿತಲ್ಲಾ.

ಗೊಂದಲ

**Mr. Speaker :** Mr. Jnanendra, I never allowed you to talk. ಮಧ್ಯೆ ಮಾತನಾಡಬೇಡಿ. ನೀವು ಮುಗಿಸಿ, ನಿಮ್ಮ ಪಾರ್ಟಿ ಟೈಂ ಈಗಾಗಲೇ ಮುಗಿದು ಹೋಯಿತು.

ಗೊಂದಲ

**ಶ್ರೀ ಡಿ.ವಿ. ಸದಾನಂದಗೌಡ** : ಸರ್ಕಾರ ಯಾವುದೇ ಪ್ರಯತ್ನಗಳನ್ನು ಮಾಡುತ್ತಿಲ್ಲ, ಆ ಪ್ರಯತ್ನಗಳನ್ನು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಅಧ್ಯಕ್ಷರು** : ತುಂಬಾ ಒಳ್ಳೆಯದು.

**ಶ್ರೀ ಆರ್.ವಿ. ದೇಶಪಾಂಡೆ** : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಅಪವಾದ ಮಾಡುವ ಹಕ್ಕಿದೆ. ಸ್ವೀಪಿಂಗ್ ಆದರೆ ಅದು ಸ್ಪೆಸಿಫಿಕ್ ಆಗಿ ಇರಬೇಕು.

**ಗೊಂದಲ**

**ಶ್ರೀ ಆರಗ ಜ್ಞಾನೇಂದ್ರ** : ಸ್ಪೆಸಿಫಿಕ್ ಆಗಿ ಹೇಳಿದ್ದು ಸರ್ ಅವರು, ವೇಗ್ ಆಗಿ ಹೇಳಲಿಲ್ಲ.

**ಗೊಂದಲ**

**ಶ್ರೀ ಆರ್.ವಿ. ದೇಶಪಾಂಡೆ** : ಸ್ವೀಪಿಂಗ್ ಚಾರ್ಜ್‌ಸ್ ಸ್ಪೆಸಿಫಿಕ್ ಆಗಿ ಹೇಳಿ.

**ಅಧ್ಯಕ್ಷರು** : ಪಾಪಣ್ಣನವರೆ, ತಾವು ಮಾತನಾಡಬೇಕೆಂದು ಎದ್ದಿರಲ್ಲಾ, ನೀವು ಐದು ನಿಮಿಷ ಮಾತನಾಡಿ. ನಿಮ್ಮ ಪಾರ್ಟಿಯವರು ಒಬ್ಬರಿಗೆ ಕೊಟ್ಟ ಹಾಗೆ ಆಗುತ್ತದೆ.

**ಶ್ರೀ ವಿ. ಪಾಪಣ್ಣ (ಹುಣಸೂರು)** : ಮಾನ್ಯ ಅಧ್ಯಕ್ಷರೆ, ಈ ಗೊಂದಲದಲ್ಲಿ ನಾನು ಬೇರೆ ಕಡೆ ನಿಗಾ ಇಟ್ಟಿದ್ದೆ. ಇವರು ಯಾವಾಗಲೂ ಬಹಳ ಗೊಂದಲ ಮಾಡುತ್ತಾರೆ. ಇಡೀ ಸಭೆಯನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದು ಕೂಡದು. ಈ ರಾಜ್ಯದ ಹಣದ ಪರಿಸ್ಥಿತಿ ಬಗ್ಗೆ ಬೇಡಿಕೆಗಳ ಮೇಲೆ ಚರ್ಚೆ ಮಾಡುತ್ತಿದ್ದು, ಆರ್ಥಿಕವಾಗಿ ಎಲ್ಲಿ ಲೋಪವಾಗಿದೆ ಹೇಳಿ ಎಂದರೆ ಇವರು ಬೇರೆ ರೀತಿಯಲ್ಲಿ ಚರ್ಚೆ ಮಾಡುತ್ತಿದ್ದಾರಲ್ಲಾ ಅದರಿಂದ ನಮಗೂ ಗೊಂದಲವಾಯಿತು.

**ಅಧ್ಯಕ್ಷರು** : ಅದನ್ನು ನಾನು ನೋಡಿಕೊಳ್ಳುತ್ತೇನೆ, ನೀವು ಮಾತನಾಡಿ.

**ಶ್ರೀ ಆರಗ ಜ್ಞಾನೇಂದ್ರ** : ಇಷ್ಟು ವರ್ಷ ಶಾಸಕರಾಗಿ ಅವರಿಗೆ ಅಂದಾಜಾಗುತ್ತಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ** : ಮಾನ್ಯ ಅಧ್ಯಕ್ಷರೆ, ಪಾಪಣ್ಣನವರಿಗೆ ಬಹುಶಃ ಕೊನೆಯ ಹಂತಕ್ಕೆ ಜ್ಞಾನೋದಯವಾಗಿದೆ.

**ಶ್ರೀ ವಿ. ಪಾಪಣ್ಣ** : ಮಾನ್ಯ ಅಧ್ಯಕ್ಷರೆ, ತಾವು ನಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ.

**ಅಧ್ಯಕ್ಷರು** : ನೋಡಿ, ದಯವಿಟ್ಟು ಮಧ್ಯದಲ್ಲಿ ಯಾರೂ ಎದ್ದು ನಿಂತುಕೊಳ್ಳಬೇಡಿ. ಅವರು ಈಲ್ಡ್ ಆಗಿಲ್ಲ. ನೀವು ಮಾತನಾಡುವುದಿದ್ದರೆ ಐದು ನಿಮಿಷ ಸಮಯ ಕೊಡುತ್ತೇನೆ, ಮಾತನಾಡಿ.

**ಶ್ರೀ ವಿ. ಪಾಪಣ್ಣ** : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳಾದಂತಹ ಶ್ರೀ ಎಸ್.ಎಂ. ಕೃಷ್ಣ ಅವರ ಸರ್ಕಾರದಲ್ಲಿ ನಾಲ್ಕು ವರ್ಷಗಳ ಅವಧಿಯಲ್ಲಿ ಯಾವ್ಯಾವ ಉತ್ತಮವಾದಂತಹ ಕೆಲಸಗಳಾಗಿವೆ? ಇನ್ನು ಯಾವ್ಯಾವ ಕೆಲಸಗಳು ಆಗಬೇಕು ಎನ್ನುವಂತಹದ್ದನ್ನು ಮತ್ತು ಕೆಲಸದಲ್ಲಿ ಆಗಿರತಕ್ಕಂಥ ಲೋಪದೋಷಗಳನ್ನು ಪಟ್ಟಿ ಮಾಡಿ ಹೇಳಲಿ. ಆದರೆ ಇಲ್ಲಸಲ್ಲದ ಆರೋಪ ಮಾಡುವಂತಾದ್ದು ಸೂಕ್ತವಲ್ಲವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಹಿಂದೆ ಮಾಡಿದಂತಹ ಸರ್ಕಾರ ನನ್ನ ಕ್ಷೇತ್ರದಲ್ಲೇ ಭಾರೀ ನೀರಾವರಿ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆಯಲ್ಲಿ ಮಾಡಿದಂತಹ ದೊಡ್ಡ ಆರೋಪವನ್ನು ತನಿಖೆ ಮಾಡಿ ಯಾರು ಹಿಂದೆ ಕೆಲಸವನ್ನೇ ಮಾಡದೆ ಪಟ್ಟಿಯನ್ನು ಹಾಗೂ ಬಿಲ್ಲನ್ನು ಸರ್ಕಾರಕ್ಕೆ ಮಂಡಿಸಿ ಹಣವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಂತಹ ಸಮಯದಲ್ಲಿ ಆ ಒಂದು ತನಿಖೆ ಮಾಡಿದನಂತರ, ಗುತ್ತಿಗೆದಾರರುಗಳು 28 ಪರ್ಸೆಂಟ್ ಲೆಸ್‌ನಲ್ಲಿ ಕೊಡಿ ಎಂದು ಪ್ರಮಾಣ ಪತ್ರವನ್ನು ಸರ್ಕಾರದ ಮುಂದೆ ಇಟ್ಟರು. ಅಂದರೆ ಒಂದು ನೂರು ರೂಪಾಯಿಗೆ 28 ರೂಪಾಯಿ ಲೆಸ್. ಹಾರಂಗಿ ಯೋಜನೆಯಲ್ಲಿ ಸುಮಾರು ಎರಡೂವರೆ ಕೋಟಿ ರೂಪಾಯಿಗಳ ಕೆಲಸ – ಇವತ್ತು ಈ ಸರ್ಕಾರ

ಬಂದನಂತರ ಈ ಒಂದು ಉತ್ತಮವಾದಂತಹ ಕೆಲಸವನ್ನು ಮಾಡಿದೆ. ಹಿಂದೆ ಇವರು ಎರಡೂವರೆ, ಮೂರು ಕೋಟಿ ರೂಪಾಯಿಗಳ ಬಿಲ್ ಮಾಡಿ ಭಾರೀ ನೀರಾವರಿ ಇಲಾಖೆಗೆ ಹಣವನ್ನೆಲ್ಲಾ ಕೊಟ್ಟು ಸಣ್ಣ ನೀರಾವರಿ ಇಲಾಖೆಗೆ ಕೇವಲ 6 ಲಕ್ಷ ರೂಪಾಯಿಗಳ ಅನುದಾನ ಬಿಡುಗಡೆ ಮಾಡಿದರೆ, ಈ ಸರ್ಕಾರ 2 ಕೋಟಿ 80 ಲಕ್ಷ ರೂಪಾಯಿಗಳಿಗೆ ಬಿಲ್ ಮಾಡಿತು. 6 ಲಕ್ಷ ರೂ.ಗಳ ಅನುದಾನ ಎಲ್ಲಿ, 2 ಕೋಟಿ 80 ಲಕ್ಷ ರೂಪಾಯಿಯ ಕೆಲಸ ಮಾಡಿದ್ದೆಲ್ಲಿ? ಅದನ್ನು ಈ ಸರ್ಕಾರ ಭರಿಸುವಂತಹ ಕೆಲಸ ಮಾಡಬೇಕಾಯಿತು. ಸಣ್ಣ ನೀರಾವರಿ ಇಲಾಖೆಯಲ್ಲಿ ಕೇವಲ ಮೂರು ವರ್ಷದ ಹಿಂದೆ ಮಾಡಿದಂತಹ ಲೋಪದ ಬಿಲ್ಲುಗಳನ್ನು ಕೊಡುವಂತಹ ಒಂದು ಕೆಲಸವನ್ನು ಈ ಒಂದು ಸರ್ಕಾರ ಮಾಡಬೇಕಾಯಿತು. ಈ ಒಂದು ಪ್ರಗತಿದಾಯಕವಾದ ಕೆಲಸ ಮಾಡುವುದಕ್ಕೆ ಮೂರು ವರ್ಷದಿಂದ ಸತತವಾಗಿ ಬರ ಬಂದಿರುವುದು ಅಡಚಣೆಯಾಗಿದೆ. ಈ ದಿಸೆಯಲ್ಲಿ ಎಲ್ಲರೂ ಸಹಕಾರ ಕೊಡಬೇಕು. ಒಂದು ಡಾ: ರಾಜ್‌ಕುಮಾರ್ ಅಪಹರಣ, ಸರ್ಕಾರಕ್ಕೆ ಆರ್ಥಿಕವಾಗಿ ಆದಾಯ ಕಡಿಮೆ ಇದೆ. ಎ.ಐ.ಸಿ.ಟಿ.ಇ ಸ್ಕೇಲ್ಸ್ ಕೊಡುವುದು; 23,000 ಜನ ಉಪಾಧ್ಯಾಯರ ನೇಮಕ. ಇದರ ವಿಚಾರದಲ್ಲಿ ನಾಲ್ಕು ಸಾವಿರ ಕೋಟಿ ರೂಪಾಯಿಗಳ ವೆಚ್ಚವನ್ನು ಸರಿದೂಗಿಸಿಕೊಂಡು ಈ ಸರ್ಕಾರ ಯಾವ ರೀತಿ ಮ್ಯಾನೇಜ್ ಮಾಡಿಕೊಂಡು ಉತ್ತಮವಾದಂತಹ ಆಡಳಿತ ಮಾಡುತ್ತಿದೆ ಎನ್ನುವುದನ್ನು ಗಮನಿಸಬೇಕು. ಹಿಂದೆ ಮಾನ್ಯ ಉಪ ಮುಖ್ಯಮಂತ್ರಿಯವರು ಬೆಂಗಳೂರಿನಿಂದ ಮೈಸೂರಿಗೆ ಏನಾದರೂ ಹೋಗಬೇಕಾದರೆ ಟ್ರೈನ್‌ನಲ್ಲಿ ಹೋಗುತ್ತಿದ್ದರು. ಇವತ್ತು ಕಾಣುವುದಿಲ್ಲವೆ ನಿಮಗೆ? ಇವತ್ತು ರಸ್ತೆಗಳು ಎಷ್ಟು ಅಭಿವೃದ್ಧಿಯಾಗಿವೆ ಎಂದರೆ ಇಡೀ ಕರ್ನಾಟಕದಾದ್ಯಂತ ರಸ್ತೆಗಳು ಚೆನ್ನಾಗಿ ಆಗಿವೆ.

**ಶ್ರೀ ಎಸ್. ಶಿವಣ್ಣ** : ಏನಿದು ........

**ಮಾನ್ಯ ಸದಸ್ಯರು** : ಅವಕಾಶ ಕೊಟ್ಟಿದ್ದಾರೆ ಹೇಳಲಿ.

**ಗೊಂದಲ**

**ಅಧ್ಯಕ್ಷರು** : ಅವರು ಮಾತನಾಡುವಾಗ ಡಿಸ್ಟರ್ಬ್ ಮಾಡಬೇಡಿ. ಶಿವಣ್ಣನವರೆ, ಅವರು ಮಾತನಾಡುವಾಗ ಏಕೆ ಡಿಸ್ಟರ್ಬ್ ಮಾಡುತ್ತೀರಿ?

**ಶ್ರೀ ಎನ್. ಸಂಪಂಗಿ** : ಮಾನ್ಯ ಅಧ್ಯಕ್ಷರೆ, ಹೊಸದಾಗಿ ಆಯ್ಕೆಯಾಗಿರತಕ್ಕಂಥ ಸದಸ್ಯರು ಮಾತನಾಡುವಾಗ ಇವರು ಆಗಾಗ ಎದ್ದುಬಿಟ್ಟು ಗಲಾಟೆ ಮಾಡುತ್ತಿದ್ದರೆ ಅವರು ಮಾತನಾಡುವುದಕ್ಕೆ ಯಾವ ರೀತಿ ಅವಕಾಶವಾಗುತ್ತದೆ? ನಿಮಗೆ ಅವಕಾಶ ಬಂದಾಗ ಮಾತನಾಡಿ.

**ಗೊಂದಲ**

**ಶ್ರೀ ವಿ. ಪಾಪಣ್ಣ** : ಮಾನ್ಯ ಅಧ್ಯಕ್ಷರೆ, ನಾನು ಇಷ್ಟಕ್ಕೆ ಮೀಸಲಾಗಬೇಕಾಗುತ್ತದೆ. ಕಾರಣವೇನೆಂದರೆ, ಕೇಂದ್ರ ಸರ್ಕಾರದವರು ಅವರ ಜೇಬಿನಿಂದ ಹಣ ತೆಗೆದು ಕರ್ನಾಟಕ ಸರ್ಕಾರಕ್ಕೆ ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರ ಒಂದೊಂದು ತಾಲ್ಲೂಕಿಗೆ ಎರಡೆರಡು ಸಡಕ್ ರೋಡ್‌ಗಳನ್ನು ಕೊಟ್ಟರು. ಬಾಕಿ ರಸ್ತೆಗಳೆಲ್ಲಾ ಕೇಂದ್ರ ಸರ್ಕಾರ ಮಾಡಿದೆಯಾ? ನನ್ನ ತಾಲ್ಲೂಕಿನಲ್ಲಿ 619 ಕಿಲೋಮೀಟರ್ ಜಿಲ್ಲಾ ಪಂಚಾಯತ್ ರಸ್ತೆ ಇದೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವಂತಹ ಪಿಡಬ್ಲ್ಯುಡಿ ರಸ್ತೆ 56 ಕಿಲೋಮೀಟರ್ ಇದೆ. ಮೈಸೂರು ರಸ್ತೆಯನ್ನು ಮೂರು ವರ್ಷಗಳ ಕಾಲ ಕೇಂದ್ರ ಸರ್ಕಾರ ಮೇಯಿಂಟೇನ್ ಮಾಡಿತ್ತೇ? ಕೇಂದ್ರ ಸರ್ಕಾರದಿಂದ ಸಡಕ್ ರಸ್ತೆಗಳನ್ನು ಬಿಟ್ಟರೆ, ಗುಣಕ್ಕೆ ಏಕೆ

ಮತ್ಸರದ ಮಾತನಾಡುತ್ತೀರಿ? ಇದಕ್ಕೆ ಉತ್ತರ ಹೇಳಿ. ಮೈಸೂರು ಬೆಂಗಳೂರು ರಸ್ತೆಗೆ ಕೇಂದ್ರ ಸರ್ಕಾರ ದುಡ್ಡು ಕೊಟ್ಟಿದೆಯೇ? ಏನು ಮಾತನಾಡುತ್ತೀರಿ ನೀವು......

**(ಗೊಂದಲ)**

**ಅಧ್ಯಕ್ಷರು** : ಶಿವಣ್ಣನವರೆ, ನೀವು ಮಾತನಾಡುವಾಗ ಅವರು ಡಿಸ್ಟರ್ಬ್ ಮಾಡಿದರೆ ನೀವು ಸುಮ್ಮನಿರುತ್ತೀರಾ.

**ಶ್ರೀ ಹೆಚ್.ಸಿ. ಬಸವರಾಜ್** : ಇನ್ನೊಬ್ಬರು ಕೆಲಸ ಮಾಡಿದ್ದನ್ನು ನೋಡಿ ಅಪ್ರೀಷಿಯೇಟ್ ಮಾಡುವುದನ್ನು ಕಲಿಯಬೇಕು ತಾವು.

**ಅಧ್ಯಕ್ಷರು** : ಶಿವಣ್ಣನವರೇ, ತಾವು ಮಾತನಾಡುವಾಗ ಅವರು ಏನಾದರೂ ಮಾತನಾಡಿದರೇ? ನೀವು ಈ ರೀತಿ ಇಂಟರ್‌ಪ್ರಿಟ್ ಮಾಡುತ್ತಿದ್ದರೆ, ಬೇರೆಯವರಿಗೆ ಮಾತನಾಡುವುದಕ್ಕೆ ಸಮಯ ಸಿಗದೇ ಹೋಗುತ್ತದೆ.

**ಶ್ರೀ ವಿ. ಪಾಪಣ್ಣ** : ನಾನು ಕೇಂದ್ರ ಸರ್ಕಾರಕ್ಕೆ ಲೋಪ ಮಾಡುತ್ತಿಲ್ಲ. ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಕೊಡುವಂತಹ ರೆವಿನ್ಯೂ ಒಳಗೆ ಇಷ್ಟು ಪರ್ಸಂಟೇಜ್ ಎಂದು ಕೊಟ್ಟು ಬಾಕಿ ಅವರೇ ಇಟ್ಟುಕೊಳ್ಳುತ್ತಾರೆ. ಸಂಪೂರ್ಣವಾಗಿ ನಮಗೆ ಕೊಡುವುದಿಲ್ಲ. ಏಕೆ ಅದನ್ನು ಹೇಳುತ್ತೇನೆ ಎಂದರೆ ಇವತ್ತು ಕೇಂದ್ರ ಸರ್ಕಾರ ಕೊಟ್ಟಿದ್ದು, ರಾಜ್ಯ ಸರ್ಕಾರ ಮಾಡಿರುವುದನ್ನು ಹೇಳುವುದಕ್ಕೆ ನಾವಿಲ್ಲಿ ಇರುವುದು. ಕೇಂದ್ರ ಸರ್ಕಾರ ಮಾಡಿದ್ದನ್ನು ಹೇಳಬೇಕಾದರೆ ನೀವು ಅಲ್ಲಿ ಹೇಳಿ. ನಾವು ಹಾಗೆ ಮಾಡಿದ್ದೇವೆ, ಹೀಗೆ ಮಾಡಿದ್ದೇವೆ ಎಂದು ಜನರ ಮುಂದೆ ಹೋಗಿ ಹೇಳಿ. ನಾವು ಇಲ್ಲಿ ಏನು ನಡೆಯುತ್ತದೆ ಎಂದು ಈ ಸರ್ಕಾರ ಮಾಡಿರುವುದನ್ನು ಹೇಳುತ್ತೇವೆ. ಇವತ್ತು ಶಾಲಾ ಕಟ್ಟಡಗಳು ನನ್ನ ಇಡೀ ತಾಲ್ಲೂಕಿನಲ್ಲಿ 273 ಶಾಲೆಗಳಿಗೆ ಸಂಪೂರ್ಣವಾಗಿ ಕಾಂಪೌಂಡ್, ಕುಡಿಯುವ ನೀರು ಹೀಗೆ ಸುಮಾರು 8 ಕೋಟಿ 30 ಲಕ್ಷ ರೂಪಾಯಿಯಲ್ಲಿ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಎಲ್ಲವನ್ನೂ ಕನ್ಸಲ್ಟ್ ಮಾಡಿ ಇವತ್ತು ಎಲ್ಲಾ ಕಡೆ ಶಾಲೆಗಳು ಅಭಿವೃದ್ಧಿಯಾಗಿವೆ. 'ನಲಿಕಲಿ' ಎಂದು ಇವತ್ತು ಶಾಲೆಗಳಿಗೆ ಹೋದರೆ ಕರ್ನಾಟಕ ರಾಜ್ಯದಲ್ಲಿ ಶಾಲೆಗಳನ್ನು ನೋಡಿದರೆ ದೇವಾಲಯಗಳು ಕಂಡಹಾಗೆ ಕಾಣುತ್ತವೆ. 'ನಲಿಕಲಿ' ಎಂದು ಇಡೀ ಮಕ್ಕಳಿಗೆ ಯಾರು ಅದರಲ್ಲಿ ವಿಜ್ಞಾನಿಗಳು, ಯಾರು ಹಿರಿಯರು, ಈ ನಾಡಿಗೆ ದುಡಿಯುವವರು ಯಾರು ಎಂದು ತೋರಿಸಿಕೊಟ್ಟಿರುವವರು ಶ್ರೀ ಎಸ್.ಎಂ. ಕೃಷ್ಣ ಅವರ ಸರ್ಕಾರ. ಇವರ ಸರ್ಕಾರ ಬಂದ ಮೇಲೆ ಈ ಶಾಲೆಗಳಲ್ಲಿ ಸ್ವಾತಂತ್ರ್ಯ ಬಂದ 50 ವರ್ಷದ ಇತಿಹಾಸದಲ್ಲೂ ಆ ರೀತಿಯ ಮುಖ ಕಾಣುತ್ತಿರಲಿಲ್ಲವೆಂದು ನೇರವಾಗಿ ಹೇಳುತ್ತೇನೆ. ಇವತ್ತು ಪಾರದರ್ಶಕವಾಗಿ ಸಾಮುದಾಯಕವಾಗಿ ಎಲ್ಲರು ಒಂದಾಗ ಬೇಕು ಎನ್ನುವ ವಿಚಾರದಲ್ಲಿ ಬಿಸಿ ಊಟದ ಕಾರ್ಯಕ್ರಮ ನಡೆಯುತ್ತಿದೆ. ನನ್ನ ತಾಲ್ಲೂಕಿನಲ್ಲಿರುವ ಶಾಲೆಗಳಲ್ಲಿ 12300 ಹೆಣ್ಣು ಮಕ್ಕಳು, 11800 ಗಂಡು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ನನ್ನ ತಾಲ್ಲೂಕಿನಲ್ಲಿ 500 ಹೆಣ್ಣು ಮಕ್ಕಳು ಜಾಸ್ತಿ ಇದ್ದಾರೆ, ಬೇಕಾದರೆ ಲೆಕ್ಕ ತರಿಸಿ ನೋಡಿ ಕಾರಣವೇನೆಂದರೆ ಇಂತಹ ಸಮಯದಲ್ಲಿ ಹೆಣ್ಣು ಮಕ್ಕಳು ವಿದ್ಯಾವಂತರಾಗಬೇಕು ಎಂದು ಸ್ತ್ರೀಶಕ್ತಿ, ಸ್ತ್ರೀಸಮೂಹಗಳಿಗೆ ಸಂಬಂಧಿಸಿದಂತೆ ಅಭಿವೃದ್ಧಿಯಾಗಿರುವುದನ್ನು ಒಂದೂ ಹೇಳುವುದಿಲ್ಲ, ಅಲ್ಲಿ ಯಾರೋ ಪೋಲೀಸ್ ದೂರು ಕೊಟ್ಟರಂತೆ, ಯಾರೋ ಹೊಡೆದಾಡಿದಂತೆ ಇವೆಲ್ಲವನ್ನು ಹೇಳುವುದು ಸೂಕ್ತವಲ್ಲವೆನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಂತಹ

ಸಂದರ್ಭದಲ್ಲಿ ಸರ್ಕಾರದ ವತಿಯಿಂದ ಹಿಂದೆ ಹಂಡ್ರೆಡ್‌ಲಾಕ್ಸ್ ಪ್ರೋಗ್ರಾಂ ಎಂದು ಬಂದು ಕಾಮಗಾರಿ ತೆಗೆದುಕೊಂಡಿದ್ದರು. ಮಾನ್ಯ ಘೋರ್ಪಡೆಯವರು ಜಿಲ್ಲಾ ಪಂಚಾಯ್ತಿಯ ವತಿಯಿಂದ ತಾಲ್ಲೂಕಿಗೆ 25 ಕಿ.ಮೀ ರಸ್ತೆಯನ್ನು ಗ್ರಾಮೀಣ ರಸ್ತೆಯಾಗಿ ಗ್ರಾಮದ ಸರಹದ್ದಿನಲ್ಲಿ ಮಾಡಿಸಿದರು. ಒಂದೇ ವರ್ಷ ಆಯಿತು, ಮತ್ತೆ ನಿಲ್ಲಿಸಿದರು; ಆ ದುಡ್ಡನ್ನು ಬೇರೆ ಕಡೆ ಕೊಟ್ಟಿದ್ದೀರಿ. ಆದರೂ ಕೂಡ ಅದನ್ನು ಮಾಡಬೇಕು. ಶಾಲೆ ಕೊಠಡಿಗಳ ವಿಷಯಕ್ಕೆ ಸಂಬಂಧಿಸಿದಂತೆ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ಮನವಿಯನ್ನು ಮಾಡುತ್ತೇನೆ, ಎಲ್ಲೆಲ್ಲಿ ಶಾಲೆಯ ಮಕ್ಕಳು ಎಷ್ಟಿದ್ದಾರೆ, ಉಪನ್ಯಾಸಕರು ಎಷ್ಟಿದ್ದಾರೆ ಕೊಠಡಿ ಸಂಖ್ಯೆ ಎಷ್ಟಿದೆ ಎಂಬುದನ್ನು ನೋಡಬೇಕು. ಇವತ್ತು ಕಂಪ್ಯೂಟರ್ ಸಿಸ್ಟಂ ಏನು ಇದೆ ಅದರ ಮೂಲಕ ಎಲ್ಲಿ ಇವತ್ತು ಶಾಲಾ ಕೊಠಡಿಗಳ ಕೊರತೆ ಇದೆ ಎನ್ನುವುದನ್ನು ಇಲಾಖೆಯ ಅಧಿಕಾರಿಗಳು ಜಿಲ್ಲಾ ಪಂಛಾಯಿತಿಗೆ ಒದಗಿಸುತ್ತಾರೆ, ಆದರೆ ಅಲ್ಲಿ ಆಗುವುದೇನು? ಜಿಲ್ಲಾಪಂಚಾಯಿತಿಯಲ್ಲಿ ಸ್ಥಾಯಿ ಸಮಿತಿಯವರು ಕುಳಿತುಕೊಂಡು ಆ ಒಂದು ಪಟ್ಟಿಯನ್ನು ನೋಡುವುದಿಲ್ಲ, ಅವಶ್ಯಕತೆ ಇರುವ ಕಡೆ ಕಟ್ಟಡ ಕೊಡುವುದಿಲ್ಲ, ಇಂತಹ ಸಂದರ್ಭದಲ್ಲಿ ಆ ಕೊಠಡಿಗಳನ್ನು ನೋಡುವುದಿಲ್ಲ. ಜಿಲ್ಲಾ ಪಂಚಾಯಿತಿಗಳಿಗೆ ಸರ್ಕಾರ ಸ್ಪಷ್ಟ ಸೂಚನೆಯನ್ನು ಕೊಟ್ಟು, ಎಲ್ಲಿ ಕಟ್ಟಡ ಇಲ್ಲ, ಅಲ್ಲಿ ಕಟ್ಟಡ ಕಟ್ಟಿಸಿಕೊಡುವಂತೆ ಸೂಚಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ಶ್ರೀ ಎಸ್.ಎಂ. ಕೃಷ್ಣರವರ ನೇತೃತ್ವದ ಸರ್ಕಾರ ಬಂದಮೇಲೆ ನಮ್ಮ ರಾಜ್ಯದಲ್ಲಿ ಮೂರು ಜಿಲ್ಲೆಗಳಲ್ಲಿ, ಅದರಲ್ಲೂ ಸನ್ಮಾನ್ಯ ಕೋಳಿವಾಡ್‌ರವರು ಮಂತ್ರಿಗಳಾಗಿ ಬಂದ ಮೇಲೆ ಪ್ರತಿ ಗ್ರಾಮಗಳಲ್ಲಿಯೂ ಸಮುದಾಯದತ್ತ ಕುಡಿಯುವ ನೀರಿನ ಯೋಜನೆಗಳನ್ನು ಇವತ್ತು ಮಾಡಿರುವುದನ್ನು ನೋಡುತ್ತಿದ್ದೇವೆ. ಈ ಒಂದು ಸಂದರ್ಭದಲ್ಲಿ ಈ ಒಂದು ಆರ್ಥಿಕ ನೀತಿಯಲ್ಲಿ ಎಲ್ಲಾದರೂ ಲೋಪವಿದ್ದರೆ ಮಾತ್ರ ಅದರ ಬಗ್ಗೆ ಮಾತನಾಡಬೇಕೆಂದು ಹೇಳುತ್ತೇನೆ; ಆದರೆ ಶಾಲಾ ಕೊಠಡಿಗಳನ್ನು ಒದಗಿಸುವ ವಿಚಾರದಲ್ಲಿ ಸರ್ಕಾರ ದಯಮಾಡಿ ಹೇಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**†ಶ್ರೀ ಶಿವಾನಂದ ಎಸ್ ಪಾಟೀಲ್ (ತಿಕೋಟ)** : ಮಾನ್ಯ ಅಧ್ಯಕ್ಷರೆ, 2003–04ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ; ಜೊತೆಗೆ ವಿಷಾದ ಕೂಡ ವ್ಯಕ್ತಪಡಿಸುತ್ತೇನೆ, ಏಕೆಂದರೆ, ಇಂತಹ ಒಂದು ಬೃಹತ್ ಆಯವ್ಯಯವನ್ನು ಮಂಡಿಸಬೇಕಾದರೆ 28 ಇಲಾಖೆಗಳ ಬೇಡಿಕೆಗಳ ಮೇಲೆ ನಾವು ಚರ್ಚೆ ಮಾಡುವಾಗ ಪ್ರಯಶಃ ಕನಿಷ್ಟ 6–7 ದಿವಸಗಳಾದರೂ ಚರ್ಚೆ ಮಾಡಬೇಕಾಗಿತ್ತು. ಆ ಲೋಪ ಎರಡೂ ಕಡೆಯಿಂದಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ಸರಿದೂಗಿಸಿ ಈ ಆಯವ್ಯಯಕ್ಕೆ ಹೊಸ ಸ್ವರೂಪವನ್ನು ಕೊಡುವುದಕ್ಕೆ ಈ ಸಭೆಯ ಮೂಲಕ ನಾವು ಪ್ರಯತ್ನ ಪಟ್ಟರೆ ಪ್ರಾಯಶಃ ಈ ಆಯವ್ಯಯಕ್ಕೆ ಮೆರಗು ಬರಬಹುದೆಂದು ಭಾವಿಸುತ್ತೇನೆ. ಏಕೆಂದರೆ, ಆಯವ್ಯಯವನ್ನು ಮಂಡನೆ ಮಾಡುವ ಸಂದರ್ಭದಲ್ಲಿ ಸರ್ಕಾರ ಎಲ್ಲಾ ಕಡೆ ಲೋಪ ಮಾಡುತ್ತದೆಂದು ಹೇಳುವುದಕ್ಕೆ ನಾನು ಇಚ್ಛೆಪಡುವುದಿಲ್ಲ, ಆದರೆ ಎಲ್ಲಿ ಲೋಪವಾಗುತ್ತದೆ ಅದನ್ನು ಎತ್ತಿ ಹೇಳತಕ್ಕಂಥ ಕೆಲಸ ಪ್ರಾಯಶಃ ವಿರೋಧ ಪಕ್ಷಗಳು ಮಾಡದಿದ್ದರೆ ಅವುಗಳ ಮೇಲೂ ಕೂಡ ಒಂದು ಅಪವಾದ ಬರಬಹುದೆಂದು ನಾನು ಭಾವಿಸುತ್ತೇನೆ. ಇವತ್ತು ಬಹಳ ಪ್ರಮುಖವಾಗಿ ಎರಡೇ ಎರಡು ಇಲಾಖೆಗಳ ಬೇಡಿಕೆಗಳ ಮೇಲೆ ಬೆಳಕನ್ನು ಚೆಲ್ಲುವುದಕ್ಕೆ ಪ್ರಯತ್ನಪಡುತ್ತೇನೆ; ಬೇರೆ ಇಲಾಖೆಗಳ ಬಗ್ಗೆ ನಾನು ಮಾತನಾಡುವುದಿಲ್ಲ.

ವಿಶೇಷವಾಗಿ ನೀರಾವರಿ, ಸ್ವಲ್ಪಮಟ್ಟಿಗೆ ಕೃಷಿ ಬಗ್ಗೆ ಮಾತನಾಡುತ್ತೇನೆ. ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಬರಗಾಲ ಬಂದಾಯಿತು, ಅದರ ಚರ್ಚೆಗೆ ತಾವು ಅನುವು ಕೂಡ ಮಾಡಿಕೊಟ್ಟಿದ್ದೀರಿ. ಸದಾ ಕಾಲದ ಋತುಮಾನಗಳು ನಮಗೆ ಎಷ್ಟೇ ಒಲಿದರೂ ಕೂಡ ಈ ರಾಜ್ಯದ ಕ್ಷೇತ್ರದಲ್ಲಿ ಪ್ರತಿಶತ 250 ಜಮೀನು ಬರಗಾಲಕ್ಕೆ ತುತ್ತಾಗುತ್ತದೆನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಈ ಸರ್ಕಾರದ ಗಮನಕ್ಕೆ ಒಂದು ಅಂಶವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಅನೇಕ ನೀತಿಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ, ಹಿಂದಿನ ಆಯವ್ಯಯಗಳ ಬಗ್ಗೆ ಬೆಳಕನ್ನು ಚೆಲ್ಲಿರುವುದನ್ನು ನೋಡಿದರೆ, ಪ್ರಾಯಶಃ ಈ ರಾಜ್ಯಗಳು ಏಕೀಕರಣವಾಗುವುದಕ್ಕಿಂತ ಮೊದಲು ಈ ರಾಜ್ಯದ ಆಯವ್ಯಯದಲ್ಲಿ ಕೃಷಿ ವರಮಾನ ಶೇ. 50 ಕ್ಕಿಂತ ಮಿಗಿಲಾಗಿತ್ತು. ಆದರೆ ಕಾಲಕ್ರಮೇಣ ಅದು ಶೇ. 30ಕ್ಕೆ ಇಳಿದಿದೆ. ಇದು ಬಹಳ ಶೋಚನೀಯ ಸಂಗತಿ ಎಂದು ಈ ಸದನದ ಗಮನಕ್ಕೆ ತರುತ್ತಿದ್ದೇನೆ. ಅದರಲ್ಲೂ ವಿಶೇಷವಾಗಿ ಸಿಕ್ಕನಂತರ ಇಡೀ ರಾಷ್ಟ್ರದಲ್ಲಿ ನೀರಾವರಿಗೆ ವಿಶೇಷವಾದ ಒತ್ತನ್ನು ಅನೇಕ ರಾಜ್ಯಗಳು ಕೊಟ್ಟಿವೆ. ಸ್ವಾತಂತ್ರ್ಯಕ್ಕಿಂತ ಪೂರ್ವದಲ್ಲಿ ಈ ದೇಶದಲ್ಲಿ ಕೇವಲ ಶೇಕಡ 22ರಷ್ಟು ಮಾತ್ರ ನೀರಾವರಿ ಲಭ್ಯತೆ ಇತ್ತು. ಆದರೆ ಕಾಲಕ್ರಮೇಣ ಅನೇಕ ರಾಜ್ಯಗಳ ಪ್ರಯತ್ನದಿಂದ ಸ್ವಲ್ಪಮಟ್ಟಿಗೆ ಹೆಚ್ಚಿಗೆ ಮಾಡಿಕೊಂಡಿವೆ. ಅದರಲ್ಲಿ ಜೊತೆಗೆ ಕೃಷಿ ಉತ್ಪನ್ನ ರಾಷ್ಟದ್ದು ಶೇಕಡ 4.8 ಇದ್ದರೆ ನಮ್ಮ ರಾಜ್ಯದ್ದು ಶೇ. 3.7ಕ್ಕೆ ಇಳಿದಿದೆ. 1992–93ರಿಂದ ಕೆಲವು ಅಂಕಿಅಂಶಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. 1992–93 ರಲ್ಲಿ ನಮ್ಮ ರಾಜ್ಯದ ಆಹಾರ ಧಾನ್ಯದ ಉತ್ಪತ್ತಿ 82.28 ಲಕ್ಷ ಟನ್ ಇತ್ತು. ಕಳೆದ ವರ್ಷದ ಆಹಾರ ಧಾನ್ಯದ ಉತ್ಪತ್ತಿ 86 ಲಕ್ಷ ಟನ್ ಮಾತ್ರ ಆಗಿದೆ. ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ನಾವು ಕೃಷಿಯ ಉತ್ಪನ್ನವನ್ನು ಯಾವ ದಿಸೆಯಲ್ಲಿ ತೆಗೆದುಕೊಂಡಿದ್ದೇವೆ ಎನ್ನುವುದನ್ನು ಅವಲೋಕನ ಮಾಡುವುದು ಅವಶ್ಯಕವೆಂದು ನಾನು ಭಾವಿಸುತ್ತೇನೆ. ನಮ್ಮ ನೆರೆ ರಾಜ್ಯಗಳಾದ ತಮಿಳುನಾಡಿನ ತಂಜಾವೂರಿಗೆ ಹೋದರೆ ವರ್ಷದಲ್ಲಿ ಮೂರು ಬೆಳೆಯನ್ನು ತೆಗೆಯುತ್ತಾರೆ, ಇಡೀ ನಮ್ಮ ರಾಜ್ಯದಲ್ಲಿ ಎರಡು ಬೆಳೆ ಬೆಳೆಯುತಕ್ಕಂಥ ಕ್ಷೇತ್ರ ಶೇಕಡ 15ರಷ್ಟು ಮಾತ್ರ ಇದೆ, 107 ಲಕ್ಷ ಹೆಕ್ಟೇರ್‌ನಲ್ಲಿ ಕೇವಲ ಶೇ. 15ರಷ್ಟು ಕ್ಷೇತ್ರದಲ್ಲಿ ಎರಡು ಬೆಳೆಯನ್ನು ಬೆಳೆಯುತ್ತೇವೆ. ಆದರೆ ನಮ್ಮ ನೆರೆ ರಾಜ್ಯಗಳು ವರ್ಷದಲ್ಲಿ ಮೂರು ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಆಂಧ್ರದಲ್ಲಿ ಎರಡು ಬೆಳೆಯನ್ನು ಬೆಳೆಯುತ್ತಾರೆ, ತಮಿಳುನಾಡಿನಲ್ಲಿ ಒಂದು ವರ್ಷಕ್ಕೆ ಮೂರು ಬೆಳೆಯನ್ನು ಬೆಳೆಯುತ್ತಿದ್ದಾರೆ. ಈ ರಾಜ್ಯ ಪ್ರಗತಿ ಮಾಡಿಲ್ಲವೆಂದು ನಾನು ಹೇಳುವುದಿಲ್ಲ, ಈ ರಾಜ್ಯಕ್ಕೆ ಇನ್ನೊಂದು ಮೆರಗು ಇತ್ತು, ಇಡೀ ರಾಷ್ಟ್ರದಲ್ಲಿಯೇ ತೋಟಗಾರಿಕೆ ಇಲಾಖೆಯನ್ನು ಮೊದಲು ಪ್ರಾರಂಭ ಮಾಡಿದ ಹೆಗ್ಗಳಿಕೆ ಕರ್ನಾಟಕ ರಾಜ್ಯಕ್ಕೆ ಸಲ್ಲುತ್ತದೆ. ಆ ಕ್ಷೇತ್ರದಲ್ಲಿ ರಾಜ್ಯ ಮುಂದುವರೆಯುತ್ತದೆನ್ನುವ ಆಶಯ ನನ್ನದಾಗಿತ್ತು. ದುರ್ದೈವವಶಾತ್ ಮಾನ್ಯ ಮಂತ್ರಿಗಳಾದ ಶ್ರೀ ತಿಮ್ಮಾಪುರ್‌ರವರು ಇವತ್ತು ಇದ್ದಾರೆ, ನಮ್ಮ ರಾಜ್ಯ 1997–98ನೇ ಸಾಲಿನಲ್ಲಿ ರಾಷ್ಟ್ರದಲ್ಲಿ ತೋಟಗಾರಿಕೆ ಬೆಳೆಯಲ್ಲಿ ಎರಡನೇ ಸ್ಥಾನದಲ್ಲಿ ಇತ್ತು, ಮಹಾರಾಷ್ಟ್ರ ಮೊದಲನೇ ಸ್ಥಾನದಲ್ಲಿತ್ತು. ಇವತ್ತು ನಾವು 4ನೇ ಸ್ಥಾನಕ್ಕೆ ಇಳಿದಿದ್ದೇವೆ. ತೋಟಗಾರಿಕೆಗೆ ಯಾವ ರೀತಿಯ ಒತ್ತನ್ನು ಕೊಡಬೇಕೆನ್ನುವ ವಿಚಾರದಲ್ಲಿ ಮೊನ್ನೆಯೇ ನಾನು ಅಂಕಿಅಂಶಗಳನ್ನು ಸದನದಲ್ಲಿ ಮಂಡಿಸಿ ಸರ್ಕಾರದ ಗಮನಕ್ಕೆ ತರುವ ಪ್ರಯತ್ನವನ್ನು ಮಾಡಿದ್ದೇನೆ. ಆದರೆ ಒಂದು ಮಾತನ್ನು ನಾನು ವಿಷಾದದಿಂದ ಹೇಳುತ್ತೇನೆ, ಇವತ್ತು ನಮ್ಮ ಜಿಲ್ಲೆಯ ಸಚಿವರು ಹಾಗೂ ಅನೇಕ ಶಾಸಕರು ಇದ್ದಾರೆ, 8–10 ವರ್ಷಗಳಲ್ಲಿ ಬಾಗಲಕೋಟೆ–ಬಿಜಾಪುರ ಅವಿಭಾಜ್ಯ ಜಿಲ್ಲೆಯಾಗಿದ್ದು

ಕಳೆದ 10 ವರ್ಷಗಳಲ್ಲಿ ನಾವು 2900 ಕೋಟಿ ರೂ.ಗಳಷ್ಟು ಸಾಲವನ್ನು ತೋಟಗಾರಿಕೆ ಬೆಳೆಗಳ ಮೇಲೆ ತೆಗೆದುಕೊಂಡಿದ್ದೇವೆ. ಆದರೆ ದುರ್ದೈವವಶಾತ್ ಕಳೆದ ಮೂರು ವರ್ಷಗಳಿಂದ ಅದನ್ನು ಮುಟ್ಟಿಸತಕ್ಕಂಥ ಶಕ್ತಿ ನಮ್ಮಗ್ಯಾರಿಗೂ ಇಲ್ಲ. ಇದಕ್ಕೆ ಕಾರಣ ನಿಮಗೆ ಗೊತ್ತಿದೆ. ಸತತವಾಗಿ ಕಳೆದ ಮೂರು ವರ್ಷಗಳಿಂದ ಬರಗಾಲದ ಬವಣೆ ಬಂದಿರುವುದರಿಂದ ಕೃಷಿಗೆ ರಾಷ್ಟ್ರದಿಂದಾಗಲೀ ಅಥವಾ ರಾಜ್ಯದಿಂದಾಗಲೀ ಕೃಷಿಗೆ ಸ್ವಲ್ಪಮಟ್ಟಿಗೆ ಸಹಾಯ ಸಿಗುತ್ತದೆ. ಆದರೆ ತೋಟಗಾರಿಕೆಯಲ್ಲಿ, ವಿಶೇಷವಾಗಿ, ಲಾಂಗ್ ಟರ್ಮ್ ಬೆಳೆಯನ್ನು ಬೆಳೆಯುವುದರಿಂದ ನಮಗೆ ಯಾವುದೇ ಸಹಾಯ ಸೌಲಭ್ಯಗಳು ನಮಗೆ ಸಿಗುತ್ತಿಲ್ಲ ಎನ್ನುವ ಸಂಗತಿಯನ್ನು ನಾನು ವಿಷಾದದಿಂದ ಸರ್ಕಾರದ ಗಮನಕ್ಕೆ ತರಲು ಇಚ್ಛೆಪಡುತ್ತಿದ್ದೇನೆ. ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಬಗ್ಗೆ ಇಷ್ಟು ವಿಷಯಗಳನ್ನು ನಾನು ಸರ್ಕಾರದ ಗಮನಕ್ಕೆ ತಂದು, ಈಗ ನೀರಾವರಿಯ ಬಗ್ಗೆ ಹೇಳುತ್ತೇನೆ. ಮೂಲಭೂತವಾಗಿ ಹೆಚ್ಚು ಒತ್ತು ಕೊಡಬೇಕಾದಂಥ ವಿಷಯವೆಂದರೆ ನೀರಾವರಿ. ನೀರಾವರಿ ಬಗ್ಗೆ ಮಾತನಾಡತಕ್ಕಂಥ ಅನೇಕ ತಜ್ಞರು ಈ ಸಭೆಯಲ್ಲಿದ್ದಾರೆ. ಅದರಲ್ಲೂ ವಿಶೇಷವಾಗಿ, ರಾಮಯ್ಯನವರು ಈಗ ಈ ಸಭೆಯಲ್ಲಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು ಎಂದು ನನಗನ್ನಿಸುತ್ತದೆ. ಮೊನ್ನೆ ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಮೂಲತಃ ಇಂಡಸ್ಟ್ರಿಯಲ್ ಪಾಲಿಸಿ ಬಗ್ಗೆ ಮಾತನಾಡಿದರು. ಅವತ್ತು ಆರ್.ವಿ. ದೇಶಪಾಂಡೆಯವರು ಇಲ್ಲಿ ಇರಲಿಲ್ಲ. ಆಗಲೇ ಅವರು ಇಲ್ಲಿ ಇದ್ದರು, ಈಗ ಎಲ್ಲಿಗೆ ಎದ್ದು ಹೋದರೋ ಗೊತ್ತಾಗಲಿಲ್ಲ. ರಾಮಯ್ಯನವರ ಗಮನಕ್ಕೆ ನಾನು ಒಂದು ವಿಚಾರವನ್ನು ತರಲು ಇಚ್ಛೆಪಡುತ್ತಿದ್ದೇನೆ. ಮಾನ್ಯ ಸಭಾಪತಿಯವರೂ ಕೂಡ ಮೊನ್ನೆ ಬೇಡಿಕೆಗಳ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ರಾಜ್ಯದ ಐ.ಟಿ. ಸೆಕ್ಟಾರ್ ಬಗ್ಗೆ ಬಹಳ ಮೆಚ್ಚುಗೆಯಿಂದ ಮಾತನಾಡಿದರು. ಈ ರಾಜ್ಯ ಇನ್‌ಫಾರ್ಮೇಷನ್ ಟೆಕ್ನಾಲಜಿಯಲ್ಲಿ ಬಹಳ ಮುಂದುವರೆಯುತ್ತಿದೆ ಎಂದು ನನಗೂ ಸಂತೋಷವಿದೆ. ಆದರೆ, ಇವರ ಇ-ಗವರ್ನೆನ್ಸ್ ಯಾವ ಮಟ್ಟದಲ್ಲಿದೆ ಎನ್ನುವುದಕ್ಕೆ ಒಂದೇ ಒಂದು ಉದಾಹರಣೆಯನ್ನು ನಾನು ತಮ್ಮ ಮುಖಾಂತರ ಅವರ ಗಮನಕ್ಕೆ ತರಲು ಇಚ್ಛೆ ಪಡುತ್ತಿದ್ದೇನೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಕ್ಯಾಬಿನೆಟ್ ಅನ್ನು ಎಕ್ಸ್‌ಪ್ಯಾನ್‌ಷನ್ ಮಾಡಿದರು. ಎಕ್ಸ್‌ಪ್ಯಾನ್‌ಷನ್ ಮಾಡಿದಂಥ ಸಂದರ್ಭದಲ್ಲಿ ಒಬ್ಬ ಸಚಿವರನ್ನು ಕ್ಯಾಬಿನೆಟ್‌ಗೆ ಸೇರ್ಪಡೆ ಮಾಡಿದರು. ಆಗ ಕ್ಯಾಬಿನೆಟ್ ಸಚಿವರ ಸಂಖ್ಯೆ 29 ಆಯಿತು. ನಾನು ನಿನ್ನೆಯಷ್ಟೇ ನೋಡಿದ್ದೇನೆ, ಇವತ್ತೂ ಇಂಟರ್‌ನೆಟ್‌ನಲ್ಲಿ ಅದು 28 ಎಂದೇ ಇದೆ. ಇದು ಯಾವ ರೀತಿಯ ಇ-ಗವರ್ನೆನ್ಸ್ ಎಂದು ನಾನು ಕೇಳಬೇಕಾಗುತ್ತದೆ. ಬೇಕಾದರೆ ಅದನ್ನು ನೀವೂ ಕೂಡ ನೋಡಿ ಸರ್ಕಾರದ ಗಮನಕ್ಕೆ ತರಬಹುದು. ಅದನ್ನು ಅಪ್-ಡೇಟ್ ಮಾಡಬೇಕಾಗಿತ್ತು. ಅಪ್ಪರ್ ಹೌಸ್‌ನಲ್ಲಿ ಅಪ್-ಡೇಟ್ ಮಾಡಿದ್ದಾರೆ, ಆದರೆ ಇಂಟರ್‌ನೆಟ್ ಅಪ್-ಡೇಟ್ ಆಗಿಲ್ಲ. ಇದರಿಂದ ನನಗೆ ಆಶ್ಚರ್ಯವೆನಿಸುತ್ತದೆ, ಇದು ಯಾವ ರೀತಿಯ ಇ-ಗವರ್ನೆನ್ಸ್ ಅಥವಾ ಅಲ್ಲಂರವರು ಇನ್ನೂ ಮಂತ್ರಿಮಂಡಲಕ್ಕೆ ಸೇರಿದ್ದಾರೋ, ಇಲ್ಲವೋ ಎನ್ನುವುದನ್ನು ಅವರ ವಿವೇಚನೆಗೆ ಬಿಡುತ್ತೇನೆ.

**ಶ್ರೀ ಯು.ಆರ್. ಸಭಾಪತಿ** : ನೀವು ಇದೊಂದನ್ನೇ ಅಳತೆಗೋಲಾಗಿ ಉಪಯೋಗಿಸುವುದು ಸರಿಯಲ್ಲ. ಬಾಕಿ ವಿಷಯಗಳನ್ನೂ ನೋಡಬೇಕು.

**ಶ್ರೀ ಶಿವಾನಂದ ಎಸ್ ಪಾಟೀಲ್** : ಬಾಕಿ ವಿಷಯವನ್ನೂ ನಾನು ಹೇಳುತ್ತೇನೆ.

**ಅಧ್ಯಕ್ಷರು** : ಸಭಾಪತಿಯವರೇ, ಪ್ಲೀಸ್ ಸುಮ್ಮನಿರಿ.

**ಶ್ರೀ ಶಿವಾನಂದ ಎಸ್ ಪಾಟೀಲ್** : ಒಂದು ವಿಷಯದ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲು ಇಚ್ಚೆಪಡುತ್ತೇನೆ. ಈ ರಾಜ್ಯದಲ್ಲಿ 2002–03ನೇ ವರ್ಷದಲ್ಲಿ ಐ.ಟಿ ಸೆಕ್ಟಾರ್‌ನಿಂದ ಮೂರೂವರೆ ಸಾವಿರ ಕೋಟಿ ರೂಪಾಯಿಗಳಿಂದ ನಾಲ್ಕು ಸಾವಿರ ಕೋಟಿ ರೂಪಾಯಿಗಳವರೆಗೆ ವ್ಯವಹಾರವಾಗಿದೆ ಎನ್ನುವುದು ಕಮರ್ಷಿಯಲ್ ಟ್ಯಾಕ್ಸ್ ಕಛೇರಿಯಿಂದ ಲಭ್ಯವಿರುವ ಅಂಕಿಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ. ಆದರೆ, ದುರ್ದೈವವಶಾತ್ ಈ ಇನ್‌ಫಾರ್ಮೇಷನ್ ಟೆಕ್ನಾಲಜಿಯಿಂದ ...........

**ಶ್ರೀ ಡಿ.ಬಿ. ಇನಾಂದಾರ್** : ಮಾನ್ಯ ಅಧ್ಯಕ್ಷರೇ, ಅದು ಮೂರೂವರೆ ಸಾವಿರ ಕೋಟಿಯಿಂದ ನಾಲ್ಕು ಸಾವಿರ ಕೋಟಿ ರೂಪಾಯಿಗಳಲ್ಲ. ಹದಿನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಇಲ್ಲಿಂದ ಎಕ್ಸ್‌ಪೋರ್ಟ್ ಆಗಿದೆ ಎನ್ನುವ ಮಾತನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಲು ಇಚ್ಚೆಪಡುತ್ತೇನೆ.

**ಶ್ರೀ ಶಿವಾನಂದ ಎಸ್ ಪಾಟೀಲ್** : ನಾನು ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಆದರೆ ನನಗೆ ಕಮರ್ಷಿಯಲ್ ಟ್ಯಾಕ್ಸ್‌ನಿಂದ ಬಂದಂಥ 2002–03 ನೇ ವರ್ಷದ ಅಂಕಿಸಂಖ್ಯೆಗಳ ಆಧಾರವನ್ನು ಇಟ್ಟುಕೊಂಡು ನಾನು ಹೇಳುತ್ತಿದ್ದೇನೆ. ಅದನ್ನು ನೀವು ಯಾವ ರೀತಿ ತಿದ್ದಿಕೊಳ್ಳುತ್ತೀರೋ ನನಗೆ ಗೊತ್ತಿಲ್ಲ. ನಾನು ಅವರನ್ನು ಕೇಳಿಯೇ ಈ ಅಂಕಿ ಅಂಶಗಳನ್ನು ತೆಗೆದುಕೊಂಡಿದ್ದೇನೆ. ಈ ರಾಜ್ಯಕ್ಕೆ ಅದರಿಂದ ಎಷ್ಟು ಆದಾಯ ಬಂದಿದೆ ಎಂದು ವಿಚಾರ ಮಾಡಿದರೆ, ಅದು ಆಶ್ಚರ್ಯಕರ ಸಂಗತಿ ಎನಿಸುತ್ತದೆ. ನಿಮಗೆ ಗೊತ್ತಿದೆ, ಮೊದಲು ಐ.ಟಿ. ಮೇಲೆ ಟ್ಯಾಕ್ಸ್ ಇರಲಿಲ್ಲ. 2002ನೇ ಇಸವಿಯಲ್ಲಿ ಮೊದಲನೇ ಬಾರಿಗೆ ತಾವು ಶೇಕಡಾ ನಾಲ್ಕರಷ್ಟು ಟ್ಯಾಕ್ಸನ್ನು ಹಾಕಿದಿರಿ. ಅದರಿಂದ ಈ ರಾಜ್ಯಕ್ಕೆ ಮೊದಲನೇ ವರ್ಷ ಬಂದಿರತಕ್ಕಂಥ ಆದಾಯ 49 ಕೋಟಿ ರೂಪಾಯಿಗಳು ಮತ್ತು ಎರಡನೇ ವರ್ಷ ಬಂದಿರತಕ್ಕಂಥ ಆದಾಯ 60 ಕೋಟಿ ರೂಪಾಯಿಗಳು ಮಾತ್ರ. ಇವತ್ತು ನೀವು 14 ಸಾವಿರ ಕೋಟಿ ರೂಪಾಯಿಗಳಷ್ಟು ವ್ಯವಹಾರವನ್ನು ಮಾಡಿ, ಅದರಿಂದ ಈ ರಾಜ್ಯಕ್ಕೆ 60 ಕೋಟಿ ರೂ. 45 ಕೋಟಿ ರೂಪಾಯಿಗಳ ಆದಾಯ ಬರುತ್ತಿದ್ದರೆ, ಅದಕ್ಕೆ ನೀವು ಏನು ಹೇಳಬೇಕೆಂದಿದ್ದೀರಿ ಎನ್ನುವುದನ್ನೂ ನಾನು ಹೇಳುತ್ತೇನೆ. ಇದು ಎಕ್ಸ್‌ಪೋರ್ಟ್ ಇರತಕ್ಕಂಥಾದ್ದು, ಇದರಿಂದ ಸ್ಟೇಟ್‌ಗೆ ಇನ್–ಡೈರೆಕ್ಟ್ ಟ್ಯಾಕ್ಸ್ ಬರಬಹುದು ಎಂದು ತಾವು ಹೇಳುತ್ತೀರಿ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಮಾನ್ಯ ರಾಮಯ್ಯನವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಅವರು ಐ.ಟಿ. ಪಾಲಿಸಿ ಬಗ್ಗೆ ಏನೂ ಹೇಳಲಿಲ್ಲ, ಇಂಡಸ್ಟ್ರಿಯಲ್ ಪಾಲಿಸಿ ಬಗ್ಗೆ ಹೇಳಿದರು. ಇಂಡಸ್ಟ್ರಿಯಲ್ ಪಾಲಿಸಿಯಿಂದ 11 ಸಾವಿರ ಕೋಟಿ ರೂಪಾಯಿಗಳಷ್ಟು ಈ ರಾಜ್ಯದ ವರಮಾನ ಹೋಗಿದೆ ಎಂದು ಹೇಳಿದರು. ಆದರೆ ನಿಮ್ಮ ಅಂಕಿಅಂಶದ ಪ್ರಕಾರವೇ, ಐ.ಟಿ ಸೆಕ್ಟಾರ್‌ನಲ್ಲಿ 14 ಸಾವಿರ ಕೋಟಿ ರೂಪಾಯಿಗಳ ವ್ಯವಹಾರ ಮಾಡಿ, ಅದರಿಂದ ಈ ರಾಜ್ಯಕ್ಕೆ ಕೇವಲ 60 ಕೋಟಿ ರೂಪಾಯಿ ಆದಾಯ ಬರುತ್ತಿದ್ದರೆ ನಾವು ಏನನ್ನಬೇಕು? ಸುಮಾರು ಒಂದು ಲಕ್ಷದ 25 ಸಾವಿರ ಜನ ಅಲ್ಲಿ ದುಡಿಯುತ್ತಿದ್ದಾರೆ ಎಂದು ತಾವು ಹೇಳಬಹುದು. ಆದರೆ ನನ್ನ ವಿಚಾರ, ಇದನ್ನು ಯಾವುದಕ್ಕೆ ಹೋಲಿಸುವುದಿತ್ತು ಎಂದರೆ, ಈ ರಾಜ್ಯದಲ್ಲಿ ಅಗ್ರಿಕಲ್ಚರ್ ಸೆಕ್ಟಾರ್ ಶೇಕಡ 60 ರಿಂದ 70 ಇದೆ ಎಂದು ತಾವು ಹೇಳುತ್ತಿದ್ದೀರಿ, ಅದಕ್ಕೆ ತಾವು ಎಷ್ಟು ಪ್ರಾಧಾನ್ಯತೆಯನ್ನು ಕೊಡುತ್ತಿದ್ದೀರಿ ಎನ್ನುವುದನ್ನು

ತಾವು ನೋಡಿಕೊಳ್ಳಬಹುದು ಎಂದು ನಾನು ಹೇಳುತ್ತಿದ್ದೇನೆ. ಏಕೆಂದರೆ, ಇವರು ಪ್ರತಿವರ್ಷ ಒಂದು ಲಕ್ಷ 103 ಮೆಟ್ರಿಕ್ ಟನ್ ಆಹಾರವನ್ನು ನಾವು ಬೆಳೆಯುತ್ತೇವೆ ಎಂದು ಹೇಳುತ್ತಿದ್ದಾರೆ. ಇದರ ಜೊತೆಗೆ, ತೋಟಗಾರಿಕೆಯಿಂದ 6 ಸಾವಿರ ಕೋಟಿ ರೂಪಾಯಿಗಳಿಂದ 7 ಸಾವಿರ ಕೋಟಿ ರೂಪಾಯಿಗಳವರೆಗೆ ವರಮಾನ ಬರುತ್ತಿದೆ ಎಂದರೆ, ನನಗನ್ನಿಸುತ್ತದೆ, ಇದೂ ಕೂಡ ಒಂದು ವರ್ಷಕ್ಕೆ 18 ರಿಂದ 20 ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯ ತೋಟಗಾರಿಕೆ ಮತ್ತು ಕೃಷಿಯಿಂದ ಈ ರಾಜ್ಯಕ್ಕೆ ಬರುತ್ತಿದೆ ಎಂದರೆ, ಇವೆರಡನ್ನೂ ತುಲನೆ ಮಾಡಿದರೆ ತಾವು ಯಾವುದಕ್ಕೆ ಹೆಚ್ಚು ಒತ್ತು ಕೊಡಬೇಕು ಎನ್ನುವುದು ತಮಗೆ ಮನವರಿಕೆ ಆಗಬಹುದು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಂಡು, ತಾವು ಆದಷ್ಟು ಹೆಚ್ಚು ಒತ್ತನ್ನು ಕೃಷಿ ಮತ್ತು ತೋಟಗಾರಿಕೆಗೆ ಕೊಟ್ಟರೆ ಈ ರಾಜ್ಯದ ಜನರು ಮತ್ತು ರೈತರು ತಮಗೆ ಆಭಾರಿಯಾಗಿರುತ್ತಾರೆ ಎಂದು ಹೇಳಲಿಕ್ಕೆ ನಾನು ಇಚ್ಚೆ ಪಡುತ್ತಿದ್ದೇನೆ. ತೋಟಗಾರಿಕೆ ಮೇಲೆ ಒಂದು ಸಮಗ್ರವಾದಂಥ ವರದಿಯನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ ಎನ್ನುವ ಮಾತನ್ನು ತಾವು ಹೇಳಿದಿರೇ ವಿನಃ ರಾಜ್ಯದಿಂದ ಅವರಿಗೆ ಯಾವುದೇ ಪರಿಹಾರ ಕೊಡುತ್ತೇವೆ ಎಂದು ಹೇಳಲಿಲ್ಲ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಇದಕ್ಕೆ ಹೆಚ್ಚಿಗೆ ವಿಶೇಷವಾದಂಥ ಒತ್ತನ್ನು ಕೊಡುವ ದಿಸೆಯಲ್ಲಿ, ಆ ಆಯವ್ಯಯದಲ್ಲಿ ತಾವು ಸ್ವಲ್ಪಮಟ್ಟಿಗೆ ಬದಲಾವಣೆಯನ್ನು ಮಾಡಿದರೆ ನಾವು ತಮಗೆ ಚಿರಋಣಿಯಾಗಿರುತ್ತೇವೆ ಎಂದು ಹೇಳಲು ನಾನು ಇಚ್ಚೆಪಡುತ್ತಿದ್ದೇನೆ. ನನಗೆ ಐ.ಟಿ ಸೆಕ್ಟಾರ್ ಮೇಲೆ ದ್ವೇಷವಿಲ್ಲ. ಆದರೆ ಆ ಐ.ಟಿ. ಸೆಕ್ಟಾರ್ ಇವತ್ತು ಯಾವ ಒಂದು ಮಟ್ಟಕ್ಕೆ ಬಂದಿದೆ ಎಂದರೆ, ಇತ್ತೀಚೆಗೆ ಪ್ರೇಂಜೀ ಅಜೀಂರವರು ಒಂದು ಸ್ಟೇಟ್‌ಮೆಂಟ್ ಕೊಟ್ಟು, ನಮ್ಮ ಭಾಗದಲ್ಲಿ ಸ್ವಲ್ಪ ಇನ್‌ಫ್ರಾಸ್ಟ್ರಕ್ಚರ್ ಆಗಿಲ್ಲ ಎಂದು ಹೇಳಿದರೆ, ಮರುದಿವಸವೇ ಮುಖ್ಯಮಂತ್ರಿಗಳು ಅದಕ್ಕೆ ರಿಯಾಕ್ಟ್ ಮಾಡಿ, ಚೀಫ್ ಸೆಕ್ರೆಟರಿಯವರ ನೇತೃತ್ವದಲ್ಲಿ ಒಂದು ಕಮಿಟಿ ಮಾಡಿ, ಪ್ರೇಮ್‌ಜಿ ಅಜೀಂರವರು ಏನು ಹೇಳುತ್ತಾರೆ ಅದನ್ನು ಎರಡು ದಿವಸಗಳಲ್ಲೇ ಕಾರ್ಯಗತಗೊಳಿಸುತ್ತೇವೆ ಎಂದು ಹೇಳಿದರು. ಶಾಸಕರಾಗಿ ನಾವು ನೂರು ಪತ್ರ ಬರೆದರೂ ಕೂಡ ಅದಕ್ಕೆ ಉತ್ತರ ಕೊಡತಕ್ಕಂಥವರು ಇಲ್ಲ. ಇದನ್ನು ನೋಡಿ, ನಾವೂ ಏಕೆ ಪ್ರೇಮ್‌ಜಿ ಅಜೀಂ ಆಗಲಿಲ್ಲ ಎಂದು ನನಗನ್ನಿಸುತ್ತದೆ. ನಾನು ಇದನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಅವರಿಗೆ ಮಾನ್ಯತೆ ಕೊಡಬೇಕು, ಅದನ್ನು ನಾನು ಇಲ್ಲವೆನ್ನುವುದಿಲ್ಲ. ಅದರ ಜೊತೆಗೆ, ಈ ಸರ್ಕಾರ ಈ ರಾಜ್ಯದಲ್ಲಿರತಕ್ಕಂಥ ಉಳಿದವರ ಬಗ್ಗೆಯೂ ಅಷ್ಟೇ ವಿಶೇಷವಾದ ಒತ್ತನ್ನು ಕೊಟ್ಟರೆ, ಈ ರಾಜ್ಯದ ಜನ ಮಾನ್ಯ ಮುಖ್ಯಮಂತ್ರಿಗಳಿಗೆ ಬಹಳ ಆಭಾರಿಯಾಗಿರುತ್ತಾರೆ ಎಂದು ಹೇಳಲು ನಾನು ಇಚ್ಚೆಪಡುತ್ತಿದ್ದೇನೆ. ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲು ಇಚ್ಚೆಪಡುತ್ತಿದ್ದೇನೆ. ಹೃದಯ ರೋಗಕ್ಕಾಗಲೀ ಅಥವಾ ಇನ್ನಿತರ ರೋಗಗಳಿಗಾಗಲೀ, ಮುಖ್ಯಮಂತ್ರಿಗಳ ವಿವೇಚನಾ ನಿಧಿಯಿಂದ ಅನುದಾನ ಸಿಗುತ್ತಿತ್ತು. ಆದರೆ ಪಾಕಿಸ್ಥಾನದಿಂದ ಬಂದಂಥ ಒಬ್ಬ ಬಾಲಕಿಯ ಬಗ್ಗೆ, ಅಪ್ಪರ್ ಹೌಸ್‌ನಲ್ಲಿ ಕೂಡ ನಾನು ನೋಡಿದೆ, ಪೇಪರ್‌ನವರು ಮತ್ತು ಮೀಡಿಯಾದವರು ಕೊಟ್ಟಿರತಕ್ಕಂಥ ಪಬ್ಲಿಸಿಟಿಯನ್ನು ನೋಡಿದೆ. ಟೋಕನ್ ಆಫ್ ಜೆಸ್ಚರ್ ಎಂದು ತಿಳಿದುಕೊಂಡು ಅಲ್ಲಂ ವೀರಭದ್ರಪ್ಪನವರು ಸರ್ಕಾರದ ವತಿಯಿಂದ 10 ಸಾವಿರ ರೂಪಾಯಿಗಳನ್ನು ಕೊಟ್ಟರು. ಅದಕ್ಕೆ ನಾನು ಚಿರಋಣಿಯಾಗಿದ್ದೇನೆ. ಆದರೆ ಅದೇ ರೀತಿಯ ಸಹಾಯ ನಮ್ಮ ರಾಜ್ಯದಲ್ಲಿರುವಂಥ ಜನಗಳಿಗೂ ಸಿಕ್ಕಿದರೆ, ನಮ್ಮ ರಾಜ್ಯದ ಜನ ಸರ್ಕಾರಕ್ಕೆ ..........

**ಅಧ್ಯಕ್ಷರು** : ಸರ್ಕಾರದ ಹಣಕ್ಕೂ, ಮುಖ್ಯಮಂತ್ರಿಗಳ ವಿವೇಚನಾ ನಿಧಿಗೂ ಸಂಬಂಧವಿಲ್ಲವೆಂದು ಕಾಣುತ್ತದೆ.

**ಶ್ರೀ ಶಿವಾನಂದ ಎಸ್ ಪಾಟೀಲ್** : ಮುಖ್ಯಮಂತ್ರಿಗಳ ವಿವೇಚನಾ ನಿಧಿಯಿಂದ ಸಹಾಯದ ಸಲುವಾಗಿ 11 ಪತ್ರಗಳನ್ನು ನಾನು ಕೊಟ್ಟಿದ್ದೇನೆ. ಎಂಟು ವರ್ಷದ ಒಬ್ಬ ಹುಡುಗನ ಚಿಕಿತ್ಸೆಯ ಸಲುವಾಗಿ ಮೂರು ಸಲ ಮುಖ್ಯಮಂತ್ರಿಗಳ ಕಾರ್ಯಾಲಯಕ್ಕೆ ಪತ್ರವನ್ನು ಕೊಟ್ಟಿದ್ದೇನೆ. 10 ಸಾವಿರ ರೂಪಾಯಿಗಳ ಸಲುವಾಗಿ ಪರದಾಡುತ್ತಿದ್ದೇನೆ.]

**ಅಧ್ಯಕ್ಷರು** : ಇರಿಗೇಷನ್ ಬಗ್ಗೆ ಮಾತನಾಡಿ ಬೇಗ ಮುಗಿಸಿ.

**ಶ್ರೀ ಶಿವಾನಂದ ಎಸ್ ಪಾಟೀಲ್** : ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಲ್ಲಿ ಕೊಡಬೇಕು ಎಂದು ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಟೋಕನ್ ಆಫ್ ಜೆಸ್ಚರ್ ಎಂದು ತಾವು ಬೇರೆ ರಾಷ್ಟ್ರದಿಂದ ಬಂದವರಿಗೆ ಸಹಾಯ ಮಾಡಿದಂತೆ, ಅದನ್ನು ನಮ್ಮ ರಾಜ್ಯದ ಜನತೆಗೂ ಕೊಡಿ. ಮಾನ್ಯ ಸುರೇಶ್ ಕುಮಾರ್‌ರವರು ಸಹ ಜಯದೇವ ಆಸ್ಪತ್ರೆಯ ಬಗ್ಗೆ ವಿಚಾರವನ್ನು ಎತ್ತಿದರು. ಅದೂ ಕೂಡ ಸರ್ಕಾರದ ಗಮನಕ್ಕೆ ಬಂದಿದೆ ಎಂದು ನಾನು ಭಾವಿಸುತ್ತೇನೆ.

**ಅಧ್ಯಕ್ಷರು** : ಈಗ ಹೆಚ್ಚು ಟೈಮಿಲ್ಲ. ನೀವು ಆಸ್ಪತ್ರೆಗಳು ಮತ್ತು ಬೇರೆ ಅವು ಇವು ಎಂದು ತೆಗೆದುಕೊಂಡರೆ ಆಗುವುದಿಲ್ಲ. ಇರಿಗೇಷನ್ ಬಗ್ಗೆ ಒಂದೆರಡು ನಿಮಿಷದಲ್ಲಿ ಮಾತನಾಡಿ ಮುಗಿಸಿ.

**11.10 ಎಎಂ**

**ಶ್ರೀ ಶಿವಾನಂದ ಎಸ್ ಪಾಟೀಲ್** : ನೀರಾವರಿ ಕ್ಷೇತ್ರದಲ್ಲಿ ರಾಷ್ಟ್ರ ಇವತ್ತು ಬಹಳಷ್ಟು ಅಭಿವೃದ್ಧಿ ದಿಸೆಯಲ್ಲಿ ಸಾಗುತ್ತಿದ್ದು, ಅದರಲ್ಲೂ ರಾಷ್ಟ್ರದ ನೀರಾವರಿ ಕ್ಷೇತ್ರ 38 ಪರ್ಸೆಂಟ್‌ಗೆ ಇವತ್ತು ಬಂದಿದೆ. ಇದು ಹೆಮ್ಮೆಯ ಸಂಗತಿ. ಏಕೆಂದರೆ ಒಂದು ಕಾಲದಲ್ಲಿ 22 ಪರ್ಸೆಂಟ್‌ಗೆ ಇದ್ದದ್ದು ಇವತ್ತು 38 ಪರ್ಸೆಂಟ್‌ಗೆ ಹೋಗತಕ್ಕಂಥದ್ದು ಒಂದು ಹೆಮ್ಮೆಯ ಸಂಗತಿಯಾಗಿದೆ. ಆದರೆ ನಮ್ಮ ಪಕ್ಕದಲ್ಲಿ ಇರತಕ್ಕಂಥ ನೆರೆರಾಜ್ಯಗಳಾದ ತಮಿಳುನಾಡಿನ ಇರಿಗೇಷನ್ ಪೊಟೆನ್‌ಶಿಯಾಲಿಟಿ 46 ಪರ್ಸೆಂಟ್‌ಗೆ ಹೋಗಿದೆ, ಆಂಧ್ರಪ್ರದೇಶದ ಇರಿಗೇಷನ್ ಪೊಟೆನ್‌ಶಿಯಾಲಿಟಿ 42 ಪರ್ಸೆಂಟ್‌ಗೆ ಹೋಗಿದೆ, ಮಹಾರಾಷ್ಟ್ರ ರಾಜ್ಯದ್ದು 48 ಪರ್ಸೆಂಟ್‌ಗೆ ಹೋಗಿದೆ. ಆದರೆ ದುರ್ದೈವದಿಂದ ನಮ್ಮ ಕರ್ನಾಟಕ ರಾಜ್ಯದ ಇರಿಗೇಷನ್ ಪೊಟೆನ್‌ಶಿಯಾಲಿಟಿ ಇವತ್ತಿನವರೆಗೆ 26 ಪರ್ಸೆಂಟ್‌ಗೆ ಮಾತ್ರ ಹೋಗಿದೆ. ಅವರ ಒಂದು ಅಂಕಿ ಅಂಶದ ಆಧಾರದ ಮೇಲೆ ಹೇಳಬೇಕಾದರೆ, ಅವರು ಕಂದಾಯ ಆಯೋಗದ ಅಧ್ಯಕ್ಷರಾಗಿ ಮಾನ್ಯ ವೀರಪ್ಪ ಮೊಯಿಲಿ ಅವರನ್ನು ನೇಮಕ ಮಾಡಿದ್ದಾರೆ. ಅವರೇ ಒಂದು ಕಡೆ ಈ ರಾಜ್ಯದಲ್ಲಿ 2000ನೇ ಇಸವಿಯವರೆಗೆ 15 ಸಾವಿರ ಕೋಟಿ ರೂಪಾಯಿಗಳನ್ನು ನೀರಾವರಿ ಮೇಲೆ ನಾವು ವೆಚ್ಚ ಮಾಡಿದ್ದೇವೆ; ಎಂದು ಹೇಳಿದ್ದಾರೆ. ಹಾಗೆಯೇ ಕಳೆದ ವರ್ಷ ಮತ್ತು ಈ ವರ್ಷದ ಆಯವ್ಯಯ ನೋಡಿದರೆ ಇನ್ನೂ 3 ಸಾವಿರ ಕೋಟಿ ರೂಪಾಯಿಗಳನ್ನು ಸೇರಿಸಿದರೆ ಪ್ರಾಯಶಃ 18 ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ನಾವು ವೆಚ್ಚ ಮಾಡಿದರೂ ಕೂಡ ಇವತ್ತು ನಮ್ಮ ಇರಿಗೇಷನ್ ಪೊಟೆನ್‌ಶಿಯಾಲಿಟಿ ಕೇವಲ 27 ಪರ್ಸೆಂಟ್. ಅದರಲ್ಲೂ ವಿಶೇಷವಾಗಿ ಮೇಜರ್ ಇರಿಗೇಷನ್‌ನ ಇರಿಗೇಷನ್ ಪೊಟೆನ್‌ಶಿಯಾಲಿಟಿ ಇದುವರೆಗೆ 18 ಪರ್ಸೆಂಟ್ ದಾಟಲಿಲ್ಲ. ಬೃಹತ್ ನೀರಾವರಿ ಯೋಜನೆಗಳ ಮೇಲೆ ಇವತ್ತಿನವರೆಗೆ 18 ಸಾವಿರ ಕೋಟಿ ರೂ.ಗಳಿಂದ 20 ಸಾವಿರ ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಿದ್ದೇವೆ. ಅದು ಯಾವ ದಿಶೆಯಲ್ಲಿ ನಡೆದಿದೆ? ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಅವರು ನೀರಾವರಿ

ಇಲಾಖೆಯನ್ನು ನಮ್ಮ ಉತ್ತರ ಕರ್ನಾಟಕದವರಿಗೆ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇಲ್ಲಿ ಉತ್ತರ ದಕ್ಷಿಣ ಎನ್ನತಕ್ಕಂಥ ಮಾತನ್ನು ನಾನು ಎತ್ತಬಾರದು. ಆದರೂ ಕೂಡ ಯಾರು ಇವತ್ತು ನೀರಾವರಿ ಸಚಿವರಾಗಿದ್ದಾರೆ ಅವರೇ ಉತ್ತರ ಕರ್ನಾಟಕದ ಬಗ್ಗೆ ವಿಶೇಷವಾದ ಒತ್ತನ್ನು, ಮಾತನ್ನು ಕೊಟ್ಟು ಆಡತಕ್ಕಂಥವರು. ಆದ್ದರಿಂದ ಅವರಿಗೇ ಈ ಖಾತೆಯನ್ನು ಕೊಟ್ಟಮೇಲೆ 'ಅವರಿಂದ ಖಂಡಿತವಾಗಿ ಈ ರಾಜ್ಯ ಏನಾದರೂ ಅಭಿವೃದ್ಧಿ ದಿಶೆಯಲ್ಲಿ ಸಾಗಬಹುದು' ಎಂದು ನನ್ನ ಆಸೆ ಇತ್ತು. ಏಕೆಂದರೆ ಅವರೂ ಕೂಡ ನೀರಾವರಿ ದಿಶೆಯಲ್ಲಿ ಬೇಕಾದಷ್ಟು ಪ್ರಯತ್ನವನ್ನು ಮಾಡಿದ್ದಾರೆ. 'ಕೇಳಿ ಕೃಷ್ಣೆಯ ಕೂಗು' ಎನ್ನುವ ಪುಸ್ತಕವನ್ನು ಕೂಡ ಅವರು ಬರೆದಿದ್ದಾರೆ. ಆ ಪುಸ್ತಕದ ಒಂದೇ ಒಂದು ಮಾತನ್ನು ಇಲ್ಲಿ ರೆಫರ್ ಮಾಡುವುದಕ್ಕೆ ಬಯಸುತ್ತೇನೆ. ಆ ಕೃಷ್ಣಾ ಮೇಲ್ದಂಡೆ ಯೋಜನೆಗಳ ವಿಳಂಬಕ್ಕೆ ದೊಡ್ಡ ಇತಿಹಾಸವಿದೆಯೆಂದು 10 ಪಾಯಿಂಟುಗಳನ್ನು ಅವರು ಬರೆದಿದ್ದು ಅದರಲ್ಲಿ ಎರಡು ಬಹಳ ಪ್ರಾಮುಖ್ಯವಾಗಿರತಕ್ಕಂಥ ಅಂಶಗಳನ್ನು ಮಾತ್ರ ನಿಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

1. "ಯೋಜನೆಗಳು ಸಿದ್ಧವಾದರೂ ಹಣಕಾಸಿನ ವ್ಯವಸ್ಥೆ ಆಗಿಲ್ಲ, ಆದ್ದರಿಂದ ಕೆಲಸವೆಲ್ಲ ಕಾಗದದ ಮೇಲೆ ನಡೆಯುತ್ತಿದೆ."

ಇದು ಅವರು ಬರೆದ ಪುಸ್ತಕದಲ್ಲಿ 4ನೇ ಪಾಯಿಂಟ್ ಆಗಿರುತ್ತದೆ. ಮತ್ತು 10ನೇ ಪಾಯಿಂಟ್

2. "ಕೆಲಸ ತ್ವರಿತಗತಿಯಿಂದ ಸಾಗಬೇಕಾದರೆ ರಾಷ್ಟ್ರೀಯ ಒತ್ತಡದ ಕೊರತೆ ಇದೆ" ಎಂದು ಬರೆದಿದ್ದಾರೆ. ಇದನ್ನು ಯಾರು ಬರೆದಿದ್ದಾರೆ ಅವರು ಸುದೈವದಿಂದ ಇವತ್ತು ಈ ರಾಜ್ಯದ ಬೃಹತ್ ನೀರಾವರಿ ಸಚಿವರಾಗಿದ್ದಾರೆ. ಒಬ್ಬ ಸಚಿವರಿಗೆ ತನ್ನ ವಿವೇಚನೆಯಲ್ಲಿ ಕಾರ್ಯವನ್ನು ನಿರ್ವಹಿಸತಕ್ಕಂಥ ಶಕ್ತಿಗೆ 4 ವರ್ಷ ಸಾಕೆಂದು ನನಗೆ ಅನ್ನಿಸುತ್ತದೆ. ಹಾಗೆಯೇ ಸುದೈವದಿಂದ ಮಾನ್ಯ ಮುಖ್ಯಮಂತ್ರಿಗಳು ವರ್ಷಕ್ಕೆ 3 ಸಾವಿರ ಕೋಟಿ ರೂಪಾಯಿಗಳನ್ನು ಬೃಹತ್ ನೀರಾವರಿ ಯೋಜನೆಗಳಿಗೆ ಕೊಡುತ್ತಿದ್ದಾರೆ. 3 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟ ಮೇಲೆ ಈ ರಾಜ್ಯ ಯಾವ ದಿಸೆಯಲ್ಲಿ ಪ್ರಗತಿ ಆಗಬೇಕಾಗಿತ್ತೋ ಅದು ಆಗದಿರುವುದನ್ನು ನೋಡಿದರೆ ಅದು ನನಗೆ ಸ್ವಲ್ಪ ವ್ಯಥೆ ಅನಿಸುತ್ತದೆ. ರಾಜ್ಯ ಸರ್ಕಾರ 2001–02ರಲ್ಲಿ 3030 ಕೋಟಿ ರೂಪಾಯಿಗಳನ್ನು ಕೊಟ್ಟಿದೆ, 2002–03ರಲ್ಲಿ 3040 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, 2003–04ರಲ್ಲಿ 3010 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಷ್ಟು ಹಣವನ್ನು ವಿನಿಯೋಗ ಮಾಡಿದ ಮೇಲೆ ಪ್ರಾಯಶಃ ಈ ಸರ್ಕಾರವಾಗಲೀ, ನಾವಾಗಲೀ ಎಲ್ಲಾದರೂ ಎಡವುತ್ತಾ ಇರಬಹುದೆಂದು ನಮಗೆ ಮನವರಿಕೆ ಆಗಬಹುದೇನೋ ಎಂದೆನಿಸುತ್ತದೆ. ಲೋಕೋಪಯೋಗಿ ಮತ್ತು ಜಲಸಂಪನ್ಮೂಲ ಇಲಾಖೆಯ ಬೇಡಿಕೆಗಳ ವರದಿ 2003–04 ಎಂದು ಇದೆ. ಅದನ್ನು ಅವರೇ ಬೇಕಾದರೆ ರೆಫರ್ ಮಾಡಿಕೊಳ್ಳಬಹುದು. ಈ ವರದಿಯಲ್ಲಿ ಕೊಟ್ಟಿರುವ ಪ್ರಕಾರ ಹೇಳುವುದಾದರೆ, ಕೃಷ್ಣಾ ಕೊಳ್ಳದಲ್ಲಿ ಇಲ್ಲಿಯವರೆಗೆ ಕೇವಲ 15 ಬೃಹತ್ ನೀರಾವರಿ ಯೋಜನೆಗಳು ಕಂಪ್ಲೀಟ್ ಆಗಿವೆ. ಕಂಪ್ಲೀಟ್ ಆಗದೇ ಇರತಕ್ಕಂಥದ್ದು 22 ಆಗಿರುತ್ತದೆ. ಕಾವೇರಿ ಕೊಳ್ಳದಲ್ಲಿ ಕಂಪ್ಲೀಟ್ ಆಗಿರುವಂಥ ಬೃಹತ್ ನೀರಾವರಿ ಯೋಜನೆಗಳು 8, ಕಂಪ್ಲೀಟ್ ಆಗದೆ ಇನ್ನೂ ಉಳಿದಿರತಕ್ಕಂಥದ್ದು 21 ಯೋಜನೆಗಳು. ಗೋದಾವರಿ ಕೊಳ್ಳದಲ್ಲಿ 8 ಯೋಜನೆಗಳು ಇದ್ದು ಅಲ್ಲಿ ಒಂದೂ ಕೂಡ ಕಂಪ್ಲೀಟ್ ಆಗಿಲ್ಲ. ಇನ್ನು ಆಶ್ಚರ್ಯಕರ ಸಂಗತಿ ಎಂದರೆ, ಏತ

ನೀರಾವರಿಗಳಲ್ಲಿ ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ನವರು ತೆಗೆದುಕೊಂಡಿರುವಂಥ ಪ್ರಾಜೆಕ್ಟ್‌ಗಳು ಎಷ್ಟಿವೆ ಎಂಬುದನ್ನು ಓದಿ ಹೇಳುತ್ತಿದ್ದೆ ಆದರೆ ಸಮಯ ಇಲ್ಲವೆಂದು ನೀವು ಬಿಲ್ ಮಾಡಿದ್ಧರಿಂದ ನಾನು ಅದನ್ನು ಬಿಟ್ಟುಬಿಡುತ್ತೇನೆ. ಆದರೆ ಏತ ನೀರಾವರಿ ಯೋಜನೆಯಲ್ಲಿ ಇವರು ಕೈಗೊಂಡಿರತಕ್ಕಂಥ 162 ಯೋಜನೆಗಳಲ್ಲಿ ಕೇವಲ 42 ಮಾತ್ರ ಕಂಪ್ಲೀಟ್ ಆಗಿದೆ. ನನಗೆ ಆಶ್ಚರ್ಯ ಆಗುತ್ತಿದೆ, ಇಷ್ಟೊಂದು ಮಂದಗತಿಯಲ್ಲಿ ನೀರಾವರಿ ಇಲಾಖೆಯನ್ನು ನಿರ್ವಹಿಸಿಕೊಂಡು ಹೋದರೆ ಬಹಳ ಕಷ್ಟ ಇದೆ, ಇದು ನಿಮಗೆ ಗೊತ್ತಿದೆ, ಈಗಾಗಲೇ ಬಚಾವತ್ ಆಯೋಗದ ಅವಧಿ ಕೂಡ ಮುಗಿದಿದೆ. ಈ ರಾಜ್ಯ ಎಲ್ಲಾದರೂ ನೀರಾವರಿ ವಿಷಯದಲ್ಲಿ ಎಡವಿ ಬೇರೆಯವರಿಗೆ ಒಂದು ಅವಕಾಶವನ್ನು ಏನಾದರೂ ಮಾಡಿಕೊಟ್ಟರೆ ಇದನ್ನು ಕಬಳಿಸತಕ್ಕಂಥ ಹುನ್ನಾರವನ್ನು ಬೇರೆ ರಾಜ್ಯ ಮಾಡಬಹುದೆಂದು ನನಗನ್ನಿಸುತ್ತದೆ. ಅದರ ಬಗ್ಗೆ ನಾನು ಹೆಚ್ಚಿಗೆ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಈ ರಾಜ್ಯದ ಪಕ್ಕದಲ್ಲಿ ಇರತಕ್ಕಂಥ ಮೂರು ರಾಜ್ಯಗಳ ಬಗ್ಗೆ ನಾನು ಹೇಳಬೇಕಾದರೆ, ಇವತ್ತು ನಾವು ನೆಲ ಮತ್ತು ಜಲ ಎರಡನ್ನೂ ಕಳೆದುಕೊಳ್ಳತಕ್ಕಂಥ ಸ್ಥಿತಿಗೆ ನಾವು ಬಂದಿದ್ದೇವೋ ಏನೋ ಎಂದು ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ಇಚ್ಛಿಸುತ್ತೇನೆ. ಏಕೆಂದರೆ ನೆಲದ ವಿಷಯ ಬಂದಾಗ ಮಾನ್ಯ ಮಹದೇವ ಪ್ರಸಾದ್ ಅವರು ಶೂನ್ಯ ವೇಳೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಿರುವುದು ನಿಮಗೂ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದಿರಿ. ಅವರು ಪ್ರಶ್ನೆ ಕೇಳಿ ಇವತ್ತಿಗೆ 7 ದಿವಸ ಕಳೆಯಿತು. ಅವರು ಕೇಳುತ್ತಾರೋ ಇಲ್ಲವೋ ಇವರು ಉತ್ತರ ಕೊಡುತ್ತಾರೋ ಇಲ್ಲವೋ, ಈ ಬಗ್ಗೆ ನಿಮ್ಮ ನಿವೇಚನೆಗೆ ಬಿಡುತ್ತೇನೆ. ಮಾನ್ಯ ಅಧ್ಯಕ್ಷರೆ, ಅದೇ ತರಹ ಮಹಾರಾಷ್ಟ್ರ ಗಡಿನಾಡು ಬಗ್ಗೆ ನಿಮಗೂ ಗೊತ್ತಿದೆ. ಆದರೆ ಜಲದ ವಿಚಾರವಾಗಿ ಹೇಳಬೇಕಾದರೆ, ಬಹಳ ವಿಶೇಷವಾಗಿ ನಮ್ಮ ರಾಜ್ಯದ ಸಾಮರಸ್ಯ ಬೇರೆ ರಾಜ್ಯದ ಜೊತೆ ಹೇಗೆ ಇದೆ ಎನ್ನುವುದಕ್ಕೆ ಒಂದು ಉದಾಹರಣೆ ಮೂಲಕ ನಿಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಭೀಮಾ ನದಿಯ ನೀರಿನ ವಿಚಾರದಲ್ಲಿ ಮಹಾರಾಷ್ಟ್ರದ ಜೊತೆಯಲ್ಲಿ ನಾವು ಇವತ್ತು ಹೋರಾಡತಕ್ಕಂಥ ಪರಿಸ್ಥಿತಿಗೆ ಬಂದಿದ್ದೇವೆ. ಅದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಬಂದಿರಬಹುದೆಂದು ನಾನು ಅಂದುಕೊಂಡಿದ್ದೇನೆ. ಕೃಷ್ಣಾ ನದಿ ನೀರಿನ ವಿಷಯದಲ್ಲಿ ಇವರಿಗೆ ಆಗಲೇ ಆಂಧ್ರದ ಜೊತೆ ದೊಡ್ಡ ಕದನವೇ ನಡೆದಿದೆ. ಕಾವೇರಿ ನೀರಿನ ವಿಷಯದಲ್ಲಿ ತಮಿಳುನಾಡಿನ ಜೊತೆ, ಮಹಾದಾಯಿ ನದಿ ನೀರಿನ ವಿಚಾರದಲ್ಲಿ ಗೋವಾದ ಜೊತೆ, ಹೀಗೆ ಇಷ್ಟು ನೀರಾವರಿ ಸಮಸ್ಯೆಗಳನ್ನು ನಾವು 4 ರಾಜ್ಯಗಳ ಜೊತೆಗೆ ಇಟ್ಟುಕೊಂಡು ಯಾವ ದಿಶೆಯಲ್ಲಿ ನೀರಾವರಿ ಪ್ರಗತಿಯನ್ನು ಸಾಧಿಸಲಿಕ್ಕೆ ನಮಗೆ ಶಕ್ತಿ ಇದೆ ಎನ್ನತಕ್ಕಂಥದ್ದನ್ನು ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಗೆ ಬಿಡುತ್ತೇನೆ. ಆದರೆ ನಾನು ಇನ್ನೊಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಅದೇನೆಂದರೆ, ನಮ್ಮ ನೀರಾವರಿಗೆ ಆಗತಕ್ಕಂಥ ಯೋಜನೆಯಾಗಿರತಕ್ಕಂಥ ಪ್ರದೇಶ 55 ಲಕ್ಷ ಹೆಕ್ಟೇರ್ ಇದೆ. ಈ 55 ಲಕ್ಷ ಹೆಕ್ಟೇರ್‌ನಲ್ಲಿ ಇವತ್ತು ಮೇಜರ್ ಇರಿಗೇಷನ್, ಮೈನರ್ ಇರಿಗೇಷನ್ ಅಥವಾ ಗ್ರೌಂಡ್ ವಾಟರನ್ನು ಹಿಡಿದುಕೊಂಡರೂ ಕೂಡ ನಾವು ಇವತ್ತಿನವರೆಗೆ ಸಾಧನೆ ಮಾಡಿರತಕ್ಕಂಥದ್ದು ಕೇವಲ 27 ಸಾವಿರ ಹೆಕ್ಟೇರ್ ಪ್ರದೇಶ ಮಾತ್ರ. ಫಿಸಿಕಲ್ ಪ್ರೋಗ್ರೆಸ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ರಿವ್ಯೂ ಮಾಡಿದರೆ ಪ್ರಾಯಶಃ ನಮ್ಮ ರಾಜ್ಯದ ಚಿತ್ರಣ ಅವರ ಎದುರಿಗೆ ಬರಬಹುದು ಎಂದು ನಾನು ತಮ್ಮ ಮೂಲಕ ಅವರಿಗೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಆದರೆ ನಾನು ಈ ಸರ್ಕಾರಕ್ಕೆ ಒಂದು ವಿಷಯವನ್ನು ತಮ್ಮ ಮುಖಾಂತರ ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಅದೇನೆಂದರೆ, ಇವತ್ತು ಕೃಷ್ಣಾ ಕೊಳ್ಳದ ವಿಚಾರದಲ್ಲಿ ಸರ್ಕಾರ ಬಹಳಷ್ಟು ವಿಭಿನ್ನವಾಗಿರತಕ್ಕಂಥ ಹೇಳಿಕೆಗಳನ್ನು ಕೊಡುತ್ತಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. 2002ನೇ ಇಸವಿಯಲ್ಲಿ ಕೃಷ್ಣಾ ಕೊಳ್ಳದ ಸಂಪೂರ್ಣ ನೀರಾವರಿ ಯೋಜನೆಗಳನ್ನು ಪೂರ್ತಿ ಮುಗಿಸುತ್ತೇವೆ ಎಂದು ಶ್ರೀ ಹೆಚ್.ಕೆ. ಪಾಟೀಲರು, ವಿಧಾನ ಪರಿಷತ್‌ನಲ್ಲಿ ಭರವಸೆಯನ್ನು ಕೊಟ್ಟಿದ್ದರು ಅಲ್ಲಿಂದ ಪುನಃ ಅವರೇ ಹೇಳುತ್ತಾರೆ. 2002 ಅಲ್ಲ, 2003 ಅಥವಾ 2004ನೇ ಇಸವಿಯಲ್ಲಿ ಮುಗಿಸುತ್ತೇವೆ ಎಂದು. ಮಾನ್ಯ ಮುಖ್ಯಮಂತ್ರಿಗಳು 2004ನೇ ಇಸವಿಗೆ ನಮ್ಮ ಕೃಷ್ಣಾ ಕೊಳ್ಳದ ನೀರಾವರಿ ಯೋಜನೆಗಳನ್ನು ಸಂಪೂರ್ಣವಾಗಿ ನಾವು ಮುಗಿಸುತ್ತೇವೆ. ಎಂದು ಹೇಳಿದರು. ಮತ್ತೆ ಜುಲೈ 2002ರಲ್ಲಿ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಶ್ರೀ ಹೆಚ್.ಕೆ. ಪಾಟೀಲರ ಒಂದು ಹೇಳಿಕೆ ಬಂದಿದೆ. ಅದೇನೆಂದರೆ '2005ನೇ ಇಸವಿಯೊಳಗೆ ಕೃಷ್ಣಾ ಕೊಳ್ಳದ ನೀರಾವರಿ ಯೋಜನೆಗಳು ಮುಗಿಯುತ್ತವೆ' ಎಂದು ಹೇಳಿದ್ದಾರೆ. 2001ನೇ ಇಸವಿ ಆಯಿತು, 2002 ಆಯಿತು, 2003 ಆಯಿತು, 2004 ಆಯಿತು, ಈಗ 2005ಕ್ಕೆ ಮುಗಿಸುತ್ತೇವೆಂದು ಹೇಳುತ್ತಿದ್ದಾರೆ. ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಕೇಳುವುದಿಷ್ಟೆ; ಈಗಲಾದರೂ ನಿರ್ದಿಷ್ಟವಾದ ದಿನಾಂಕವನ್ನು ರಾಜ್ಯದ ಜನತೆಗೆ ಕೊಡಿ. ಕೃಷ್ಣಾ ಕೊಳ್ಳದ ನೀರಾವರಿ ಯೋಜನೆಗಳನ್ನು ತಾವು ಯಾವ ವರ್ಷದಲ್ಲಿ ಮುಗಿಸುತ್ತೀರಿ ಎನ್ನತಕ್ಕಂಥ ಮಾತನ್ನು ಈ ರಾಜ್ಯದ ಜನತೆಗೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರೆ ಪ್ರಾಯಶಃ ಅದು ಒಂದು ಸ್ವಾರಸ್ಯಕರ ಚಿಂತನೆ ಆಗಬಹುದು ಎಂದು ನಾನು ತಮ್ಮ ಮುಖಾಂತರ ಅವರ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಏಕೆ ಈ ಮಾತನ್ನು ನಾನು ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆಂದರೆ ತಮಗೆ ಗೊತ್ತಿರುವ ಹಾಗೆ ಆಂಧ್ರ ಸರ್ಕಾರ ಈಗಾಗಲೇ ಬಚಾವತ್ ಅವಾರ್ಡ್‌ನಿಂದ ಬರಬೇಕಾಗಿರುವ 800 ಟಿಎಂಸಿ ನೀರಿಗಿಂತಲೂ ಹೆಚ್ಚಿಗೆ ನೀರನ್ನು ಉಪಯೋಗಿಸಿಕೊಂಡು ಇವತ್ತು ಈ ರಾಜ್ಯ ಸರ್ಕಾರ ತಪ್ಪು ಮಾಡಿದೆ ಎನ್ನುವ ವಾದವನ್ನು ಅವರು ಕೇಂದ್ರ ಸರ್ಕಾರದ ಮುಂದಾಗಬಹುದು ಅಥವಾ ಸರ್ವೋಚ್ಛ ನ್ಯಾಯಾಲಯದ ಮುಂದಾಗಬಹುದು ಮಂಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ನನ್ನ ತಿಳುವಳಿಕೆ ಪ್ರಕಾರ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಶ್ರೀ ಶೈಲಂ ಲೆಫ್ಟ್ ಅಂಡ್ ರೈಟ್ ಬ್ಯಾಂಕ್ ಕ್ಯಾನಲ್ ಬಗ್ಗೆ, ಭೀಮಾ ಲಿಫ್ಟ್, ತೆಲುಗು ಗಂಗಾ, ಪುಲಚಿಂತಲಂ ಬಗ್ಗೆ ಹೇಳಿದ್ದಾರೆ. ಇಷ್ಟೊಂದು ಆಂಧ್ರ ಸರ್ಕಾರ ಇಲ್ಲೀಗಲ್ ಪ್ರಾಜೆಕ್ಟ್‌ಗಳನ್ನು ಕೈಗೊಂಡರೂ ಕೂಡ ನಾವು ಲೀಗಲ್ ಆಗಿ ಫೈಟ್ ಮಾಡುತ್ತಿದ್ದೇವೆನ್ನುವ ಗೂಬೆಯನ್ನು ಈ ಸರ್ಕಾರದ ಮೇಲೆ ಕೂರಿಸುತ್ತಿದ್ದಾರೆ. ಇನ್ನೊಂದೇನೆಂದರೆ, ನಾನು ಆಂಧ್ರ ಸರ್ಕಾರದ ಮೆಚ್ಚುಗೆ ಎಂದು ಹೇಳಬೇಕಾಗಿಲ್ಲ, ಕರ್ನಾಟಕದವರನ್ನು ಅವರು ಹೇಗೆ ತಡೆದರು ಎನ್ನುವ ಉದಾಹರಣೆಯನ್ನು ನಾನು ತಮ್ಮ ಗಮನಕ್ಕೆ ತರಲಿಚ್ಛೆಪಡುತ್ತಿದ್ದೇನೆ. How successfully Andra Chief Minister has managed to prevent the State to plead itself on behalf of the CMC or Supreme Court. ಇವತ್ತು 524 ಅಡಿ ಹೈಟ್‌ಗೆ ತೆಗೆದುಕೊಂಡು ಹೋಗುವ ವಿಚಾರದಲ್ಲಿ ಸಿಂಧ್ಯಾರವರು ಮೊನ್ನೆ ಮಂಡನೆ ಮಾಡಿದರು. ಇವತ್ತಿನವರೆಗೂ ನಾವು 524 ಅಡಿ ಡ್ಯಾಂ ಹೈಟ್‌ಗೆ ಹೋಗಿಲ್ಲ. ಕಾರಣ ನಾನು ಹೇಳುತ್ತಿದ್ದೇನೆ, ನಿಮ್ಮ ಡ್ಯಾಂಗೆ ಮಾಡಿರುವುದು, 524 ಅಡಿ ಯೋಜನೆಗೆ ತಾವು ಮಾಡಿದ್ದೀರಿ. ಆದರೆ, ಇನ್ನೂವರೆಗೆ ತಾವು 524 ಅಡಿಗೆ ಹೋಗುವ ದಿಸೆಯಲ್ಲಿ ಪ್ರಯತ್ನ ಮಾಡಿಲ್ಲ ಮತ್ತು ಈಗಾಗಲೇ ನಿಮ್ಮ ಲೀಗಲ್ ಯೋಜನೆಗಳು, ಅಪ್ಪರ್‌ತುಂಗಾ

ಪ್ರಾಜೆಕ್ಟ್‌ಗೆ, ಇವರಿಗೆ ಸಿಡಬ್ಲ್ಯುಸಿನಿಂದ ಕ್ಲಿಯರೆನ್ಸ್ ಸಿಕ್ಕಿದೆ. ಆದರೂ ಕೂಡ ಆಂಧ್ರ, ಇದು ನಿಮ್ಮ ಇಲ್ಲೀಗಲ್ ಪ್ರಾಜೆಕ್ಟ್ ಎಂದು ಹೇಳುತ್ತದೆ. ಪರಗೋಡು ಬಗ್ಗೆ ಶ್ರೀ ಹೆಚ್.ಕೆ. ಪಾಟೀಲ್‌ರವರು ಒಂದು ಮಾತು ಹೇಳಿದರು. ಇಲ್ಲ, ಪರಗೋಡು ವಿಚಾರದಲ್ಲಿ ಪಾಪ ನಮ್ಮ ಸದಸ್ಯರು ಸರ್ಕಾರದ ಗಮನ ಸೆಳೆದು, ಸಂಘರ್ಷಕ್ಕೆ.......

**ಅಧ್ಯಕ್ಷರು** : ನಾನು ಬೆಲ್ ಹೊಡೆದಿದ್ದು ನಿಮಗೆ ಕೇಳಿಸಲಿಲ್ಲವೇ?

**ಶ್ರೀ ಶಿವಾನಂದ ಎಸ್ ಪಾಟೀಲ್** : ಕೇಳಿಸಿತು. ಕೂಡು ಎಂದರೆ ಕೂರುತ್ತೇನೆ.

**ಅಧ್ಯಕ್ಷರು** : ಆ ಪ್ರಶ್ನೆಯಲ್ಲ. ಈಗ 1 ಗಂಟೆ 5 ನಿಮಿಷದಲ್ಲಿ ಒನ್ ಹವರ್ ತಮ್ಮ ಪಾರ್ಟಿಯವರು ಒಬ್ಬರೇ ಮಾತನಾಡಿದ್ದಾರೆ. ಪಾಪಣ್ಣನವರನ್ನು ಬಿಟ್ಟರೆ ಮಿಕ್ಕಿದ್ದೆಲ್ಲಾ ನೀವೇ ಮಾತನಾಡಿದ್ದೀರಿ. Please conclude.

**ಶ್ರೀ ಶಿವಾನಂದ ಎಸ್ ಪಾಟೀಲ್** : ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಪರಗೋಡು ವಿಚಾರದಲ್ಲಿ ಈ ಸರ್ಕಾರ .........

**ಅಧ್ಯಕ್ಷರು** : ಕೇಳಿ ಸ್ವಾಮಿ, ನೀವು 2 ಹವರ್ಸ್ ಮಾತನಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ನಮಗೆ ಸಮಯ ಇಲ್ಲವಲ್ಲಾ.

**ಶ್ರೀ ಶಿವಾನಂದ ಎಸ್ ಪಾಟೀಲ್** : ತಾವು ಕೊಟ್ಟಿದ್ದೀರಿ, ನಾನು ಮೊದಲೇ ಇಚ್ಛೆಪಡುವುದಿಲ್ಲ. ನಮಗೆ ಮಾತನಾಡುವುದಕ್ಕೆ ಆಸೆ ಇಲ್ಲ. ಈ ಸಭೆಯಲ್ಲಿ ಯಾರ್‍ಯಾರೋ ಏನೇನೋ ಮಾತನಾಡುತ್ತಿರುತ್ತಾರೆ. ನಾನು ಸುಮ್ಮನೆ ನೋಡುತ್ತಾ ಕೂರುತ್ತೇನೆ.

**ಅಧ್ಯಕ್ಷರು** : ನಿನ್ನೆ ಒಂದು ದಿವಸ ಅಡ್ಜರ್ನ್ ಮಾಡದೇ ಹೋಗಿದ್ದರೆ ಎಲ್ಲಾ ಸರಿಹೋಗಿರುತ್ತಿತ್ತು.

**ಶ್ರೀ ಶಿವಾನಂದ ಎಸ್ ಪಾಟೀಲ್** : ಅದಕ್ಕೆ ನಾನೇನು ಮಾಡಲಿ?

**ಅಧ್ಯಕ್ಷರು** : ಅದಕ್ಕೆ ಎಲ್ಲರೂ ಕಾರಣಕರ್ತರು.

**ಶ್ರೀ ಶಿವಾನಂದ ಎಸ್ ಪಾಟೀಲ್** : ಫ್ಲೋರ್ ಲೀಡರ್ಸ್ ಅನ್ನು ನೀವು ಮ್ಯಾನೇಜ್ ಮಾಡಬೇಕು.

**ಅಧ್ಯಕ್ಷರು** : ಆಯಿತು. ತಾವು ಮುಗಿಸಿ.

**ಶ್ರೀ ಶಿವಾನಂದ ಎಸ್ ಪಾಟೀಲ್** : ಇದು 27ನೇ ಜುಲೈನ ಸಂಡೇ ಟೈಮ್ಸ್ ಪೇಪರ್‌ನಲ್ಲಿ "ಸೆಂಟರ್ ಥ್ಯಾಂಕ್ಸ್ ವಿಕ್ಟರಿ ಫಾರ್ ಕರ್ನಾಟಕ – ಹೆಚ್.ಕೆ. ಪಾಟೀಲ್" ಎಂದು ಒಂದು ಕಡೆ ಹೇಳುತ್ತಾರೆ, ಅಲ್ಲೇ ಆಂಧ್ರ ಚೀಫ್ ಮಿನಿಸ್ಟರ್, ನೋ ಸೆಂಟ್ರಲ್ ಕ್ಲಿಯರೆನ್ಸ್ ಫಾರ್ ಪರಗೋಡು ಎಂದು ಹೇಳುತ್ತಾರೆ. ಒಂದೇ ಸ್ಟೇಟ್‌ಮೆಂಟ್‌ನಲ್ಲಿ ಹೇಳುತ್ತಾರೆ. ಯಾವ ಪರಗೋಡು ವಿಚಾರದಲ್ಲಿ ಈ ರಾಜ್ಯ ಸಾಧನೆ ಮಾಡಿದೆ ಎನ್ನುವುದನ್ನು ಇವರು ತಿಳಿಸಬೇಕೆಂದು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿಂದ ಇನ್ನೊಂದು ವಿಚಾರದಲ್ಲಿ, ಸಂಯುಕ್ತ ಕರ್ನಾಟಕದಲ್ಲಿ ದಿ: 28.7.2003ರಲ್ಲಿ ನೀರಾವರಿ ವಿಚಾರದಲ್ಲಿ, ಬಿಬಿಸಿ ದೃಷ್ಟಿಯಲ್ಲಿ 'ಕರ್ನಾಟಕ ಮುಂಡರ ಜಗಳ ಗಂಟಿ ರಾಜ್ಯ ಎಂದು ಬಂದಿದೆ. ಈ ತರಹದ ಲೇಖನಗಳನ್ನು ಈ ಸರ್ಕಾರದ ಮೇಲೆ ಬೇರೆ ರಾಜ್ಯ ಸೃಷ್ಟಿ ಮಾಡಿಕೊಳ್ಳುತ್ತಾ ಹೋದರೆ, ಅದಕ್ಕೆ ಕನಿಷ್ಠ ಪಕ್ಷ ಸೌಜನ್ಯಕ್ಕಾದರೂ ಸರ್ಕಾರದ ವತಿಯಿಂದ ಅವರು ಉತ್ತರ ಕೊಡಬೇಕು.

**ಅಧ್ಯಕ್ಷರು** : ಉತ್ತರ ಕೊಡುತ್ತಾರೆ ಬಿಡಿ.

**ಶ್ರೀ ಶಿವಾನಂದ ಎಸ್ ಪಾಟೀಲ್** : ಅಧ್ಯಕ್ಷರೆ, ತಾವು ಕೊಡಿಸಿ.

**ಅಧ್ಯಕ್ಷರು** : ಕೊಡುತ್ತಾರೆ. ಅವರು ಪ್ರಾರಂಭ ಮಾಡುವುದಕ್ಕೆ ಬಿಡಿ.

**ಶ್ರೀ ಶಿವಾನಂದ ಎಸ್ ಪಾಟೀಲ್** : ನಾನು ಗಮನ ಸೆಳೆಯುತ್ತಿದ್ದೇನೆ. ಉತ್ತರ ಕೊಡಿಸುವುದು ನಿಮ್ಮ ಧರ್ಮ.

**ಅಧ್ಯಕ್ಷರು** : ಆಯಿತು. ನಾನು 3-4 ಸಲ ಬೆಲ್ ಹೊಡೆದಿದ್ದೇನೆ. ದಯವಿಟ್ಟು ತಾವು ಕುಳಿತುಕೊಳ್ಳಿ.

**ಶ್ರೀ ಶಿವಾನಂದ ಎಸ್ ಪಾಟೀಲ್** : ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಇನ್ನೊಂದು ವಿಷಯದಲ್ಲಿ ಗಮನ ಸೆಳೆಯುವುದೇನೆಂದರೆ, ಗೋದಾವರಿ ವಾಟರ್ ಡಿಸ್‌ಪ್ಯೂಟ್‌ನಲ್ಲಿ ಕೊಲ್ಲಾವರಂ ವಿಷಯದಲ್ಲಿ ನಮ್ಮ ರಾಜ್ಯಕ್ಕೆ 40 ಟಿಎಂಸಿ ನೀರು ಸಿಗಬೇಕಾಗಿತ್ತು. ಆ ದಿಸೆಯಲ್ಲಿ ಇದುವರೆಗೆ ಆಂಧ್ರದ ಜೊತೆ ವಿಚಾರ ವಿನಿಮಯ ಮಾಡುವ ದಿಸೆಯಲ್ಲಿ ಸಾಗಿಲ್ಲವೆಂದು ನಾನು ಸರ್ಕಾರದ ಗಮನ ಸೆಳೆದು, ಈಗ ತಾವು ಅವಕಾಶ ಕೊಟ್ಟಿದ್ದೀರಿ, ತಮ್ಮ ಮನಸ್ಸನ್ನು ನೋಯಿಸುವುದಕ್ಕೆ ನಾನು ಇಚ್ಛೆಪಡುವುದಿಲ್ಲ; ಏಕೆಂದರೆ, ತಾವು ಬೆಲ್ ಹೊಡೆದಿದ್ದು ನನಗೆ ಕೇಳಿಸಿದೆ. ನಿಜವಾಗಲೂ ನಾನು ಬಹಳಷ್ಟು ಮಾತನಾಡಬೇಕಾಗಿತ್ತು. ಸರ್ಕಾರ ಈ ವಿಚಾರಗಳಿಗೆ ತಮ್ಮ ಸ್ಪಷ್ಟ ಉತ್ತರ ಕೊಟ್ಟರೆ, ಈ ಆಯವ್ಯಯಕ್ಕೆ ಹೊಸ ಸ್ವರೂಪ ಬರುತ್ತದೆಂದು ಹೇಳಿ ನಾನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆದು ಅವಕಾಶ ಕೊಟ್ಟದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಅಧ್ಯಕ್ಷರು** : ತಾವು ಪ್ರಾರಂಭ ಮಾಡಿ.

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ಬಹಳ ಜನರು ಮಾತನಾಡುವವರಿದ್ದಾರೆ. ತರಾತುರಿಯಲ್ಲಿ ಈ ತರಹ ಮುಖ್ಯಮಂತ್ರಿಗಳು.....

**ಅಧ್ಯಕ್ಷರು** : ನಾನು ಆಗಲೇ ತಮ್ಮನ್ನು ಕರೆದೆ. ಈ ಕಡೆ ಯಾರಾದರೂ ಇದ್ದೀರಾ ಎಂದರೆ ಒಬ್ಬರೂ ಪತ್ತೇ ಇಲ್ಲ. ಸಂಗಣ್ಣನವರು ನನ್ನ ಕೊಠಡಿಗೆ ಬಂದು ಹೇಳಿ ಹೋದರು. ಅವರು ಪತ್ತೇ ಇಲ್ಲ. ನೀವು ಬಂದಾಗ ಕರೆಯುವುದಕ್ಕೆ ನಾವು ಇಲ್ಲಿ ಇಲ್ಲ. ನಾನು ಕರೆದಾಗ ಅವರು ಇರಬೇಕಲ್ಲವೇ?

**ಶ್ರೀ ಎಸ್.ಎಸ್. ಪಾಟೀಲ್** : ಮೊನ್ನೆ ದಿವಸ ಮಾತನಾಡುವಾಗ ನಮಗೊಂದು ತಾಸು, ಅವರಿಗೊಂದು ತಾಸು ಕೊಡಬೇಕೆಂದು ತೀರ್ಮಾನವಾಗಿ, ಆ ದಿವಸ ಅಸೆಂಬ್ಲಿ ಅಡ್ಜರ್ನ್ ಆಯಿತು.

**ಅಧ್ಯಕ್ಷರು** : ಪಾಟೀಲರೆ, ನಾನು ತಮ್ಮನ್ನು ಆಗಲೇ ಕರೆದೆ. ಸಂಗಣ್ಣನವರನ್ನು ಕರೆದೆ, ಅವರು ನನ್ನ ಕೊಠಡಿಗೆ ಬಂದು ಹೇಳಿ ಹೋದರು. ನಾನು ಕರೆದಾಗ ಇಲ್ಲ. ಈ ಪಾರ್ಟಿಯಲ್ಲಿ ಯಾರಾದರೂ ಇದ್ದೀರಾ ಎಂದರೆ, ನೋ, ನೋ ಐ ಡೋಂಟ್ ವಾಂಟ್ ಆಲ್ ದೋಸ್ ಥಿಂಗ್ಸ್. ಮಾತನಾಡುವುದಿದ್ದರೆ, ಇಲ್ಲಿ ಕಾಯುತ್ತಿರಬೇಕು. ಯು ಮಸ್ಟ್ ವೆಯಿಟ್ ಹಿಯರ್. ಆಗ ಇತ್ತ ಕಡೆ ಯಾರಾದರೂ ಇದ್ದೀರಾ ಎಂದರೆ ಆಗಲೂ ಯಾರೂ ಇಲ್ಲ. ನೀವು ಬಂದಾಗಲೆಲ್ಲಾ ನಾವು ಕರೆಯುವುದಕ್ಕಾಗುತ್ತದೆಯೇ?

**ಶ್ರೀ ಎಸ್.ಎಸ್. ಪಾಟೀಲ್** : ನಮ್ಮ ಪಕ್ಷದ ಅಧ್ಯಕ್ಷರು ಲಿಂಗೈಕ್ಯರಾಗಿರುವುದರಿಂದ, ಪಾರ್ಟಿ ಆಫೀಸ್‌ನಲ್ಲಿ ಕಳುಹಿಸಿ ಬಂದೆವು. ಅದಕ್ಕೆ ಲೇಟ್ ಆಗಿದೆ. ದಯವಿಟ್ಟು ಕ್ಷಮಿಸಬೇಕು. ನಾವು ಯಾವಾಗಲೂ ತಡವಾಗಿ ಬಂದಿಲ್ಲ.

**ಅಧ್ಯಕ್ಷರು** : ನೋ. ಅವರು ಹೇಳಿ ಹೋದವರೂ ಬಂದಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್** : ಅದೇ ಆಗಿರುವುದು. ಅವರು 15 ನಿಮಿಷ ಮಾತನಾಡುತ್ತಾರೆ. ನಂತರ ನಾನು ಮಾತನಾಡುತ್ತೇನೆ.

**ಅಧ್ಯಕ್ಷರು** : ಮೊನ್ನೆ ಮಾತನಾಡಿದ್ದೀರಿ. ನಿಮ್ಮಿಷ್ಟ.

**ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು)** : ನಿಮ್ಮಿಷ್ಟ ಎಂದು ಹೇಳುವುದಕ್ಕಾಗುವುದಿಲ್ಲ. ಫೈನಾನ್ಸ್ ಬಿಲ್ ಪಾಸಾಗಬೇಕು.

**ಶ್ರೀ ಎಸ್.ಎಸ್. ಪಾಟೀಲ್** : ತಾವು ನಮ್ಮ ಪಕ್ಷಕ್ಕೊಂದು ತಾಸು, ಅವರ ಪಕ್ಷಕ್ಕೊಂದು ತಾಸು ಅವಕಾಶ ಕೊಡುತ್ತೇವೆಂದು ಹೇಳಿದ್ದಿರಿ.

**ಅಧ್ಯಕ್ಷರು** : ನಾನು ಕರೆದೆ. ನೀವು ಯಾರೂ ಇರಲಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್** : ಇವತ್ತು ಒಂದು ದಿವಸ ಕ್ಷಮಿಸಿ ಎಂದು ಹೇಳುತ್ತಿದ್ದೇನೆ.

**ಅಧ್ಯಕ್ಷರು** : ಇದು ಮೇಲ್ಮನೆಗೆ ಹೋಗಿ ಪಾಸಾಗಿ ವಾಪಸ್ಸು ಬರಬೇಕು. ಇವತ್ತೇ ಬರಬೇಕು. ನಿಮ್ಮಿಷ್ಟ ಬಂದ ಹಾಗೆ ನೀವು ಬಂದರೆ ಹೇಗೆ? ಅಪ್ರೋಪ್ರಿಯೇಷನ್ ಬಿಲ್ ಅನ್ನು ಈಗ ತರುತ್ತೇವೆ, ಆಗ ಮಾತನಾಡಿ.

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ಆಗ ಮಾತನಾಡಿ ಎಂದರೆ ಹೇಗೆ?

**ಅಧ್ಯಕ್ಷರು** : ಕೃಷ್ಣಮೂರ್ತಿಯವರೇ, ನಾನು ಆಗಲೇ ಕರೆದಾಗ ನೀವು ಇರಲಿಲ್ಲ. ನಾನೇನು ಮಾಡಲಿ?

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ನಾನೂ ಅಲ್ಲಿಗೆ ಹೋಗಿದ್ದೆ.

**ಅಧ್ಯಕ್ಷರು** : ಸಂತೋಷ. ಅಲ್ಲಿಗೆ ಹೋಗಿದ್ದಕ್ಕೆ ನಾನು ಇಲ್ಲವೆಂದು ಹೇಳಲಿಲ್ಲ. ನಾವು ಕರೆದಾಗ ನೀವು ಬರದಿದ್ದರೆ ಹೇಗೆ?

**ಶ್ರೀ ಎಸ್.ಎಸ್. ಪಾಟೀಲ್** : ನನಗೆ ಮಾತನಾಡಲು ಅವಕಾಶ ಕೊಡುವುದಿಲ್ಲವೇ?

**ಶ್ರೀ ಡಿ.ಬಿ. ಚಂದ್ರೇಗೌಡ** : ಪ್ರತಿಪಕ್ಷದ ಉಪನಾಯಕರು ಮಸೂದೆ ಬಗ್ಗೆ ಕೆಲವು ವಿವರಣೆಗಳನ್ನು ಕೇಳಿದರು. ಶಾಸನ ಸಭೆಯಲ್ಲಿ ಮಸೂದೆ ಪಾಸ್ ಆಗುತ್ತದೆ, ಆದರೆ, ರಾಜ್ಯಪಾಲರಿಂದ......

**ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)** : ಇನ್ನೊಂದು ಅರ್ಧ ತಾಸು ಅವಕಾಶ ಕೊಡಿ.

**ಗೊಂದಲ**

**Sri D.B. Chandregowda :** How to manage the House?

**ಶ್ರೀ ಜಗದೀಶ್ ಶೆಟ್ಟರ್** : ಇನ್ನೊಂದು ಅರ್ಧ ತಾಸು ಚರ್ಚೆ ಮುಂದುವರೆಸಿ, 12 ಗಂಟೆಗೆ ಸರ್ಕಾರದವರು ಉತ್ತರ ಕೊಡಲಿ.

**ಶ್ರೀ ಎಸ್.ಎಸ್. ಪಾಟೀಲ್** : ನಮ್ಮ ಪಕ್ಷಕ್ಕೊಂದು ಗಂಟೆ, ಅವರ ಪಕ್ಷಕ್ಕೊಂದು ಗಂಟೆ ಕೊಡುತ್ತೇವೆಂದು ಆ ದಿವಸ ಒಪ್ಪಿದ್ದಾರೆ. ಇವತ್ತು ಲೇಟ್ ಆಗಿದೆ, ಕ್ಷಮಿಸಬೇಕು. ಏಕಾಗಿದೆ ಎಂಬುದು ತಮಗೆ ಗೊತ್ತಿದೆ. ಇಲ್ಲದಿದ್ದರೆ, ನಾವು ಯಾವಾಗಲೂ ಲೇಟ್ ಆಗಿ ಬಂದಿಲ್ಲ.

**ಶ್ರೀ ಡಿ.ಬಿ. ಚಂದ್ರೇಗೌಡ** : ಒಂದು ಕ್ಲಾರಿಫಿಕೇಷನ್ ಇದೆ. ಕಳೆದ ಅಧಿವೇಶನದಲ್ಲಿ ಕರ್ನಾಟಕ ಲೆಜಿಸ್ಲೇಚರ್ಸ್ ಸ್ಯಾಲರಿ, ಪೆನ್‌ಷನ್ ಅಂಡ್ ಅಲೋಯನ್ಸ್‌ಸ್ ಬಿಲ್, 2002 ಈ ಸದನದಲ್ಲಿ

ಮಂಜೂರಾಗಿತ್ತು. ಆದರೆ, ರಾಜ್ಯಪಾಲರಿಂದ ವಾಪಸ್ಸು ಬಂದಿದೆ ಎನ್ನುವ ಒಂದು ರೀತಿಯ ಆಪಾದನೆ ರೂಪದಲ್ಲಿ ಮಾಡಿದ್ದಾರೆ. ಅದು ಹಾಗಾಗಿದ್ದಲ್ಲ. When the original bill was moved, ನಮ್ಮ ಫೈನಾನ್ಷಿಯಲ್ ಇಂಪ್ಲಿಕೇಷನ್ಸ್ ಇಲ್ಲವೆಂದು ಹೇಳಿದ್ದೇವೆ. There is no extra expenditure involved in the proposed measure ಎನ್ನುವುದನ್ನು ಹೇಳಿದ್ದೇವೆ. ಆಮೇಲೆ ನಡೆದ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಪ್ರಯಾಣ ಭತ್ಯೆಯನ್ನು 6 ರೂಪಾಯಿಗಳಿಂದ 8 ರೂಪಾಯಿಗಳಿಗೆ ಏರಿಸಬೇಕೆನ್ನುವ ತೀರ್ಮಾನಕ್ಕೆ ನಾವು ಬಂದೆವು. ಆ ತೀರ್ಮಾನವನ್ನು ನಾವು ಫೈನಾನ್ಸ್ ಕನ್‌ಕರೆನ್ಸ್‌ಗೆ ಕಳುಹಿಸುವುದಕ್ಕೆ ಸಮಯವಿರಲಿಲ್ಲ. ಕೊನೆ ದಿವಸ, 31ನೇ ತಾರೀಖು ಈ ಬಿಲ್‌ಗೆ Amendment was moved here. ಆದ್ದರಿಂದ, ಆತುರವಾಗಿ ಅದು ಮಂಜೂರಾಯಿತು. ಈ ಮಸೂದೆ ಹೋದಾಗ ಫೈನಾನ್ಷಿಯಲ್ ಇಂಪ್ಲಿಕೇಷನ್ ಆಗುತ್ತದೆಂದು ಹೇಳಿ ರಾಜ್ಯಪಾಲರಿಂದ ವಾಪಸ್ಸು ಬಂದಿದೆ. ತಾಂತ್ರಿಕ ಕಾರಣಕ್ಕಾಗಿಯೇ ಹೊರತು ಅಗೌರವ ಸೂಚಿಸುವುದು ಯಾವುದೂ ಇಲ್ಲ. We will send it back only for technical reasons. ಅಷ್ಟೆ. ಆದ್ದರಿಂದ ಅದಕ್ಕೇನೂ ಬಾಧಕವಿಲ್ಲ.

**ಶ್ರೀ ಎನ್. ಯೋಗೀಶ್ ಭಟ್** : ಕೇವಲ 10 ನಿಮಿಷ ಅವಕಾಶ ಕೊಡಿ.

**ಅಧ್ಯಕ್ಷರು** : ನಿಮ್ಮ ಪಾರ್ಟಿಯವರೇ ಇಬ್ಬರು, ಮೂವರು ಮಾತನಾಡಿದ್ದಾರೆ. ಮಾನ್ಯ ಎಸ್.ಎಸ್. ಪಾಟೀಲರೆ ಮಾತನಾಡಿ, 15 ನಿಮಿಷ ಅಷ್ಟೆ.

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ನನಗೆ ಮಾತನಾಡಲು ಅವಕಾಶ ಕೊಡಿ.

**ಅಧ್ಯಕ್ಷರು** : ಇದು ಮೇಲ್ಮನೆಗೆ ಹೋಗಿ ವಾಪಸ್ಸು ಬರಬೇಕು. ಇನ್ನೊಂದು ಸಲ ಮಾತನಾಡಿ.

**ಶ್ರೀ ಎಸ್.ಎಸ್. ಪಾಟೀಲ್** : ಇಲ್ಲಿ ತೀರ್ಮಾನವಾಗಿದೆ. ನಮ್ಮ ಪಕ್ಷಕ್ಕೆ ಅವಕಾಶ ಕೊಡಿ. ನಂತರ ಬೇರೆ ಯಾರಾದರೂ ಮಾತನಾಡಲು ಅವಕಾಶ ಕೊಡಿ. ನಮ್ಮ ಪಕ್ಷಕ್ಕೊಂದು ತಾಸು ಅವಕಾಶ ಕೊಡಿ.

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ಎಐಪಿಜೆಡಿಗೆ ಅವಕಾಶ ಕೊಟ್ಟಿದ್ದೀರಿ. ನಮ್ಮ ದಳದವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ.

**ಅಧ್ಯಕ್ಷರು** : ಎಲ್ಲರನ್ನೂ ಆಗಲೇ ಕರೆದೆವು. ಇರಲಿಲ್ಲ. ನಾನೇನು ಮಾಡಲಿ?

**ಶ್ರೀ ಎಸ್.ಎಸ್. ಪಾಟೀಲ್** : ನಾವೇ ಇನ್ನೂ ಯಾರೂ ಮಾತನಾಡಿಲ್ಲ.

**ಅಧ್ಯಕ್ಷರು** : ಚೆನ್ನಿಗಪ್ಪನವರು ಒನ್ ಹವರ್ ಮಾತನಾಡಿದ್ದಾರೆ.

**ಶ್ರೀ ಬಿ.ಆರ್. ನೀಲಕಂಠಪ್ಪ** : ಇರುವವರೇ 4 ಜನರು. ನಿಮ್ಮ ನಾಯಕರು ಮಾತನಾಡಿದ್ದಾರೆ.

**ಅಧ್ಯಕ್ಷರು** : ನೀಲಕಂಠಪ್ಪನವರೇ, ತಾವು ಕುಳಿತುಕೊಳ್ಳಿ.

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ಬೇರೆ ಮಾತನಾಡುವುದಕ್ಕೆ ಬಂದಿಲ್ಲ. ರಾಜ್ಯದ ನಮ್ಮ ತಾಲ್ಲೂಕಿನ ಜಿಲ್ಲೆಯ, ಈ ವರ್ಷದ ಅನುದಾನದ ಮೇಲೆ, ಹಣಕಾಸಿನ ಬಗ್ಗೆ ಮಾತನಾಡುವುದಕ್ಕೆ ಬಂದಿದ್ದೇವೆ.

**ಅಧ್ಯಕ್ಷರು** : ನಿಮ್ಮ ನಾಯಕರಾದ ಚೆನ್ನಿಗಪ್ಪನವರು ಮಾತನಾಡಿದ್ದಾರೆ. ತಾವು ಕುಳಿತುಕೊಳ್ಳಿ.

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ಮಾನ್ಯ ನೀಲಕಂಠಪ್ಪನವರು ಅದನ್ನು ಆಕ್ಷೇಪಣೆ ಮಾಡುವುದು ಬೇಡ.

**ಅಧ್ಯಕ್ಷರು** : ಪಾಟೀಲರೆ, ತಾವು 15 ನಿಮಿಷದಲ್ಲಿ ಕ್ಲೋಸ್ ಮಾಡಿ. ನೀಲಕಂಠಪ್ಪನವರೇ, ಈ ಸಭೆ ಇರುವುದು ಸಂವಾದ ಮಾಡುವುದಕ್ಕಲ್ಲ. ನಿಮ್ಮ ನಿಮ್ಮ ಜಿಲ್ಲೆಯ ಜಗಳ ಇಲ್ಲಿ ಬೇಡ.

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ನಾವು ಎರಡು ಜನ ಇರುತ್ತೇವೆ, ಮೂರು ಜನ ಇರುತ್ತೇವೆ ನಮಗೆ ಈ ಸದನದಲ್ಲಿ ಮಾತನಾಡುವ ಹಕ್ಕು ಇದೆ, ಅದಕ್ಕೆ ನಾವು ಮಾನ್ಯ ಸಭಾಧ್ಯಕ್ಷರನ್ನು ಕೇಳುತ್ತೇವೆ, ನೀವು ಮಧ್ಯೆ ಬರಬೇಡಿ.

**†ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ)** : ಹೀಗಾಗಿ ಟೈಂ ಹೋಗುತ್ತದೆ. ನಾವು ಏನು ಮಾಡಬೇಕು ಹೇಳಿ? ಸನ್ಮಾನ್ಯ ಅಧ್ಯಕ್ಷರೇ, ತಾವು ದಯಮಾಡಿ ನಮ್ಮನ್ನು ಕ್ಷಮಿಸಬೇಕು, ಇದೊಂದು ದಿವಸ ನಾವು ಲೇಟಾಗಿ ಬಂದಿದ್ದೇವೆ, ನಮಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಮ್ಮ ಪಕ್ಷದ ಪರವಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ ಬಸವಣ್ಣನವರು ಹೇಳುತ್ತಾರೆ.

"ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯಾ
ಇವನಮ್ಮವ, ಇವನಮ್ಮವ,
ಇವನಮ್ಮನೆಂದೆನಿಸಯ್ಯಾ,
ಕೂಡಲ ಸಂಗಮದೇವಾ, ನಮ್ಮ ಮನೆಯ
ಮಗನೆಂದೆನಿಸಯ್ಯಾ,"

ಅಧ್ಯಕ್ಷರೇ, ಇವತ್ತು ಇದನ್ನು ಏಕೆ ಹೇಳಬೇಕಾಗಿದೆ ಎಂದರೆ ಅನಿವಾರ್ಯವಾಗಿ ನಾವಿಂದು ಇದನ್ನು ಇವತ್ತು ಹೇಳಬೇಕಾಗಿದೆ. ಶುಕ್ರವಾರದ ಘಟನೆ.

**ಅಧ್ಯಕ್ಷರು** : ನೀವು ಅವರನ್ನು ನೋಡಿ ಮಾತನಾಡಬೇಡಿ ನನ್ನ ಕಡೆ ನೋಡಿ ಮಾತನಾಡಿ, ಬೇಗನೆ ಮುಗಿಸಿ, 15 ನಿಮಿಷ ಆದ ತಕ್ಷಣ ನಾನು ಬೆಲ್ ಹೊಡೆಯುತ್ತೇನೆ ಅಷ್ಟೆ.

**ಶ್ರೀ ಎಸ್.ಎಸ್. ಪಾಟೀಲ್** : ಶುಕ್ರವಾರ ನಡೆದಂಥ ಘಟನೆ ಈ ರಾಷ್ಟ್ರದ, ಈ ರಾಜ್ಯದ ಇತಿಹಾಸದಲ್ಲಿ, ಸದನದ ಇತಿಹಾಸದಲ್ಲಿ ನಡೆದಿಲ್ಲ, ಆ ದಿವಸ ಸುಮ್ಮನೆ ಒಂದು ದಿವಸ ಹಾಳು ಮಾಡಿ ಬಿಟ್ಟರು. ಬಹುಶಃ ನನಗೆ ಅನ್ನಿಸುತ್ತದೆ, ಇವರು ನಮ್ಮ ಬಿಜೆಪಿ ಮಿತ್ರರು ಹಿಂದೂಗಳನ್ನು ಗುತ್ತಿಗೆ ಹಿಡಿದಿದ್ದಾರೆ, ನಮ್ಮ ಕಾಂಗ್ರೆಸ್ ಮಿತ್ರರು ಮುಸ್ಲಿಮರನ್ನು ಗುತ್ತಿಗೆ ಹಿಡಿದವರ ಹಾಗೆ ಮಾತನಾಡುತ್ತಾರೆ. ಇವರಿಬ್ಬರೂ ಮಾತನಾಡುವುದು. ಅವರು ಮುಸ್ಲಿಮರಿಗೆ ಅನ್ಯಾಯ ಮಾಡುತ್ತಿದ್ದಾರೆ, ಇವರು ಹಿಂದೂಗಳಿಗೆ ಅನ್ಯಾಯ ಮಾಡುತ್ತಿದ್ದಾರೆ, ಆ ಕಾರಣದಿಂದಾಗಿಯೇ ನಾನು ಬಸವಣ್ಣನವರ ವಚನವನ್ನು ಹೇಳಿದೆ. ನಮ್ಮ ಪಕ್ಷ ಕೂಡ ಅದೇ ಸಿದ್ಧಾಂತದ ಮೇಲೆ ಇರುವುದು, ಎಲ್ಲರೂ ನಮ್ಮವರು ಎನ್ನುವ ಭಾವನೆ ಬರಬೇಕಾಗುತ್ತದೆ, ಈ ಹಿಂದೂಸ್ತಾನದಲ್ಲಿರತಕ್ಕಂಥ ಎಲ್ಲರೂ ನಮ್ಮವರು ಎನ್ನುವ ಭಾವನೆ ಎಲ್ಲಿಯವರೆಗೆ ಬರುವುದಿಲ್ಲವೋ ಅಲ್ಲಿಯವರೆಗೆ ಬಹುಶಃ ಈ ದೇಶಕ್ಕೆ ಒಳ್ಳೆಯದಾಗುವುದಿಲ್ಲ, ಇವರಿಬ್ಬರೂ ಇರುವುದರಿಂದ.

**ಅಧ್ಯಕ್ಷರು** : ನೀವು ವಿಷಯಕ್ಕೆ ಬನ್ನಿ, ವಿಷಯದ ಮೇಲೆ ಮಾತನಾಡಿರಿ.

**ಶ್ರೀ ಎಸ್.ಎಸ್. ಪಾಟೀಲ್** : ನಿನ್ನೆ ತೊಗಾಡಿಯಾರವರು ಏನೋ ಮಾತನಾಡಿದ್ದಾರೆ ಅದಕ್ಕೆ ಅವರನ್ನು ಅರೆಸ್ಟ್ ಮಾಡಬೇಕು ಎನ್ನುವ ವಿಚಾರ ಪೇಪರ್‌ನಲ್ಲಿ ಬಂತು.

**ಶ್ರೀ ಡಿ.ವಿ. ಸದಾನಂದಗೌಡ** : ಮೊನ್ನೆ ಇಡೀ ದಿವಸ ವೇಸ್ಟ್ ಆಯಿತು ಎಂದರು, ಈಗ ಅವರಿಗೆ ಕೊಟ್ಟಿರತಕ್ಕ 15 ನಿಮಿಷವನ್ನು ವೇಸ್ಟ್ ಮಾಡುತ್ತಿದ್ದಾರಲ್ಲವೆ?

**ಶ್ರೀ ಎಸ್.ಎಸ್. ಪಾಟೀಲ್** : ಏಕೆ ನಿಮಗೆ ತೊಂದರೆಯಾಗುತ್ತದೆ? ಕಂಡದ್ದನ್ನು ಹೇಳಿದರೆ ಕೆಂಡದಂಥ ಕೋಪ ಎನ್ನುವ ಹಾಗೆ ಆಯಿತು.

**ಅಧ್ಯಕ್ಷರು** : ನೋಡಿ ಪಾಟೀಲ್‌ರೆ, ನಿಮಗೆ ಕೊಟ್ಟಿರುವ 15 ನಿಮಿಷಗಳ ಅವಧಿ ಮುಗಿದಾಕ್ಷಣ ನಾನು ಬೆಲ್ ಹೊಡೆಯುತ್ತೇನೆ.

**ಶ್ರೀ ಎಸ್.ಎಸ್. ಪಾಟೀಲ್** : ಇದು ಸದನ, ಇವರು ಹಿಂದೂಗಳನ್ನು ಗುತ್ತಿಗೆ ಹಿಡಿದವರ ತರಹ ಮಾತನಾಡುತ್ತಾರೆ, ಮುಸ್ಲಿಮರನ್ನು ಗುತ್ತಿಗೆ ಹಿಡಿದವ ತರಹ ಅವರು ಮಾತನಾಡುತ್ತಾರೆ.

**ಗೊಂದಲ**

**ಶ್ರೀ ಬಿ.ಆರ್. ನೀಲಕಂಠಪ್ಪ** : ಪಾಟೀಲರೇ, ನೀವು ಯಾರನ್ನು ಗುತ್ತಿಗೆ ಹಿಡಿಯುತ್ತೀರಿ?

**ಶ್ರೀ ಆರ್.ವಿ. ದೇಶಪಾಂಡೆ** : ಇದು ಸರಿಯಲ್ಲ, ಯಾರು ಯಾರನ್ನೂ ಗುತ್ತಿಗೆ ಹಿಡಿಯುವುದಿಲ್ಲ. ನಮ್ಮ ಪಾರ್ಟಿ ಸೆಕ್ಯೂಲರ್ ಇದೆ. ಆ ರೀತಿ ಮಾತನಾಡಬಾರದು ತಾವು.

**ಗೊಂದಲ**

**ಅಧ್ಯಕ್ಷರು** : ನಿಮ್ಮ ಮುಂದಿರುವ ಬಜೆಟ್ ನೋಡಿಕೊಂಡು ಮಾತನಾಡಿ.

**ಶ್ರೀ ಆರಗ ಜ್ಞಾನೇಂದ್ರ** : ಈ ರಾಜ್ಯದಲ್ಲಿ ಆ ಎರಡೂ ಕಡೆ ಕೈಬಿಟ್ಟವರು ಇವರು.

**ಶ್ರೀ ಎಸ್.ಎಸ್. ಪಾಟೀಲ್** : ಇವರಿಬ್ಬರಿಂದ ನಮಗೆ ತೊಂದರೆಯಾಗಿದೆ.

**ಅಧ್ಯಕ್ಷರು** : ನೋಡಿ ನೀವು ಬೇಗನೆ ಮುಗಿಸಿ, ನಂತರ ನೀವು ಇಂಟ್ರಪ್‌ಷನ್ ಎಂದು ಹೇಳಬೇಡಿ. ಪ್ಲೀಸ್ ಕುಳಿತುಕೊಳ್ಳಿ.

**ಶ್ರೀ ಎಸ್.ಎಸ್. ಪಾಟೀಲ್** : ಇಲ್ಲಿ ಒಂದು ಕಡೆ ಇವರ ಅಧ್ಯಕ್ಷರು "ಮುಸ್ಲಿಮರಿಗಾಗಿ ಪ್ರಾಣ ಬಿಡಲು ಸಿದ್ದ ಪೂಜಾರಿ ಎಂದು ಹೇಳುತ್ತಾರೆ. ಇದು ಏನು ಪ್ರಚೋದನೆಯಾಗುವುದಿಲ್ಲವೆ?

**ಅಧ್ಯಕ್ಷರು** : ಪಾಟೀಲರೇ, ನೀವು ಬಜೆಟ್ ಮೇಲೆ ಮಾತನಾಡಿ.

**ಶ್ರೀ ಎಸ್.ಎಸ್. ಪಾಟೀಲ್** : ಬಜೆಟ್ ಮೇಲೆ ಮಾತನಾಡುವಾಗ ಇದೆಲ್ಲಾ ಬೇಕಾಗುತ್ತದೆ.

**ಅಧ್ಯಕ್ಷರು** : ತಾವು ಹೇಳುತ್ತಿರುವುದು ಬಜೆಟ್ ಮೇಲೆ ಅಲ್ಲ.

**ಶ್ರೀ ಎಸ್.ಎಸ್. ಪಾಟೀಲ್** : ದುಡ್ಡು ಎಲ್ಲಾ ಇದಕ್ಕೆ ಹೋಗುತ್ತಿದೆ. ಆ ಕಾರಣದಿಂದಾಗಿ ಈ ದಿವಸ ನಿಜವಾಗಿ ಸನ್ಮಾನ್ಯ ದೇಶಪಾಂಡೆಯವರು ಇಲ್ಲಿ ಇದ್ದಾರೆ.

**ಶ್ರೀ ಸಿ.ಆರ್. ಸಗೀರ್ ಅಹಮದ್** : ಇವರು ಈ ರೀತಿ ಚುಚ್ಚಿ ಚುಚ್ಚಿ ಮಾತನಾಡಿದರೆ ನಿಮಗೆ ತಡೆದುಕೊಳ್ಳಲಿಕ್ಕೆ ಆಗುವುದಿಲ್ಲ.

**ಗೊಂದಲ**

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ಅವರೇನೂ ಚುಚ್ಚಿ ಮಾತನಾಡುತ್ತಿಲ್ಲ, ನಿಮ್ಮ ಮೇಲೆ ಇರತಕ್ಕಂಥ ಗೌರವ ಭಾವನೆಗಳನ್ನು ಹೇಳುವುದಕ್ಕೆ ಅವರಿಗೆ ಅವಕಾಶ ಕೊಡಿ.

**ಅಧ್ಯಕ್ಷರು** : ಮಾನ್ಯ ಎಸ್ ಎಸ್ ಪಾಟೀಲ್‌ರವರೇ ನೀವು ಯಾವಾಗಲೂ ನಾಜೂಕಾಗಿ ಮಾತನಾಡುವವರು, ಇವತ್ತು ಏಕೆ ಹೀಗೆ ಮಾಡುತ್ತೀರಿ?

**ಶ್ರೀ ಎಸ್.ಎಸ್. ಪಾಟೀಲ್** : ನೀವು ನಮಗೆ ಚುಚ್ಚಿ ಮಾತನಾಡುತ್ತಾರೆ ಎಂದು ಹೇಳುತ್ತೀರಿ, ನಿನ್ನೆ ಹಿರಿಯ ಸದಸ್ಯರಾದ ಮಾನ್ಯ ರಾಮಯ್ಯನವರು ನಮಗೆ ಚುಚ್ಚಿ ಮಾತನಾಡಿದರು.

**ಅಧ್ಯಕ್ಷರು** : ನೋಡಿ ಈಗಾಗಲೇ ನಾಲ್ಕು ನಿಮಿಷಗಳಾದವು ಟೈಂ ಕಡಿಮೆ ಇದೆ, ನೀವು ಬೇಗ ಬಜೆಟ್ ಮೇಲೆ ಮಾತನಾಡಿ.

**ಗೊಂದಲ**

ನೀವು ಕುಳಿತುಕೊಳ್ಳಿ, ನೀಲಕಂಠಪ್ಪನವರೇ, ನಾನು ನಿಮ್ಮನ್ನು ಕರೆಯಲಿಲ್ಲ, ಪ್ಲೀಸ್ ಟೇಕ್ ಯುವರ್ ಸೀಟ್. ನೋ......... ಬಜೆಟ್ ಮೇಲೆ ಮಾತನಾಡುವಾಗ ಅವರದೊಂದು ದಾರಿ, ನಿಮ್ಮದೊಂದು ದಾರಿ ಇನ್ನೊಬ್ಬರದ್ದು ಇನ್ನೊಂದು ದಾರಿ ಏನು ಇದು? ಇದೇನು ಸಭೆಯೇ ಏನು?

**ಶ್ರೀ ಎಸ್.ಎಸ್. ಪಾಟೀಲ್** : ಸನ್ಮಾನ್ಯ ಅಧ್ಯಕ್ಷರೇ, ತಾವು ಆ ದಿವಸ ಇರಲಿಲ್ಲ ನಮ್ಮ ಉಪಾಧ್ಯಕ್ಷರು ಇದ್ದರು, ನಮ್ಮ ಹಿರಿಯ ಸದಸ್ಯರಾದಂಥ ಮಾನ್ಯ ರಾಮಯ್ಯನವರು ನಮಗೆ ಒಂದು ರೀತಿ ಚುಚ್ಚಿದರು, ಅಂದರೆ ಹಿಂದಿನ ಜನತಾದಳ ಸರ್ಕಾರದವರು ಈ ರಾಜ್ಯವನ್ನು ಬಹಳ ಹಾಳು ಮಾಡಿ ಹೋಗಿಬಿಟ್ಟಿದ್ದಾರೆ, ಹೀಗೆಂದು...

**ಅಧ್ಯಕ್ಷರು** : ನೋಡಿ ಟ್ರ್ಯಾಕ್ ಮೇಲೆ ರೈಲು ಹೋಗಲಿ. ಇದು ಎಲ್ಲೆಲ್ಲಿಯೋ ಹೋಗುತ್ತಿದೆ. ಟ್ರಾಕ್ ಮೇಲೆ ಸರಿಯಾಗಿ ಹೋಗಲಿ.

**ಶ್ರೀ ಬಿ.ಆರ್. ನೀಲಕಂಠಪ್ಪ** : ರೈಲಿನ ಮೇಲೆ ಟ್ರ್ಯಾಕ್ ಹೋಗುತ್ತಿದೆ.

**ಮಾನ್ಯ ಸದಸ್ಯರು** : ಅವರು ರೈಲು ಬಿಡುತ್ತಿದ್ದಾರೆ.

**ಶ್ರೀ ಸಿ.ಆರ್. ಸಗೀರ್ ಅಹಮದ್** : ಇದನ್ನು ನಾವು ಹೇಳುವುದು ಅಲ್ಲ ಜನ ಹೇಳಿದ್ದಾರೆ ಅವರು ಹಾಳಾಗಿ ಹೋಗಿದ್ದಾರೆ ಎಂದು ಇವರು ನಮ್ಮ ಮೇಲೆ ಹೇಳಿದರೆ ನಾವೇನು ಮಾಡುವುದಕ್ಕೆ ಆಗುತ್ತದೆ?

**ಅಧ್ಯಕ್ಷರು** : ಸಗೀರ್ ಅವರೇ ಬೇಡಿ, We are not discussing politics here.

**ಶ್ರೀ ಸಿ.ಆರ್. ಸಗೀರ್ ಅಹಮದ್** : ಅವರು ಮಾಡುತ್ತಾರಲ್ಲಾ ನಾವೇನು ಮಾಡೋಣ?

**ಅಧ್ಯಕ್ಷರು** : ಅದಕ್ಕೋಸ್ಕರವಾಗಿಯೇ ಟ್ರ್ಯಾಕ್ ಮೇಲೆ ರೈಲು ಬಿಡಿ ಎಂದು ಹೇಳುತ್ತಿದ್ದೇನೆ. ನೋಡಿ ಐದು ನಿಮಿಷಗಳಾಯಿತು ಇನ್ನು ಹತ್ತು ನಿಮಿಷ ಮಾತ್ರ ನಿಮಗೆ ಅವಕಾಶ...... ನನಗೆ ಗೊತ್ತಿಲ್ಲ...... I don't know anything. 15 ನಿಮಿಷಗಳಾದ ತಕ್ಷಣ ನಾನು ಬೆಲ್ ಬಾರಿಸುತ್ತೇನೆ.

**ಗೊಂದಲ**

**ಶ್ರೀ ಎಸ್.ಎಸ್. ಪಾಟೀಲ್** : ಈ ತಣ್ಣೀರು ಬಾವಿ ಯೋಜನೆ, ನೋಡಿ ಅಧ್ಯಕ್ಷರೆ ನಾನು ಹೇಗೆ ಮಾತನಾಡಲಿ, ಅವರು ಈ ರೀತಿಯಾಗಿ ಮಧ್ಯೆ ಮಾತನಾಡಿದರೆ ನಾನು ಹೇಗೆ ಮಾತನಾಡಲಿ? ಅವರಿಗೆ ಸುಮ್ಮನಿರುವುದಕ್ಕೆ ಹೇಳಿ. ಮಾನ್ಯ ರಾಮಯ್ಯನವರು ಮಾತನಾಡಿದ್ದನ್ನು ನಾನು ಕುಳಿತುಕೊಂಡು ಕೇಳಿಲ್ಲವೆ? ಅದಕ್ಕೆಲ್ಲಾ ನಾವು ಉತ್ತರ ಕೊಡಬೇಕಲ್ಲವೆ?

**ಅಧ್ಯಕ್ಷರು** : ನೀಲಕಂಠಪ್ಪನವರೇ what is this? ನಿಮಗೆ ಯಾರು ಪರ್ಮಿಷನ್ ಕೊಟ್ಟರು?

**ಶ್ರೀ ಎಸ್.ಎಸ್. ಪಾಟೀಲ್** : ಜನತಾದಳ ಸರ್ಕಾರ ಹಿಂದೆ ರಾಜ್ಯವನ್ನು ಹಾಳು ಮಾಡಿ ಹೋಗಿದೆ ಎನ್ನುವ ಅರ್ಥದಲ್ಲಿ ಅವರು ಮಾತನಾಡಿರುವಾಗ ನಾವು ಅದಕ್ಕೆ ಉತ್ತರ ಕೊಡಬೇಕಲ್ಲವೆ?

**ಅಧ್ಯಕ್ಷರು** : ನೋ ಐ ಡೋಂಟ್ ಅಲೋ ಅವರು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ, ನಿಮ್ಮನ್ನು ಯಾರು ಈಗ ಮಾತನಾಡಿ ಅಂದರು? ದಯಮಾಡಿ ಸುಮ್ಮನೇ ಕುಳಿತುಕೊಳ್ಳಿ.

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ಮಾನ್ಯ ಎಸ್ ಎಸ್ ಪಾಟೀಲ್‌ರವರು ಮಾತನಾಡುವಾಗ ಮಾನ್ಯ ನೀಲಕಂಠಪ್ಪನವರು ಮಧ್ಯೆ ಎದ್ದು ಆಕ್ಷೇಪಣೆ ಮಾಡಿದರೆ ಹೇಗೆ?

**ಅಧ್ಯಕ್ಷರು** : ಸ್ವಾಮಿ ಕೃಷ್ಣಮೂರ್ತಿಗಳೇ, ತಮಗೆ ನಾನು ಪರ್ಮಿಷನ್ ಕೊಟ್ಟಿಲ್ಲ ತಾವು ಕುಳಿತುಕೊಳ್ಳಿ ಪಾಟೀಲ್‌ರೇ ನೀವು ಮಾತನಾಡಿ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಯ್ಯನವರು ತಣ್ಣೀರು ಬಾವಿ ಯೋಜನೆಯ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿಬಿಟ್ಟರು, ತಣ್ಣೀರು ಬಾವಿ ಎಂದರೆ, ಇವರೆಲ್ಲರೂ ದಿನ ಒಂದು ಕೋಟಿ ರೂಪಾಯಿಗಳನ್ನು ಪುಕ್ಕಟೆಯಾಗಿ ಕೊಡುವ ಹಾಗೆ ಮಾಡಿ ಹೋಗಿ ಬಿಟ್ಟರು, ಅವರು ಮಾತನಾಡಿದ್ದು ನೋಡಿ ನನಗೆ ಬಹಳ ಗಾಬರಿಯಾಯಿತು. ಅರೆ ಇದು ಎಂಥ ಅನಾಹುತವಾಯಿತು, ಆವಾಗ ನಮ್ಮ ದೇಶಪಾಂಡೆಯವರು ಕ್ಯಾಬಿನೆಟ್‌ನಲ್ಲಿ ಇದ್ದರು, ತಣ್ಣೀರು ಬಾವಿ ಯೋಜನೆ ಎಂದರೆ, ಅಲ್ಲಿ ಸುಮಾರು 25 ಜನರೊಂದಿಗೆ ವಿದ್ಯುತ್ ಉತ್ಪಾದನೆ ಮಾಡಬೇಕು, ಹೀಗಾಗಿ ಇಲ್ಲಿ ಇದನ್ನು ಸ್ಥಾಪಿಸಬೇಕೆಂದು ಅಷ್ಟು ಜನರ ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಬಹುಶಃ ತಮಗೆ ಗೊತ್ತಿರುವ ಹಾಗೆ ಹಿಂದಿನ ಮುಖ್ಯಮಂತ್ರಿಗಳು, ಈಗಿನ ಮುಖ್ಯಮಂತ್ರಿಗಳು ವಿದೇಶಕ್ಕೆ ಹೋಗಿ ಯಾರ್‍ಯಾರು ಇಲ್ಲಿ ದುಡ್ಡು ಹಾಕುತ್ತೀರಿ, ಅವರೆಲ್ಲರನ್ನೂ ಇಲ್ಲಿಗೆ ಬನ್ನಿ ಎಂದು ಕರೆದಿದ್ದಾರೆ, ಹೌದಲ್ಲವೇ, ಮಾನ್ಯ ದೇಶಪಾಂಡೆಯವರೆ? ನೀವು ಕೂಡ ಹೋಗಿದ್ದಿರಿ, ಇಂಡಸ್ಟ್ರೀಸ್ ಮಾಡಲು ಇಲ್ಲಿಗೆ ಬನ್ನಿ ಎಲ್ಲಾ ಫ್ರೀ ಬಿಡುತ್ತೇವೆ ಎಂದು ಕರೆದರು, ಟ್ಯಾಕ್ಸ್ ಬಿಡುತ್ತೇವೆ, ಮತ್ತೊಂದು ಬಿಡುತ್ತೇವೆ ಎಂದು ಕರೆದದ್ದು ಉಂಟು.

**ಶ್ರೀ ಆರ್.ವಿ. ದೇಶಪಾಂಡೆ** : ಮಾನ್ಯ ಪಾಟೀಲ್‌ರೇ, ತಾವೂ ಕೂಡ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ, ಸರ್ಕಾರಕ್ಕೆ ಜವಾಬ್ದಾರಿ ಇರಬೇಕಾಗುತ್ತದೆ, ರಾಜ್ಯ ಬೆಳೆಯಬೇಕಾದರೆ ಕೈಗಾರಿಕೆ ಬರಬೇಕು, ಹೂಡಿಕೆಗಳು ಬರಬೇಕು, ಹೀಗಾಗಿ ಕೇವಲ ಫಾರಿನರ್ಸ್ ಕರೆಯಲಿಕ್ಕೆ ಹೋಗುವುದಿಲ್ಲ, ಯಾರು ಬಂದರೂ ಸ್ವಾಗತ ಮಾಡಬೇಕಾಗುತ್ತದೆ, ಮತ್ತು ಪಾರದರ್ಶಕವಾಗಿ ಅದನ್ನು ಕ್ಲಿಯರ್ ಪ್ರಾಜೆಕ್ಟ್ ಮಾಡಿ ಸಹಾಯ ಮಾಡಬೇಕಾಗುತ್ತದೆ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ರಾಮಯ್ಯನವರು ನಿನ್ನೆ ಏನು ನಮ್ಮ ಹುಚ್ಚು ಬಿಡಿಸಿ ಬಿಟ್ಟರು. ಐದು ಸಾವಿರ ಕೋಟಿ ರೂಪಾಯಿಗಳನ್ನು ಇವರು ಹಾಳು ಮಾಡಿ ಹೋಗಿ ಬಿಟ್ಟಿದ್ದಾರೆ, ಇಡೀ ರಾಜ್ಯಕ್ಕೆ ಉತ್ಪನ್ನ ಬರತಕ್ಕಂಥ ಐದು ಸಾವಿರ ಕೋಟಿ ರೂಪಾಯಿ ಬರತಕ್ಕಂಥದ್ದು ಜನತಾದಳ ಸರ್ಕಾರ ಹಾಳು ಮಾಡಿರುವುದರಿಂದ ಇವತ್ತು ಈ ರಾಜ್ಯದ ಆರ್ಥಿಕ ಸ್ಥಿತಿ ಹೀಗಾಯಿತು ಎಂದು ಹೇಳಿದರು. ಅದರ ಬಗ್ಗೆ ವಿವರಣೆ ಹೇಳುತ್ತೇನೆ ದಯಮಾಡಿ ಕೇಳಿ, ನಮ್ಮಲ್ಲಿ ವಿದ್ಯುತ್ ಕೊರತೆಯಿರುವುದು ತಮಗೆ ಗೊತ್ತಿದೆ. ಆ ಕಾರಣದಿಂದ ಆಗ ತಣ್ಣೀರುಬಾವಿ ಟಾಟಾ ಮತ್ತು ಜಿಂದಾಲ್ ಮೂರು ಜನ ಇವತ್ತು ಪವರ್ ಪ್ರಾಜೆಕ್ಟನ್ನು ಪ್ರಾರಂಭ ಮಾಡಿದ್ದಾರೆ, ಈ ತಣ್ಣೀರು ಬಾವಿ ಯೋಜನೆ ಎಂದು ಹೇಳಿದರೆ, ಅವರು 700 ರಿಂದ 800 ಕೋಟಿ ರೂಪಾಯಿಗಳನ್ನು ಇಲ್ಲಿ ಹೂಡಿಕೆ ಮಾಡುತ್ತಾರೆ, ಅವರು ಇಲ್ಲಿ ಆ ಹಣವನ್ನು ಹಾಕಿದ ಮೇಲೆ ಅದರಿಂದ ಉತ್ಪಾದನೆಯಾದ ವಿದ್ಯುತ್ತನ್ನು ನೀವು ಖರೀದಿ ಮಾಡಬೇಕು ಎನ್ನುವ ಕಂಡೀಷನ್ ಹಾಕಿಕೊಂಡು ಅದನ್ನು ಮಾಡಿದ್ದಾರೆ. ನಮಗೆ ಇವತ್ತು ವಿದ್ಯುತ್ ಕೊರತೆ ಇದೆ, ಅದನ್ನು ಖರೀದಿಸಿದರೆ ಪುಕ್ಕಟೆ ಕೊಡುವ ಪ್ರಶ್ನೆಯೇ ಇಲ್ಲ. ಎರಡು ರೂಪಾಯಿ ಅದು ಇತ್ತು ಎಲ್ಲಾ ಸೇರಿದರೆ ಒಂದು ಯೂನಿಟ್‌ಗೆ ಮೂರು ರೂಪಾಯಿ

ಎಂಬತ್ತು ಪೈಸೆಯಂತೆ ವೇರಿಯೇಷನ್ ಮೇಲೆ ಸರ್ಕಾರ ಖರೀದಿಸಬೇಕೆಂದು ಒಪ್ಪಂದವಾಗಿದೆ. ಅವರು ಮಾತನಾಡುವುದು ನೋಡಿದರೆ, ಇಲ್ಲಾ ಅವರು ಪುಕ್ಕಟೆಯಾಗಿ ಕೊಟ್ಟು ಹೋದರು ಎನ್ನುವ ಮಾತು ಹೇಳಿದರು, ದುರ್ದೈವದಿಂದ ಅದು ತಪ್ಪು ಅಭಿಪ್ರಾಯ. ಅವರು ಉತ್ಪಾದನೆ ಮಾಡಿದ್ದನ್ನು ಇವತ್ತು ಖರೀದಿಸಬೇಕಾಗುತ್ತದೆ, ಏಕೆಂದರೆ ಈ ದಿವಸ ವಿದ್ಯುತ್ ಕೊರತೆ ಇದೆ, ಎಷ್ಟಾದರೂ ಕೂಡ ಖರೀದಿ ಮಾಡದೆ ಬಿಡುವ ಪ್ರಶ್ನೆಯೇ ಬರುವುದಿಲ್ಲ, ವಿದ್ಯುತ್ ಕೊರತೆಯಿರುವಾಗ ನಾವು ಹೇಗೆ ಖರೀದಿ ಮಾಡುವುದನ್ನು ಬಿಡುವುದಕ್ಕಾಗುತ್ತದೆ? ಖರೀದಿ ಮಾಡುವುದು ಬಿಟ್ಟರೂ ಕೂಡ ಕೊಡಬೇಕೆಂದು ಅವರು ಕಂಡೀಷನ್ ಹಾಕಿದ್ದಾರೆ. ಖರೀದಿ ಮಾಡುವುದನ್ನು ಬಿಡುವ ಪ್ರಶ್ನೆಯೇ ಇಲ್ಲ. ಏಕೆಂದರೆ ವಿದ್ಯುತ್ತಿನ ಕೊರತೆ ಇವತ್ತು ಇದೆ. ಆ ಕಾರಣದಿಂದ ಇವತ್ತು ಮಾನ್ಯ ರಾಮಯ್ಯನವರು ಹೇಳಿದ ಹಾಗೆ, ಅವರು ಕೊನೆಗೆ ಎಲ್ಲಿಗೆ ಹೋದರೆಂದರೆ ನಾನು ರಾಜೀನಾಮೆ ಕೊಡುತ್ತೇನೆ ಅನ್ನುವ ಮಟ್ಟಕ್ಕೆ ಹೋಗಿ ಬಿಟ್ಟರು, ಬಹುಶಃ ಇವತ್ತು ಅವರು ಇಲ್ಲಿ ಇಲ್ಲ, ನಮಗೆ ಇವತ್ತು ಆಂಧ್ರದವರು ಕೊಡುತ್ತಿಲ್ಲ, ಬಾಂಬೆದವರು ಕೊಡುತ್ತಿಲ್ಲ, ಓರಿಸ್ಸಾದವರು ಕೊಡುತ್ತಿಲ್ಲ, ಇವತ್ತು ಯಾರೂ ಕೊಡುತ್ತಿಲ್ಲ. ನಮ್ಮಲ್ಲಿ ಸಾಕಷ್ಟು ವಿದ್ಯುತ್ ಇವತ್ತು ಇಲ್ಲ. ಆ ಕಾರಣದಿಂದ ನಿಮ್ಮಲ್ಲಿ ಖರೀದಿಸುತ್ತೇವೆ, ಖರೀದಿ ಮಾಡದಿದ್ದರೂ ನಾವು ಅಷ್ಟು ರೊಕ್ಕ ತುಂಬುತ್ತೇವೆಂದು ಹೇಳಿದರೆ ಇದರಲ್ಲಿ ತಪ್ಪೇನು? ಖರೀದಿಸುವುದು ಏಕೆ ಬಿಡುತ್ತೇವೆ? ಈ ಸರ್ಕಾರದವರು ಮಾಡಬಹುದಾಗಿತ್ತು, ಇವರು ಖರೀದಿಸಬೇಕಷ್ಟೆ, ಆ ಕಡೆ ರೈತರಿಗೆ ವಿದ್ಯುತ್ ಇಲ್ಲ. ಇವರು ಬಿಟ್ಟಿದ್ದು ಇವರ ತಪ್ಪೇ ವಿನಾಃ ಹೊಂದಾಣಿಕೆ ಮಾಡಿಕೊಂಡಿರುವ ಸರ್ಕಾರ ಯಾವುದೇ ತಪ್ಪು ಇಲ್ಲ. ಆ ಕಾರಣದಿಂದ ಮಾನ್ಯ ರಾಮಯ್ಯನವರು ಹೇಳಿದ ಮಾತು ಬಹಳ ತಪ್ಪು ಇದೆ, ಅಲ್ಲಿ ಯಾವ ಅವ್ಯವಹಾರ ನಡೆದಿಲ್ಲ, ಯಾವ ಸರ್ಕಾರಕ್ಕೆ ಹಾನಿಯಾಗಿಲ್ಲ, ಅದು ರಾಜ್ಯದ ಹಾಗೂ ರೈತರ ದೃಷ್ಟಿಯಿಂದ ಒಳ್ಳೆಯದಾದ ಯೋಜನೆ, ಆದ್ದರಿಂದ, ಅವರು ಹೇಳಿದಂಥ ಮಾತು ಬಹಳ ತಪ್ಪು ಇದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. 5000 ಕೋಟಿ ರೂಪಾಯಿ ಅದೇನು ಇಂಡಸ್ಟ್ರೀಸ್‌ಗೆ 10 ವರ್ಷ, 15 ವರ್ಷ, ಒಂದು ಮೂರನಾಲ್ಕು ಇಂಡಸ್ಟ್ರೀಸ್ ಹೆಸರುಗಳನ್ನು ಹೇಳಿದರು, ಎಲ್ಲಾ ಹೇಳಿದರೆ ಬಹಳ ಟೈಂ ಬೇಕಾಗುತ್ತದೆ ಅದಕ್ಕೆ ಅವಸರ ಮಾಡುತ್ತೇನೆ.

## 11.40 ಎಎಂ

ಸುಮಾರು 5 ಸಾವಿರ ರೂಪಾಯಿ ತೆರಿಗೆ ಹಣ ಬರುವಂಥದ್ದು ಇವರಿಂದ ಬಿದ್ದು ಹೋಯಿತು ಎನ್ನುವ ರೀತಿಯಲ್ಲಿ ಅವರು ಹೇಳಿದ್ದಾರೆ. ಇದಕ್ಕೆ ಮಾನ್ಯ ದೇಶಪಾಂಡೆಯವರು ಉತ್ತರ ಕೊಡಬೇಕಾಗುತ್ತದೆ. ಏಕೆಂದರೆ, ಆ ಸಂದರ್ಭದಲ್ಲಿ ಇವರೇ ಸಚಿವರಾಗಿದ್ದರು ಮತ್ತೆ ಇವತ್ತೂ ಕೂಡ ಅವರೇ ಸಚಿವರಾಗಿದ್ದಾರೆ. ಈ ಒಂದು ವ್ಯವಸ್ಥೆ ಕೇವಲ ನಮ್ಮ ರಾಜ್ಯದಲ್ಲಿ ಮಾತ್ರ ಇಲ್ಲ. ಮತ್ತೆ ನಮ್ಮ ಸರ್ಕಾರ ಬಂದ ಮೇಲೆ ಇದನ್ನು ಕೊಟ್ಟಿಲ್ಲ. ಇದನ್ನು ಕಾಂಗ್ರೆಸ್ ಸರ್ಕಾರ ಕೂಡ ಮಾಡಿದೆ. ಇವತ್ತಿನ ದಿವಸ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಆಂಧ್ರಪ್ರದೇಶಕ್ಕೆ ಬನ್ನಿ ಎಂದು ಅವರು ಕರೆಯುತ್ತಿದ್ದಾರೆ. ಮತ್ತೆ ಈ ಒಂದು ವ್ಯವಸ್ಥೆಯನ್ನು ಬೇರೆ ಬೇರೆ ರಾಜ್ಯದವರು ಮತ್ತು ಇಡೀ ರಾಷ್ಟ್ರದಲ್ಲಿ ಎಲ್ಲರೂ ಸಹ ಕೊಡುತ್ತಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ನಾವು ಕೂಡ ತೆರಿಗೆ ವಿನಾಯಿತಿ ಕೊಟ್ಟಿದ್ದೇವೆ. ಇದರಿಂದ ನಮ್ಮ ರಾಜ್ಯದಲ್ಲಿ ಹೊಸದಾಗಿ ಕೈಗಾರಿಕೆಗಳು ಪ್ರಾರಂಭ ಆಗುವುದಕ್ಕೆ ಅನುಕೂಲವಾಯಿತು. ಹಾಗೆಯೇ ಸಾಕಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಯಿತು. ಈ

ಕೈಗಾರಿಕೆಗಳು ಸ್ಥಾಪನೆಯಾಗಿ ಸುಮಾರು ನಾಲ್ಕು ಅಥವಾ 6 ಅಥವಾ 8 ವರ್ಷಗಳು ಬಿಟ್ಟಮೇಲೆ ನಮಗೆ ಉತ್ಪಾದನೆ ಸಿಗುತ್ತದೆ. ಆ ದಿವಸ ನಾವು ಇದನ್ನು ಮಾಡದೇ ಇದ್ದರೆ ನಮ್ಮ ರಾಜ್ಯಕ್ಕೆ ಹೊಸ ಕೈಗಾರಿಕೆಗಳು ಬರುತ್ತಿರಲಿಲ್ಲ. ಈ ಒಂದು ಕಾರಣದಿಂದ ನಾವು ಮಾಡಿದ್ದೇವೆ ಆದರೆ, ಸುಮ್ಮನೆ 5 ಕೋಟಿ ರೂಪಾಯಿ ಹಾನಿಯಾಯಿತು ಎಂದು ಹೇಳುವುದು ತಪ್ಪೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಅಬ್ಕಾರಿ ಬಗ್ಗೆಯೂ ಕೂಡ ಅವರು ಸಾಕಷ್ಟು ಹೇಳಿದರು. ಅಬ್ಕಾರಿಯಲ್ಲಿ ಬಹಳ ಹಾಳು ಮಾಡಿಬಿಟ್ಟಿರಿ; ಅದರಿಂದಾಗಿ ಉತ್ಪನ್ನ ಬರಲಿಲ್ಲ. ಮತ್ತೆ ನಾವು ಬಂದಮೇಲೆ ಅಬ್ಕಾರಿಯಲ್ಲಿ ಬಹಳಷ್ಟು ಸುಧಾರಣೆ ಮಾಡಿದ್ದೇವೆ ಎಂದೂ ಸಹ ಹೇಳಿದರು. ಆ ಸಂದರ್ಭದಲ್ಲಿ ಹೆಚ್ಚಿನ ಉತ್ಪತ್ತಿ ಏನು ಬರಲಿಲ್ಲ. ಅಬ್ಕಾರಿ ಇಲಾಖೆಯಿಂದ ಬರತಕ್ಕಂಥ ಆದಾಯ ವರ್ಷೇವರ್ಷೆ ಹೆಚ್ಚು ಆಗುತ್ತಲೇ ಬರುತ್ತಿದೆ. ಆದರೆ, ಒಂದು ವರ್ಷದಲ್ಲಿ ಮಾತ್ರ ಕಡಿಮೆಯಾಗಿದೆ. ಅಬ್ಕಾರಿ ಇಲಾಖೆಯ ಲೆಕ್ಕ ತೆಗೆದುನೋಡಿದರೆ ಈ ವಿಷಯ ತಿಳಿಯುತ್ತದೆ. ಇದನ್ನು ಬಂದ್ ಮಾಡಬೇಕೆಂದು ಆ ಸಂದರ್ಭದಲ್ಲಿ ಎಲ್ಲಾ ಸ್ವಾಮಿಗಳು ತೀರ್ಮಾನ ತೆಗೆದುಕೊಂಡಿದ್ದರು. ಆ ಸಂದರ್ಭದಲ್ಲಿ ನಾವೂ ಕೂಡ ಇದಕ್ಕೆ ಅಷ್ಟೊಂದು ಪ್ರೋತ್ಸಾಹ ಕೊಡಲಿಲ್ಲ. ಈ ಒಂದು ಕಾರಣದಿಂದ ಆ ವರ್ಷ ಕಡಿಮೆಯಾಗಿದೆ. ಆದರೆ, ಉಳಿದ ಎಲ್ಲಾ ವರ್ಷ ಹೆಚ್ಚಾಗಿದೆ. ಅಬ್ಕಾರಿಯಲ್ಲಿ ಸುಮಾರು 2 ಸಾವಿರ ಕೋಟಿ ರೂಪಾಯಿ ಹೆಚ್ಚಿನ ಆದಾಯ ಮಾಡಿದ್ದೇವೆಂದು ಇವರು ಹೇಳಿದ್ದಾರೆ. ಆದರೆ, ಇವತ್ತಿನ ದಿವಸ ರೇಟ್ ಜಾಸ್ತಿಯಾಗಿರುವುದರಿಂದ ಹೆಚ್ಚಿನ ಆದಾಯ ಬಂದಿದೆ. ಮತ್ತೆ ದುರ್ದೈವದ ಸಂಗತಿ ಎಂದರೆ ಇವರು ಕುಡಿಯುವವರನ್ನು ಹೆಚ್ಚು ಮಾಡಿದ್ದಾರೆ. ಮತ್ತೆ ಅದರ ರೇಟ್ ಕೂಡ ಜಾಸ್ತಿಯಾಗಿದೆ. ಇದರಲ್ಲಿ ಸಾವಿರಾರು ಕೋಟಿ ರೂಪಾಯಿಗಳಷ್ಟು ಸೋರಿಹೋಗುತ್ತಿರುವುದನ್ನು ಇವರಿಂದ ನಿಲ್ಲಿಸುವುದಕ್ಕೆ ಸಾಧ್ಯವಾಗಿಲ್ಲ ಎಂದು ಮಾನ್ಯ ವೀರಪ್ಪಮೊಯಿಲಿಯವರು ನೀಡಿರತಕ್ಕಂಥ ವರದಿಯಲ್ಲಿ ತಿಳಿಸಿದ್ದಾರೆ. ಈಗ ಹೊಸದಾಗಿ ಪಾನ ನಿಗಮ ಮಾಡಿದ್ದೀರಿ. ಇದನ್ನು ನಾವೂ ಕೂಡ ಸ್ವಾಗತ ಮಾಡುತ್ತೇವೆ. ಒಟ್ಟಿನಲ್ಲಿ ಇದನ್ನು ನಿಲ್ಲಿಸಿದರೆ ಒಳ್ಳೆಯದು. ನಮ್ಮ ಸರ್ಕಾರದ ಕಡೆಯಿಂದ ಯಾವುದೇ ರೀತಿಯ ಅನ್ಯಾಯ ಆಗಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ನಾವು ಬಹಳ ಮಾಡಿದ್ದೇವೆಂದು ಮತ್ತು ನಮ್ಮ ಆರ್ಥಿಕ ಪರಿಸ್ಥಿತಿ ಬಹಳ ಚೆನ್ನಾಗಿದೆ ಎಂದು ಹೇಳುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಸಿ.ಎ.ಜಿ ವರದಿಯಲ್ಲಿ ಏನಿದೆ ಎಂದರೆ, 1997–1998ನೇ ಸಾಲಿನಲ್ಲಿ ಸಾರ್ವಜನಿಕ ಋಣ 10,446,60 ಕೋಟಿ ರೂಪಾಯಿ ಇದ್ದದ್ದು 2001–2002ನೇ ಸಾಲಿನಲ್ಲಿ 22,432 ಕೋಟಿ ರೂಪಾಯಿಗೆ ತಲುಪಿದೆ. ಇವರು ಬಂದಮೇಲೆ ಸಾಕಷ್ಟು ಸಾಲವನ್ನು ತೆಗೆದುಕೊಂಡಿದ್ದಾರೆ. ಇವರ ಪರಿಸ್ಥಿತಿ ಎಲ್ಲಿಗೆ ಹೋಗಿದೆ ಎಂದರೆ, ಹಳ್ಳಿ ಕಡೆ ಒಂದು ಗಾದೆಯನ್ನು ಹೇಳುತ್ತಾರೆ. ಅದೇನೆಂದರೆ, "ಶಾಣೆ ಮಗ ಹುಟ್ಟಿ ಬಡ್ಡಿಗೆ ಸಾಲ ತಂದು ಕೈಗಡ ಕೊಟ್ಟ" ಎಂದು. ಈ ಸರ್ಕಾರದ ಕೆಲಸವೂ ಕೂಡ ಇದೇ ರೀತಿಯಾಗಿದೆ. ಜಾಣ ಮಗ ಹುಟ್ಟಿದ ಮೇಲೆ ಬಡ್ಡಿಗೆ ಸಾಲ ತಂದು ಕೈಗಡ ಕೊಟ್ಟ ಹಾಗೆ ಇವರು ಬಡ್ಡಿಗೆ ಸಾಲ ತಂದು ಕೊಡುತ್ತಿದ್ದಾರೆ. 2001–2002ನೇ ಸಾಲಿನಲ್ಲಿ ರಾಜಸ್ವ ವೆಚ್ಚಗಳಿಗೆ ಸಾಲದ ಮೂಲಕ ಪಡೆದ ಮೊತ್ತದ ಪ್ರಮಾಣ ಶೇಕಡ 56ರಷ್ಟು ಇತ್ತು. ಇದು ಬಡ್ಡಿ ಮೇಲೆ ಸಾಲ ತಂದು ಕೈಗಡಕೊಟ್ಟಂಥಲ್ಲವೆ? ಈ ಸರ್ಕಾರ ಈ ರೀತಿಯಾಗಿ ಮಾಡಿರತಕ್ಕಂಥದ್ದು ಇನ್ನು ಬಹಳಷ್ಟು ಇದೆ. ಆದರೆ, ಮಾತನಾಡುವುದಕ್ಕೆ ಸಮಯವಿಲ್ಲವೆಂದು ಬಿಡುತ್ತಿದ್ದೇನೆ. ಮತ್ತೆ ಈ ಪುಸ್ತಕದಲ್ಲಿ ಏನು ಹೇಳಿದ್ದಾರೆಂದರೆ, ರಾಜ್ಯದ ಹಣಕಾಸಿನ ಪರಿಸ್ಥಿತಿಯಲ್ಲಿ

ಉಂಟಾಗಿರುವ ತೀವ್ರ ಅವನತಿಯನ್ನು ಸೂಚಿಸುತ್ತದೆ. ಸಾಲದ ಮೂಲಕ ಸಂಗ್ರಹಿಸುವ ಮೊತ್ತದಲ್ಲಿ ಬಂಡವಾಳ ವೆಚ್ಚದಲ್ಲಿ ಕಡಿಮೆ ಪ್ರಮಾಣದಲ್ಲಿ ಹಣ ಲಭ್ಯವಾಗಿರುವುದು ಮತ್ತು ಹೆಚ್ಚಿನ ಭಾಗವು ರಾಜಸ್ವ ವೆಚ್ಚಗಳಿಗೆ ಬಳಕೆಯಾಗಿರುವಂಥದ್ದನ್ನು ಪರಿಗಣಿಸಲಾಗಿದೆ. ಇದರಿಂದ ಆರ್ಥಿಕ ಪರಿಸ್ಥಿತಿ ಇಳಿಮುಖವಾಗಿರತಕ್ಕಂಥದ್ದು ಕಂಡುಬರುತ್ತದೆ. ಇವತ್ತಿನ ದಿವಸ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಹಾಳಾಗಿದೆ. ಇನ್ನು ಹೇಳತಕ್ಕಂಥದ್ದು ಬಹಳಷ್ಟಿದೆ. ಆದರೆ ಸಮಯವಿಲ್ಲದೇ ಇರುವುದರಿಂದ ಕೊನೆಯಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವರು ಕಗ್ಗತ್ತಲೆಯಲ್ಲಿ ಏನೇನು ಮಾಡಿದ್ದಾರೆ ಎನ್ನತಕ್ಕಂಥದ್ದು ಮತ್ತು ಆರ್ಥಿಕ ಪರಿಸ್ಥಿತಿಯನ್ನು ಯಾವ ರೀತಿಯಾಗಿ ನಿರ್ವಹಿಸುತ್ತಿದ್ದಾರೆ ಎಂಬುದನ್ನು ಹಾಗೂ ಅವರು ಈಗಾಗಲೇ ಹೇಳಿರತಕ್ಕಂಥದ್ದಕ್ಕೆ ಸಂಬಂಧಪಟ್ಟಂತೆ ಹೇಳಬೇಕಾಗಿದೆ. ಆದರೆ, ತಾವು ಹೆಚ್ಚಿನ ಟೈಂ ಕೊಟ್ಟಿಲ್ಲ. ರಾಜ್ಯದ ಜವಾಬ್ದಾರಿಗಳು ಆರ್ಥಿಕ ಸ್ವತ್ತುಗಳನ್ನು ಶೀಘ್ರದಲ್ಲಿ ಅಧಿಗಮಿಸುತ್ತಿರುವುದರಿಂದ ರಾಜ್ಯದ ಅತೃಪ್ತಿಕರ ಆರ್ಥಿಕ ಪರಿಸ್ಥಿತಿಯನ್ನು ಸೂಚಿಸುತ್ತದೆ. ಆದರೆ, ನಾವು ಬಹಳ ಚೆನ್ನಾಗಿದ್ದೇವೆಂದು ಮತ್ತು ನಮ್ಮ ಆರ್ಥಿಕ ಪರಿಸ್ಥಿತಿ ಬಹಳ ಗಟ್ಟಿ ಇದೆ ಎಂದು ಹೇಳುತ್ತಿದ್ದಾರೆ. ಆದರೆ, ಸಿ.ಎ.ಜಿ.ರವರ ವರದಿ ಪ್ರಕಾರ ಇವರ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲ. ಇನ್ನು ಕೃಷಿ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಬೆಳೆ ವಿಮೆಯಲ್ಲಿ ಇವರು ಏನು ಮಾಡುತ್ತಿದ್ದಾರೆಂದರೆ, ಇವತ್ತಿನ ದಿವಸ ಬೆಳೆ ವಿಮೆ ಹಣವನ್ನು ರೈತ ತುಂಬುತ್ತಾನೆ. ಮಾನ್ಯ ಕೃಷಿ ಇಲಾಖೆಯ ಸಚಿವರಿಗೆ ಆರೋಗ್ಯ ಸರಿಯಾಗಿಲ್ಲವೆಂದು ಇವತ್ತಿನ ದಿವಸ ಅವರು ಬಂದಿಲ್ಲ. ನಾನು ಹೋದ ವರ್ಷ ಹೇಳಿದ ವಿಷಯವನ್ನು ಹೇಳಿದ್ದೇನೆ. ಮತ್ತೆ ಈ ಸಾರಿಯೂ ಹೇಳುವುದಾದರೆ, ಥ್ರೆಶೋಲ್ಡ್ ಯೀಲ್ಡ್ ಎಷ್ಟು ಎನ್ನತಕ್ಕಂಥದ್ದನ್ನು ಎಲ್ಲಾ ಪಂಚಾಯತಿ ಕಛೇರಿಯಲ್ಲಿ ಹಚ್ಚಬೇಕೆಂದು ಹೇಳಿದ್ದೇನೆ. ಆದರೆ ಇದನ್ನು ಮಾಡದೇ ಇವತ್ತಿನದಿವಸ ರೈತರನ್ನು ಕಗ್ಗತ್ತಲೆಯಲ್ಲಿಟ್ಟಿದ್ದಾರೆ. ಥ್ರೆಶೋಲ್ಡ್ ಯೀಲ್ಡ್ ಎಷ್ಟಾಗಿದೆ ಎಂಬುದಾಗಲಿ ಅಥವಾ ಈ ವರ್ಷ ಎಷ್ಟು ಕ್ಲೈಮ್ ಆಗಿದೆ ಎನ್ನತಕ್ಕಂಥ ಮಾಹಿತಿ ಕೃಷಿ ಇಲಾಖೆಯ ಅಧಿಕಾರಿಗಳಿಗಾಗಲಿ ಅಥವಾ ಬೇರೆ ಯಾರಿಗೂ ಕೂಡ ಇದು ಗೊತ್ತಿಲ್ಲ. ಇದುವರೆಗೂ ಇದನ್ನು ಕಗ್ಗತ್ತಲೆಯಲ್ಲಿ ಇಟ್ಟಿದ್ದಾರೆ. ಬೆಳೆ ವಿಮೆ ಯೋಜನೆ ಬಗ್ಗೆ ವಿಷಯ ಸಮಿತಿಯವರು ಒಂದು ಶಿಫಾರಸ್ಸು ಮಾಡಿದ್ದಾರೆ. ಡೆವಲಪ್‌ಮೆಂಟ್ ಕಮಿಷನರ್ ಜೊತೆ ಸಭೆ ಮಾಡಿದ ಮೇಲೆ ಯಾವ್ಯಾವ ರೀತಿಯಲ್ಲಿ ತುಂಬಬೇಕು ಎನ್ನತಕ್ಕಂಥದ್ದರ ಬಗ್ಗೆ ಶಿಫಾರಸ್ಸು ಮಾಡಿದ್ದಾರೆ. ಆದರೆ, ಇವರು ಏನು ಮಾಡಿದ್ದಾರೆಂದರೆ, ಹಿಂದಿನ ವರ್ಷದ ಅನುಭವದಲ್ಲಿ ಬೆಳೆ ನಷ್ಟದ ಮೊಬಲಗು ಸಕಾಲದಲ್ಲಿ ಸಹಕಾರಿ ಸಂಸ್ಥೆಗಳಿಗೆ ಬಿಡುಗಡೆ ಆಗದೇ ರೈತರು ಸುಸ್ತಿದಾರರಾಗಿ ಅವರಿಗೆ ಹೊಸದಾಗಿ ಸಾಲಸೌಲಭ್ಯ ದೊರಕದೇ ವಂಚಿತರಾಗಿರುವುದರಿಂದ ಬೆಳೆ ವಿಮೆಗೆ ಕೊಡಬೇಕಾಗಿರತಕ್ಕಂಥ ಕ್ಲೈಮ್ ಹಣವನ್ನು ಮಾರ್ಚ್ 25ರೊಳಗೆ ವಿಮಾ ಕಂಪನಿಗಳಿಗೆ ಪಾವತಿ ಮಾಡತಕ್ಕಂಥದ್ದನ್ನು ಕಡ್ಡಾಯಗೊಳಿಸಬೇಕು. ಮಾರ್ಚ್ 25ನೇ ತಾರೀಖಿನೊಳಗೆ ಆ ಹಣವನ್ನು ತುಂಬಬೇಕಾಗಿತ್ತು. ಆದರೆ, ಈಗ ಆಗಸ್ಟ್ ತಿಂಗಳು ಬಂದಿದೆ; ಆದರೆ, ಇದುವರೆಗೂ ತುಂಬಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಮೊನ್ನೆದಿವಸ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳುತ್ತಿದ್ದರು. 51 ಜನ ರೈತರು ಸಾಮೂಹಿಕವಾಗಿ ನೇಣು ಹಾಕಿಕೊಳ್ಳುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ನೋಟಿಸ್ ಕೊಟ್ಟಿದ್ದಾರೆ. ಇವರು ಒಂದು ವೇಳೆ ತುಂಬದಿದ್ದರೆ ರಾಜ್ಯದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಒಂದು ವೇಳೆ ಸುದೈವದಿಂದ ಮಳೆಯಾದರೆ ರೈತರು ಬಿತ್ತನೆ ಮಾಡುವುದಕ್ಕೆ ಎಲ್ಲಿಂದ ದುಡ್ಡು ತರುತ್ತಾರೆ? ಇವತ್ತೂ ಕೂಡ

ಹಣವನ್ನು ತುಂಬದೆ ಮುದ್ದತ್ ಮೀರಿ ಬಾಕಿದಾರರಾಗಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಇದಕ್ಕೆ ಸ್ಪಷ್ಟವಾದ ಉತ್ತರ ಹೇಳಬೇಕು. ಆಗ 10 ಕೋಟಿ ರೂಪಾಯಿ ಈಗ 10 ಕೋಟಿ ರೂಪಾಯಿ ತುಂಬತ್ತೇವೆಂದು ಹೇಳಿದರೆ ಆಗುವುದಿಲ್ಲ. ಮಾರ್ಚ್ ಒಳಗೆ ತುಂಬಬೇಕಾಗಿತ್ತು. ಮುಂದಿನ ವರ್ಷವಾದರೂ ನಿಗದಿತ ಅವಧಿಯಲ್ಲಿ ತುಂಬಬೇಕಾಗುತ್ತದೆ. ಇದಕ್ಕೆ, ಇವರು ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಂಡಿಲ್ಲ. ಸುಮಾರು 330 ಕೋಟಿ ರೂಪಾಯಿ ಆಗುತ್ತದೆ ಎಂದು ವಿಮಾ ಸಂಸ್ಥೆಯವರು ತಿಳಿಸಿದ್ದಾರೆ. ಈಗ 165 ಕೋಟಿ ರೂಪಾಯಿಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು.

**ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಯ ಸಚಿವರು) :** ಮಾನ್ಯ ಅಧ್ಯಕ್ಷರೆ, ಮಾನ್ಯ ಎಸ್.ಎಸ್. ಪಾಟೀಲ್‌ರವರೂ ಕೂಡ ಸ್ವತಃ ರೈತರಾಗಿದ್ದಾರೆ. ಬೆಳೆ ವಿಮೆ ಏನು ಎನ್ನತಕ್ಕಂಥದ್ದು ತಮಗೆ ಗೊತ್ತಿರಬೇಕು. ವಿಮಾ ಸಂಸ್ಥೆ ಬೆಳೆ ವಿಮೆಯನ್ನು ನಿಗದಿ ಮಾಡಿದ ನಂತರ ಇದರಲ್ಲಿ 50 ಪರ್ಸೆಂಟ್ ಭಾಗವನ್ನು ರಾಜ್ಯ ಸರ್ಕಾರ ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರ ಮತ್ತು ವಿಮಾ ಸಂಸ್ಥೆಗಳು 50 ಪರ್ಸೆಂಟ್‌ನಷ್ಟು ಕ್ಲೈಮ್ ಹಣವನ್ನು ಸೆಟ್ಲ್ ಮಾಡಿದ್ದೇವೆಂದು ರಾಜ್ಯ ಸರ್ಕಾರಕ್ಕೆ ಹೇಳುವವರೆಗೂ ನಾವು 50 ಪರ್ಸೆಂಟ್ ಹಣವನ್ನು ತುಂಬುವುದಕ್ಕೆ ಆಗುವುದಿಲ್ಲ. ಏತಕ್ಕಾಗಿ ವಿಳಂಬವಾಗಿದೆ ಎನ್ನತಕ್ಕಂಥದ್ದನ್ನು ತಾವು ತಿಳಿದುಕೊಳ್ಳಬೇಕು. ಕರ್ನಾಟಕ ಸರ್ಕಾರದಿಂದ ಮತ್ತು ಕೃಷಿ ಇಲಾಖೆಯಿಂದ ವಿಳಂಬವಾಗಿಲ್ಲ. ಕೇಂದ್ರ ಸರ್ಕಾರ ಮತ್ತು ವಿಮಾ ಸಂಸ್ಥೆಗಳಿಂದ ಇದು ವಿಳಂಬವಾಗಿದೆ. ಬೇಗ ಕೊಡಬೇಕೆಂದು ನಾವೂ ಕೂಡ ಪ್ರೆಜರ್ ಮಾಡುತ್ತಿದ್ದೇವೆ. ನೀವು ಈಗಾಗಲೇ ಹೇಳಿದ ಹಾಗೆ ನಾವೂ ಕೂಡ ರೈತರ ಪರವಾಗಿ ಇದ್ದೇವೆ ಎಂದು ವಾದ ಮಾಡಿದ್ದೇವೆ. ಇವತ್ತಿನ ದಿವಸ ನಮ್ಮಲ್ಲಿ ಬರಗಾಲ ಬಂದಿರುವುದರಿಂದ ರೈತರು ಬಹಳ ತೊಂದರೆಯಲ್ಲಿದ್ದಾರೆ. ಆದ್ದರಿಂದ ವಿಮೆ ಹಣವನ್ನು ಕೊಡಿ ಎಂದು ನಾವು ಹೇಳಿದ್ದೇವೆ.

**ಶ್ರೀ ಎಸ್.ಎಸ್. ಪಾಟೀಲ್ :** ಮಾನ್ಯ ಅಧ್ಯಕ್ಷರೆ, ಇದು ಇವರ ಮೊಂಡುವಾದವಾಗುತ್ತದೆ. ಇವರು 165 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ಇನ್ನು ಒಂದು ವಾರದಲ್ಲಿ ಕೇಂದ್ರ ಸರ್ಕಾರ ತನ್ನ ಪಾಲಿನ ಹಣವನ್ನು ಬಿಡುಗಡೆ ಮಾಡುತ್ತದೆ ಎಂದು ವಿಮಾ ಸಂಸ್ಥೆಯವರು ನಾನು ಕರೆಸಿದಂಥ ಸಂದರ್ಭದಲ್ಲಿ ಹೇಳಿದರು. ಆದ್ದರಿಂದ ನಾಳೆ ದಿವಸವೇ ಮಾನ್ಯ ಮುಖ್ಯಮಂತ್ರಿಯವರು ಹಣವನ್ನು ಬಿಡುಗಡೆ ಮಾಡಿದರೆ ಅವರು ಇನ್ನು 10 ದಿವಸದಲ್ಲಿ ಬಾಕಿ ಹಣವನ್ನು ತುಂಬುತ್ತಾರೆ. ನೀವು ಇಲ್ಲಿ ತುಂಬದಿದ್ದರೆ ಕೇಂದ್ರ ಸರ್ಕಾರದಿಂದ ಹಣ ಬರುವುದಿಲ್ಲ. ಆಗ 10 ಕೋಟಿ ರೂಪಾಯಿ ಮತ್ತು ಈಗ 10 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ಸುಮ್ಮನೆ ಹೇಳುವುದಕ್ಕೆ ಹೋಗಬೇಡಿ.

**ಶ್ರೀ ಆರ್.ವಿ. ದೇಶಪಾಂಡೆ :** ಕೇಂದ್ರ ಸರ್ಕಾರದಿಂದ ಮತ್ತು ವಿಮಾ ಕಂಪನಿಯಿಂದ 165 ಕೋಟಿ ರೂಪಾಯಿ ತುಂಬುತ್ತೇವೆಂದು ಪತ್ರ ತಂದರೆ ನಾವು ಇವತ್ತೇ ರಿಲೀಜ್ ಮಾಡುತ್ತೇವೆ. ಅವರು ಪತ್ರ ಕೊಡದಿದ್ದರೆ ನೀವೇನು ಮಾಡುತ್ತೀರಾ? ಕೇಂದ್ರ ಸರ್ಕಾರ ಮತ್ತು ವಿಮಾ ಸಂಸ್ಥೆಯವರು ಇದಕ್ಕೆ ಸಂಬಂಧಪಟ್ಟಂತೆ ಪತ್ರ ಕೊಟ್ಟರೆ ನಾನು ಇವತ್ತೇ ರಾಜೀನಾಮೆ ಕೊಟ್ಟು ಹೋಗುತ್ತೇನೆ.

**ಶ್ರೀ ಎಸ್.ಎಸ್. ಪಾಟೀಲ್ :** ಇವರು ಮೊದಲು 165 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಿ. ಇನ್ನು 15 ದಿವಸದೊಳಗೆ ಕೇಂದ್ರ ಸರ್ಕಾರದಿಂದ ಬಾಕಿ ಹಣವನ್ನು ತುಂಬಿಸುತ್ತೇವೆಂದು ಈ ಸಂದರ್ಭದಲ್ಲಿ ನಾನು ಚಾಲೆಂಜ್ ಮಾಡುತ್ತೇನೆ.

**ಶ್ರೀ ಆರ್.ವಿ. ದೇಶಪಾಂಡೆ** : ಕೇಂದ್ರ ಸರ್ಕಾರದಿಂದ ಇನ್ನೂ ಕ್ಲೈಮ್ ಸೆಟ್ಲ್ ಆಗಿಲ್ಲ. ಇದನ್ನು ಸೆಟ್ಲ್ ಮಾಡುವುದಕ್ಕೆ ಇನ್ನು ಸಮಯ ಇದೆ.

**ಗೊಂದಲ**

**ಶ್ರೀ ಎಸ್.ಎಸ್. ಪಾಟೀಲ್** : ಸೆಟರ್ ಮಾಡುವುದಕ್ಕೆ ಟೈಂ ಕೊಡುವುದಿಲ್ಲ. ಸಮಿತಿ ಮಾಡಿರತಕ್ಕಂಥ ಶಿಫಾರಸ್ಸನ್ನು ತಾವು ಮೊದಲು ಓದಿ.

**ಗೊಂದಲ**

**ಶ್ರೀ ಬಿ.ಆರ್. ಯಾವಗಲ್** : ಮಾನ್ಯ ಅಧ್ಯಕ್ಷರೆ, ಹಣ ಕೊಡುವುದಕ್ಕೆ ಕೇಂದ್ರ ಸರ್ಕಾರಕ್ಕಾಗಲಿ ಅಥವಾ ರಾಜ್ಯ ಸರ್ಕಾರಕ್ಕಾಗಲಿ ತೊಂದರೆಯಾಗುತ್ತಿಲ್ಲ. ಆದರೆ, ವಿಮಾ ಕಂಪನಿಗಳಿಗೆ ತೊಂದರೆಯಾಗುತ್ತಿದೆ....

**ಶ್ರೀ ಎಸ್.ಎಸ್. ಪಾಟೀಲ್** : ಈಗ 165 ಕೋಟಿ ರೂಪಾಯಿ ತುಂಬದಿದ್ದರೆ ಖಂಡಿತ ಮುಂದೆ ಆಗತಕ್ಕಂಥ ಅನಾಹುತಕ್ಕೆ ಇವರೇ ಕಾರಣರಾಗುತ್ತಾರೆ.

**ಗೊಂದಲ**

**ಅಧ್ಯಕ್ಷರು** : ಈಗ ನಮ್ಮ ಮುಂದೆ ಹೆಚ್ಚಿಗೆ ಸಮಯವಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್** : 165 ಕೋಟಿ ರೂಪಾಯಿಗಳನ್ನು ತುಂಬುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು. ಹಾಗೆಯೇ ಯಾವಾಗ ಹಣ ಬಿಡುಗಡೆ ಮಾಡುತ್ತೀರೆಂಬುದನ್ನು ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ತಿಳಿಸಬೇಕು. ಈಗ 10 ಕೋಟಿ ಅಥವಾ 20 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ಸುಮ್ಮನೆ ಹೇಳಿದರೆ ಆಗುವುದಿಲ್ಲ. 330 ಕೋಟಿ ರೂಪಾಯಿ ಆಗುತ್ತದೆ ಎಂದು ಈಗಾಗಲೇ ಸರ್ಕಾರಕ್ಕೆ ತಿಳಿಸಿದ್ದಾರೆ....

**ಶ್ರೀ ಬಿ.ಆರ್. ಯಾವಗಲ್** : ನಮ್ಮ ಸರ್ಕಾರ ಕೊಡುವುದಕ್ಕೆ ತಯಾರಿದೆ.

**ಅಧ್ಯಕ್ಷರು** : ಮಾನ್ಯ ಯಾವಗಲ್‌ರವರೇ, ತಾವೇಕೆ ಉತ್ತರ ಕೊಡುತ್ತೀರಿ? ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದವರು ಉತ್ತರ ಕೊಡುತ್ತಾರೆ. I do not want any interruptions.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಅವರು ಈಗಾಗಲೇ ಸರ್ಕಾರಕ್ಕೆ ತಿಳಿಸಿದ್ದಾರೆ. ತಿಳಿಸಿಲ್ಲ ಎನ್ನತಕ್ಕಂಥದ್ದನ್ನು ನಾಳೆ ದಿವಸ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಿದರೆ, ಈಗಾಗಲೇ ಇವರಿಗೆ ತಿಳಿಸಿದ್ದಾರೆ ಎನ್ನತಕ್ಕಂಥದ್ದನ್ನು ನಾನು ದೃಢಪಡಿಸುತ್ತೇನೆ. ಸುಮ್ಮನೆ ಏನೇನೋ ಹೇಳುವುದು ಬೇಡ. ಮೊದಲು ಇವರು 165 ಕೋಟಿ ರೂಪಾಯಿಗಳನ್ನು ತುಂಬಬೇಕಾಗುತ್ತದೆ. ಒಂದು ವೇಳೆ 165 ಕೋಟಿ ರೂಪಾಯಿಗಳನ್ನು ಇವರು ತುಂಬದಿದ್ದರೆ ರೈತರು ಮತ್ತು ಸಂಘ ಸಂಸ್ಥೆಗಳು ಹಾಳಾಗುತ್ತವೆ. ಮತ್ತೆ ರೈತರು ಮುಂದೆ ಬಿತ್ತನೆ ಮಾಡುವುದಕ್ಕೂ ಕೂಡ ಏನೂ ಉಳಿಯುವುದಿಲ್ಲ. ಈಗಾಗಲೇ ರೈತರು ಸಾಮೂಹಿಕ ಹತ್ಯೆ ಮಾಡಿಕೊಳ್ಳುವುದಕ್ಕೆ ತಯಾರಿದ್ದಾರೆ. ಇದರಿಂದ, ಬೇರೆ ಕಡೆಗಳಲ್ಲಿಯೂ ಕೂಡ ರೈತರು ಸಾಮೂಹಿಕ ಹತ್ಯೆ ಮಾಡಿಕೊಳ್ಳುತ್ತಾರೆ. ಮುಂದಿನ ದಿನಗಳಲ್ಲಿ ರೈತ ಬಿತ್ತನೆ ಮಾಡದಿದ್ದರೆ ಈ ರಾಜ್ಯದ ಆರ್ಥಿಕ ಪರಿಸ್ಥಿತಿ ಸಂಪೂರ್ಣವಾಗಿ ಹಾಳಾಗುತ್ತದೆ. ಆದ್ದರಿಂದ, ಸುಮ್ಮನೆ ಏನೇನೋ ಹೇಳುವ ಬದಲು ತಕ್ಷಣವೇ ವಿಮೆ ಹಣವನ್ನು ತುಂಬುವ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಇಲ್ಲದೆ ಹೋದರೆ ಖಂಡಿತವಾಗಿಯೂ ಇವತ್ತು ಬಹಳ ಅನ್ಯಾಯವಾಗುತ್ತದೆ. ಇವರು ಬಡ್ಡಿ ಮನ್ನಾ ಮಾಡಿದ್ದಾರೆ

ಇಲ್ಲವೆಂದು ನಾನು ಹೇಳುವುದಿಲ್ಲ. ಬಡ್ಡಿ ಮನ್ನಾ ಮಾಡಿ ಇವರು ಹಣವನ್ನು ಈಗಲೂ ತುಂಬದಿದ್ದರೆ ಏನು ಮಾಡುವುದು? ಈ ಕಡೆ ಇನ್‌ಶ್ಯೂರೆನ್ಸ್ ಹಣ ಜಮಾ ಆಗಿಲ್ಲ, ಬಡ್ಡಿ ಮನ್ನಾ ಜಮಾ ಆಗುವುದು– ಅಂದರೆ ನೀವು ಎಷ್ಟು ಹಣವನ್ನು ತುಂಬಬೇಕಾಗುತ್ತದೆ ಎನ್ನುವುದನ್ನು ಹೇಳುತ್ತೇನೆ. ನಾನು ಲೆಕ್ಕವನ್ನು ತರಿಸಿ ನೋಡಿದ್ದೇನೆ, 127 ಕೋಟಿ ರೂ.ಗಳಾಗುವುದಿಲ್ಲ, ಅದು 110 ರಿಂದ 115 ಕೋಟಿ ರೂ.ಗಳಾಗುತ್ತದೆ. 165 ಕೋಟಿ ರೂ.ಗಳು ಮತ್ತು 100 ಕೋಟಿ ರೂ.ಗಳು ಅಂದರೆ ಒಟ್ಟು 265 ಕೋಟಿ ರೂ.ಗಳನ್ನು ತುಂಬಬೇಕಾಗುತ್ತದೆ. ಅದನ್ನು ನೀವು ಹೇಗೆ ತುಂಬುತ್ತೀರಿ ಎನ್ನುವುದನ್ನು ನಿಮ್ಮ ಉತ್ತರದಲ್ಲಿ ಹೇಳಬೇಕಾಗುತ್ತದೆ. ಅದಕ್ಕೆ ನೀವು ಏನು ಪ್ರಾವಿಜನ್ ಮಾಡಿಕೊಂಡಿದ್ದೀರಿ, ನೀವು ದುಡ್ಡಿಗೆ ಏನು ವ್ಯವಸ್ಥೆ ಮಾಡಿಕೊಂಡಿದ್ದೀರಿ? ಏನಾಗಿದೆ.....

**ಅಧ್ಯಕ್ಷರು** : ನೀವು ಈ ಕಡೆ ನೋಡಿಕೊಂಡು ಮಾತನಾಡಿ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಅವರು ಇವತ್ತೇ ಉತ್ತರವನ್ನು ಕೊಡಲಿ. ಹೆಚ್ಚು ಟೈಮ್ ಇಲ್ಲದಿರುವುದರಿಂದ ಕೆಲವೊಂದು ವಿಷಯಗಳನ್ನು ನಾನು ಬಿಡುತ್ತಾ ಹೋಗುತ್ತೇನೆ. ನನಗೆ ಮೂರು ತಾಸು ಸಮಯ ಬೇಕು. ನಾನು ಅಷ್ಟು ಅಭ್ಯಾಸ ಮಾಡಿ ಇಟ್ಟುಕೊಂಡಿದ್ದೇನೆ. ಪಾಪ, ಇನ್ನೊಬ್ಬರು ಎರಡು ತಾಸು ಮಾತನಾಡಿದರೂ ಮುಗಿಯಲಿಲ್ಲ. ಆದರೂ ಕೂಡ ನಾನು ಹಾರಿಕೆ ಹೇಳಿಕೊಂಡು ಹೋಗುತ್ತೇನೆ. ಇವರ ಪರಿಸ್ಥಿತಿ ಏನು ಇದೆ ಎನ್ನುವುದನ್ನು ಹೇಳುತ್ತೇನೆ. ಹೂಲಿಗುಡ್ಡ ನೀರಾವರಿ ಯೋಜನೆ ಏನಿದೆ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿ ನಾವೆಲ್ಲಾ ಮನವಿಯನ್ನು ಕೊಟ್ಟಿದ್ದೇವೆ. ಬಹುಶಃ 4 ತಾಲ್ಲೂಕುಗಳು ಮುಂಡರಗಿ, ಹಡಗಲಿ, ಕೊಪ್ಪಳ ಮತ್ತು ಗದಗ್ ತಾಲ್ಲೂಕಿನ ಸಂಪೂರ್ಣ ಬರ ನಿವಾರಣೆಯಾಗುತ್ತಿತ್ತು. ಬಹುಶಃ ನಾವು ಮಾಡಿರುವ ಕೆಲಸವನ್ನಾದರೂ ಇವರು ಮುಂದುವರಿಸಿದ್ದರೆ ಖಂಡಿತವಾಗಿ ಅದು ಮುಗಿದು ಹೋಗುತ್ತಿತ್ತು. ಆದರೆ ದುರ್ದೈವವಶಾತ್ ಅದಕ್ಕೆ ಇವತ್ತು ಒಂದು ಕಲ್ಲನ್ನೂ ಕೂಡ ಇವರು ಇಟ್ಟಿರುವುದಿಲ್ಲ. ಹಿಂದಿನ ಲೆಕ್ಕಾಚಾರದ ಪ್ರಕಾರ ಅದು ಸುಮಾರು 50 ಸಾವಿರ ಎಕರೆ ನೀರಾವರಿ ಪ್ರದೇಶ ನಮ್ಮ ಭಾರೀ ನೀರಾವರಿ ಸಚಿವರು ಬಂದಮೇಲೆ ಅದನ್ನು 1,30,000 ಎಕರೆಗೆ ಏರಿಸಿರುತ್ತಾರೆ. ಅದರ ಬಗ್ಗೆ ಬೇರೆಯವರು ಸ್ವಲ್ಪ ತಕರಾರು ಮಾಡುತ್ತಿದ್ದಾರೆ ನಮಗೆ ಅನ್ಯಾಯವಾಗುತ್ತದೆ ಎಂದು ಹೇಳುತ್ತಿದ್ದಾರೆ. ನಮ್ಮ ರಾಜ್ಯದ ಹಣೆಬರಹವೇ ಇಷ್ಟೆ ಇದೆ. ಬೇರೆಯವರು ಏನು ಬೇಕಾದರೆ ಮಾಡಲಿ, 100 ಟಿಎಂಸಿ ಗಿಂತ ಹೆಚ್ಚು ನೀರು ಹರಿದುಹೋಗುತ್ತದೆ. ಇದನ್ನು ಯಾರೂ ತಕರಾರು ಮಾಡುವುದಕ್ಕೆ ಸಾಧ್ಯವಿಲ್ಲ. ಸುಮ್ಮನೆ ತಕರಾರು ಮಾಡುತ್ತಿದ್ದಾರೆ, ಇದು ಯಾರ ನೀರೂ ಅಲ್ಲ, ಸುಮ್ಮನೆ ಆಂಧ್ರಪ್ರದೇಶಕ್ಕೆ ಹರಿದುಹೋಗುತ್ತದೆ. ಮತ್ತು ಸಮುದ್ರಕ್ಕೆ ಹರಿದು ಹೋಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲರನ್ನೂ ಸಮಾಧಾನಪಡಿಸಬೇಕೆಂದು ಹೇಳಿಕೊಂಡು ರೆಡ್ಡಿ ಆಯೋಗವನ್ನು ಮಾಡಿದರು. ಅವರು 12 ಟಿಎಂಸಿ ನೀರನ್ನು ಕೊಡುವುದಕ್ಕೆ ಹೇಳಿದ್ದಾರೆ. ಆ ಕೆಲಸವನ್ನು ನೀವು ಏಕೆ ಪ್ರಾರಂಭ ಮಾಡುತ್ತಿಲ್ಲ? ಜನರಲ್ಲಿ ಏನು ಭಾವನೆ ಬಂದಿದೆ ಎನ್ನುವುದನ್ನು ನಾನು ನಿಮಗೆ ಹೇಳಿಬಿಡುತ್ತೇನೆ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ** : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಪಾಟೀಲರೆ.

**ಅಧ್ಯಕ್ಷರು** : ನೋ, ಎಸ್.ಎಸ್. ಪಾಟೀಲರೆ, ತಾವು ಮುಗಿಸುತ್ತೀರೋ ಇಲ್ಲವೊ?

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ನಾನು ಮುಗಿಸಿಬಿಡುತ್ತೇನೆ.

**ಅಧ್ಯಕ್ಷರು** : ಮಾನ್ಯ ಸಂಗಣ್ಣನವರೆ, ಪ್ಲೀಸ್ ತಾವು ಕುಳಿತುಕೊಳ್ಳಿ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ** : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾವು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿರುತ್ತೇವೆ.

**ಅಧ್ಯಕ್ಷರು** : ಸಂಗಣ್ಣನವರೆ, ತಾವು ಕುಳಿತುಕೊಳ್ಳಿ, ನಾನು ತಮ್ಮನ್ನು ಕರೆದಿರುವುದಿಲ್ಲ. ಈಗ ಮಾನ್ಯ ಪಾಟೀಲರು ಮಾತನಾಡುತ್ತಿದ್ದಾರೆ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಕೊಪ್ಪಳ ತಾಲ್ಲೂಕಿನ ಎಲ್ಲಾ ಜನರು ಬಂದು ನಾನು ಹಾಗೂ ಮಾನ್ಯ ಸಂಗಣ್ಣನವರು ಕೂಡಿಕೊಂಡು ಭೇಟಿಯಾಗಿ ವಿನಂತಿಯನ್ನು ಮಾಡಿಕೊಂಡಿದ್ದೇವೆ. ಜನರಲ್ಲಿ ಭಾವನೆ ಏನು ಬಂದಿದೆ ಎನ್ನುವುದನ್ನು ಹೇಳಿಬಿಡುತ್ತೇನೆ, ಅದು ಆಗಿದೆಯೋ ಇಲ್ಲವೋ ಗೊತ್ತಿಲ್ಲ. ನಿಮಗೆ ಹಾಗೂ ಶ್ರೀ ಹೆಚ್.ಕೆ. ಪಾಟೀಲರಿಗೆ ಡಿಫರೆನ್ಸ್ ಬಂದು ಬಿಟ್ಟಿದೆಯಂತೆ. ಮಂತ್ರಿಮಂಡಲ ರಚನೆಯಲ್ಲಿ ಇವೆಲ್ಲಾ ಬರುತ್ತವೆ, ಎಲ್ಲಾ ಪಾರ್ಟಿಯಲ್ಲಿಯೂ ಬರುತ್ತವೆ. ಅದರಿಂದ ಈ ಯೋಜನೆ ನಿಂತಿದೆ ಎಂದು ಜನರಲ್ಲಿ ಭಾವನೆ ಬಂದುಬಿಟ್ಟಿದೆ. ಕಲ್ಪನೆ ಇರಬಹುದು ಆದರೆ ಜನರಲ್ಲಿ ಆ ಭಾವನೆ ಬಂದಿದೆ. ಅದು ಹೋಗಬೇಕಾದರೆ, ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಂಡಿರುವ ಹಾಗೆ ಮಾಡಿದರೆ 4 ತಾಲ್ಲೂಕಿನಲ್ಲಿ ಬರಗಾಲ ನಿವಾರಣೆಯಾಗುತ್ತದೆ, ದಯವಿಟ್ಟು ನೋಡಿ ಇವತ್ತು ಅದು 600 ಕೋಟಿ ರೂ.ಗಳ ಯೋಜನೆಯಾಗಿದೆ. ಶ್ರೀ ಸಂಗಣ್ಣನವರ ಬೇಡಿಕೆ ನ್ಯಾಯವಾಗಿದೆ, ಅವರಿಗೂ ಕೂಡ 50,000 ಎಕರೆಗೆ ನೀರಾವರಿ ಕೊಡಬೇಕಾಗುತ್ತದೆ. ನೀವು ಬೇಕಾದರೆ ಹೆಚ್ಚು ಕಡಿಮೆ ಮಾಡಿ.

**ಅಧ್ಯಕ್ಷರು** : ಶ್ರೀ ಕರಡಿ ಸಂಗಣ್ಣನವರು ಹೇಳುವುದನ್ನು ಬರೆದುಕೊಳ್ಳಬೇಡಿ, ಹಾಗೂ ಮಾನ್ಯ ಭೋಸರಾಜು ಹೇಳುವುದನ್ನೂ ಬರೆದುಕೊಳ್ಳಬೇಡಿ, I have allowed only Mr. S.S. Patil.

* * *

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಅವರು ಸುಮ್ಮನೆ ಹೇಳುತ್ತಿದ್ದಾರೆ. ಅವರನ್ನು ಹೇಳಬೇಡಿ ಎಂದು ಹೇಳಿ ಅಲ್ಲಿ ಹೇಳುತ್ತಿದ್ದಾರೆ.

**ಅಧ್ಯಕ್ಷರು** : ಅವರು ಹೇಳಿರುವುದನ್ನು ಬರೆದುಕೊಳ್ಳಬೇಡಿ ಎಂದು ಹೇಳಿರುತ್ತೇನೆ. ತಾವು ಹೇಳಿರುವುದನ್ನು ಮಾತ್ರ ಬರೆದುಕೊಳ್ಳಿ ಎಂದು ಹೇಳಿರುತ್ತೇನೆ.

**ಗೊಂದಲ**

5–6 ಜನರು ಮಾತನಾಡುತ್ತಿರುವುದರಿಂದ ಯಾವುದನ್ನೂ ತೆಗೆದುಕೊಳ್ಳಬೇಡಿ. ಸುಮ್ಮನೆ ಇರಿ. ಈಗಾಗಲೇ ನೀವು 5 ನಿಮಿಷ ಜಾಸ್ತಿ ಮಾತನಾಡಿದ್ದೀರಿ, ಇನ್ನೊಂದೆರಡು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ನಾನು ಮುಗಿಸಲಿಕ್ಕೆ ತಯಾರಾಗಿದ್ದೆ ಅವರು ಮಧ್ಯೆದಲ್ಲಿ ಎದ್ದೇಳುತ್ತಿದ್ದಾರೆ. 5 ನಿಮಿಷ ಟೈಮ್ ಹೋಯಿತು. ಈಗ ನಾನು ಏನು ಮಾಡಲಿ? ಹೇಳುವುದು ಬೇಡವೆಂದರೆ ಹೇಗೆ?

**ಅಧ್ಯಕ್ಷರು** : ತಾವು ಸುಮ್ಮನೆ ಇರಿ, ಪಾಟೀಲರಿಗೆ ಅವಕಾಶವನ್ನು ಕೊಟ್ಟಿರುವುದರಿಂದ ಅವರು ಮಾತನಾಡುತ್ತಿದ್ದಾರೆ.

---

* * * ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಲಿಲ್ಲ.

**ಶ್ರೀ ಸಿ.ಆರ್. ಸಗೀರ್ ಅಹ್ಮದ್** : ಮಾನ್ಯ ಅಧ್ಯಕ್ಷರೆ, ಇವರ ವಿಚಾರ ಹೀಗಾಗಿರುವುದರಿಂದ ಹೊಂದಾಣಿಕೆಯಾಗುತ್ತಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ನೋಡಿ, ಅದರ ಬಗ್ಗೆ ಹೇಳಬೇಕೆಂದರೆ, ಇವರು ಹೊಂದಾಣಿಕೆಯ ಸುದ್ದಿಯನ್ನು ಏಕೆ ತರುತ್ತಿದ್ದಾರೆ. ಇವು ಕೆಲವೊಂದು ಬೇಕಾಗುತ್ತವೆ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ನೋಡಿ, ಅದರ ಬಗ್ಗೆ ಹೇಳಬೇಕೆಂದರೆ, ಇವರು ಹೊಂದಾಣಿಕೆಯ ಸುದ್ದಿಯನ್ನು ಏಕೆ ತರುತ್ತಿದ್ದಾರೆ. ಇವು ಕೆಲವೊಂದು ಬೇಕಾಗುತ್ತವೆ.

**ಗೊಂದಲ**

**ಅಧ್ಯಕ್ಷರು** : ಸಂಗಣ್ಣನವರೆ ಏನು ಇದೆಲ್ಲಾ, ತಾವು ಕುಳಿತುಕೊಳ್ಳಿ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ತುಂಗಭದ್ರಾ ಹಿನ್ನೀರಿನಿಂದ ಅವೆಲ್ಲಾ ಜಮೀನುಗಳು ಮುಳುಗಡೆಯಾಗಿ ಹೋಗಿರುತ್ತವೆ. ಆ ಕಾರಣಕ್ಕಾಗಿ ಅವರಿಗೆ 50,000 ಎಕರೆಗೆ ನೀರು ಕೊಡುವುದಕ್ಕೆ ಸಾಧ್ಯವಿದೆ. ಇನ್ನೊಬ್ಬರಿಗೆ ಅನ್ಯಾಯವಾಗುವುದು ಬೇಡ. ಇಂಥವರಿಗೆ ಅನ್ಯಾಯ ಮಾಡಿರುತ್ತೀರೆಂದು ನಾವು ಹೇಳುತ್ತಿಲ್ಲ ಕೊಪ್ಪಳದಲ್ಲಿ 50 ಸಾವಿರ ಎಕರೆಗೆ ನೀರನ್ನು ಕೊಡಲಿಕ್ಕೆ ಸಾಧ್ಯ ಇದೆ. ಅದೇ ರೀತಿ ಗದಗ್ ಜಿಲ್ಲೆಗೆ ಕೊಡುವುದಕ್ಕೆ ಸಾಧ್ಯವಿದೆ, ಹಡಗಲಿ ತಾಲ್ಲೂಕಿಗೆ ಇನ್ನಷ್ಟು ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಿದೆ. ಅಲ್ಲಿ 100 ಟಿಎಂಸಿ ನೀರು ಹೆಚ್ಚಿಗೆ ಇದೆ. ಅದನ್ನು ಮಾಡಬೇಕಾಗುತ್ತದೆ, ಇದನ್ನು ನಾನು ಹೇಳುವುದಕ್ಕೆ ಹೋದರೆ, ಮಧ್ಯದಲ್ಲಿ ಮಾನ್ಯ ಸಗೀರ್ ಅಹ್ಮದ್‌ರವರು ಬಂದು ನೀವು ಕೂಡಿಲ್ಲ ಎಂದರು ಹೌದು, ಇದರ ಬಗ್ಗೆ ಮೊನ್ನೆ ಹೇಳಿದ್ದೇವೆ, ಅದೊಂದು ಕಡೆ ಬಂದಿದೆ, ಏನಾಗಿದೆ ಎಂದರೆ, ಇಲ್ಲಿ ರಾಜ್ಯ ಸರ್ಕಾರ ಸತ್ತಿದೆ.

**ಶ್ರೀ ಸಿ.ಆರ್. ಸಗೀರ್ ಅಹ್ಮದ್** : ಮಾನ್ಯ ಅಧ್ಯಕ್ಷರೆ, ಮಾನ್ಯ ಕರಡಿ ಸಂಗಣ್ಣ ಅವರು ಹೇಳಿದ್ದು, ನಾನಲ್ಲ.

**ಅಧ್ಯಕ್ಷರು** : ಮಾನ್ಯ ಸಗೀರ್ ಅಹ್ಮದ್‌ರವರೆ, ನಮಗೆ ಸಮಯವಿರುವುದಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಯಾವ ರೈತರಿಗೂ ಅನ್ಯಾಯವಾಗದಂತೆ ಆ ಯೋಜನೆಯನ್ನು ಮಾಡಿ. ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಅಧ್ಯಕ್ಷರು** : ತಮ್ಮ ಸಮಯ ಮುಗಿಯಿತು, ತಾವು 10 ನಿಮಿಷ ಇನ್ನು ಜಾಸ್ತಿಯಾಗಿ ತೆಗೆದುಕೊಂಡಿರುತ್ತೀರಿ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ತಾವು ನನಗೆ ಒಂದು ತಾಸು ಸಮಯ ಕೊಡುತ್ತೇನೆಂದು ಮೊನ್ನೆ ಹೇಳಿದ್ದಿರಿ ಇನ್ನು ನಾನು ಶಿಕ್ಷಣ ಇಲಾಖೆಯ ಬಗ್ಗೆ ಮಾತನಾಡಬೇಕು.

**ಅಧ್ಯಕ್ಷರು** : ಒಂದು ತಾಸು ಯಾರಿಗೂ ಮಾತನಾಡಿ ಎಂದು ಹೇಳಿರುವುದಿಲ್ಲ. ಟೋಟಲ್ ಆಗಿ ಮಾತನಾಡಿ ಎಂದು ಮೊನ್ನೆ ಮಾನ್ಯ ಚಂದ್ರೇಗೌಡರು ಹೇಳಿರುವುದು. ಅಂದು ಡಿಸೈಡ್ ಆಗಿರುವ ಬಗ್ಗೆ ನಾನು ನನ್ನ ರೂಮಿನಲ್ಲಿ ಕುಳಿತುಕೊಂಡು ಟಿವಿಯಲ್ಲಿ ನೋಡುತ್ತಿದ್ದೆ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಶಿಕ್ಷಣ ಇಲಾಖೆಯ ಬಗ್ಗೆ ಹೇಳುತ್ತೇನೆ. ಅಲ್ಲಿ ಬಿಸಿಲೂಟವನ್ನು ಕೊಡುತ್ತಿದ್ದಾರೆ, ಮಾನ್ಯ ಸಚಿವರು ಇಲ್ಲಿಯೇ ಇದ್ದಾರೆ.

**ಅಧ್ಯಕ್ಷರು** : ರೂಲ್ 69ರಲ್ಲಿ ಬೇರೆ ಸಬ್ಜೆಕ್ಟ್ ಇದೆ, ಅದು ಬಂದಾಗ ತಾವು ಮಾತನಾಡಿ. ತಮಗೆ ಅವಕಾಶವನ್ನು ಕೊಡುತ್ತೇನೆ, ಇನ್ನು ಒಂದು ವಾರ ಅಧಿವೇಶನ ಇರುತ್ತದೆ. ಬಿಸಿಯೂಟದ ಬಗ್ಗೆ ಬೇರೆ ಚರ್ಚೆ ಇದೆ. ರೂಲ್ 69ರಲ್ಲಿ ಅದನ್ನು ಅಲೋ ಮಾಡಿದ್ದೇನೆ, ನೋ, ಆ ಸಬ್ಜೆಕ್ಟ್ ಬರುತ್ತಿದೆ. ಅದು ಬಂದಾಗ ಮಾತನಾಡಿ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಬಜೆಟ್‌ನಲ್ಲಿ ಇವರು ಏನು ಮಾಡಿದ್ದಾರೆಂದು ಹೇಳಬೇಕಾಗುತ್ತದೆ, ಹಾಗಾದರೆ ಆ ಸಬ್ಜೆಕ್ಟ್ ಬಂದಾಗ ಮಾತನಾಡುತ್ತೇನೆ, ಬಿಸಿಯೂಟದ ಬಗ್ಗೆ ಈಗ ಮಾತನಾಡುವುದಿಲ್ಲ, ಅದನ್ನು ಬಿಟ್ಟು ಬಿಡುತ್ತೇನೆ. ಹಾಸ್ಟೆಲ್ ಬಗ್ಗೆ ಹೇಳುತ್ತೇನೆ. ಹಳ್ಳಿಯ ಮಕ್ಕಳಿಗೆ ಇದುವರೆಗೆ ಪುಸ್ತಕಗಳನ್ನು ಕೊಟ್ಟಿಲ್ಲ, ಸಿಟಿಯಲ್ಲಿರುವ ಮಕ್ಕಳು ಓದುತ್ತಿದ್ದಾರೆ. ನಾನು ಮೊನ್ನೆ ಮೊರಾರ್ಜಿದೇಸಾಯಿ ವಸತಿ ಶಾಲೆಗೆ ಭೇಟಿಯನ್ನು ಕೊಟ್ಟಿರುತ್ತೇನೆ. 10 ಹುಡುಗರಿಗೆ ಇವರು ಒಂದು ಪುಸ್ತಕವನ್ನು ಕೊಡುತ್ತಾರೆ, ನೋಡಿ, ಇದು ಎಂತಹ ಸರ್ಕಾರ? ಇವರು ಸುಮ್ಮನೆ ಹೇಳುತ್ತಾರೆ, ಹರಿಜನರನ್ನು ಉದ್ಧಾರ ಮಾಡುತ್ತೇವೆ, ಮೊರಾರ್ಜಿದೇಸಾಯಿ ವಸತಿ ಶಾಲೆಯನ್ನು ಮಾಡಿದ್ದೇವೆ, ಹಾಸ್ಟೆಲ್‌ಗಳನ್ನು ತೆಗೆದಿದ್ದೇವೆಂದು ಹೇಳುತ್ತಾರೆ, ಅಲ್ಲಿ ಯಾವ ಹಾಸ್ಟೆಲ್‌ಗಳಲ್ಲೂ ಪುಸ್ತಕಗಳು ಇರುವುದಿಲ್ಲ. ಅಲ್ಲಿ ಮೊನ್ನೆ ಅಡುಗೆಯವರನ್ನು ನೇಮಕ ಮಾಡಿಕೊಂಡಿದ್ದಾರೆ. ಅವರಿಗೆ ಅಡುಗೆಯನ್ನು ಮಾಡುವುದಕ್ಕೆ ಬರುವುದಿಲ್ಲ, ಮೊನ್ನೆ ನಮ್ಮ ಮುಳುಗುಂದದ ಹಾಸ್ಟೆಲ್‌ನಲ್ಲಿ ಅಡುಗೆ ಮಾಡಿದ್ದನ್ನು ಊಟ ಮಾಡಿ ಸುಮಾರು 30 ಹುಡುಗರು ದವಾಖಾನೆಗೆ ಅಡ್ಮಿಟ್ ಆಗಿದ್ದರು, ಅವರಿಗೆ ಅಡುಗೆ ಮಾಡುವುದಕ್ಕೆ ಬರದೇ ಯಾವುದೋ ಅಡುಗೆಯನ್ನು ಮಾಡಿ ಹಾಕಿದ್ದಾರೆ. ನಾನು ಹೋಗಿ ಆ ಮಕ್ಕಳನ್ನು ನೋಡಿದೆ ಅವರೆಲ್ಲರಿಗೂ ಸಲಾಯಿನ್ ಹಚ್ಚಿದ್ದರು. ಅವನು ಅಡುಗೆ ಮಾಡುವುದಕ್ಕೆ ಬರುವುದಿಲ್ಲವೆಂದು ಓಪನ್ ಆಗಿ ಹೇಳಿದನು. ಅಡುಗೆ ಮಾಡುವುದಕ್ಕೆ ಬರದೇ ಇರುವವನಿಗೆ ಅಡುಗೆ ಕೆಲಸಕ್ಕೆ ಇಟ್ಟುಕೊಂಡಿದ್ದಾರೆ. ಪುಸ್ತಕಗಳು ಇಲ್ಲದೇ ಇರುವುದರಿಂದ ಹಳ್ಳಿಯ ಹುಡುಗರು ಹಾಳಾಗಿ ಹೋಗುತ್ತಾರೆ, ಹೀಗಾದರೆ ಏನು ಮಾಡುವುದು? ಈಗಾಗಲೇ ಇದ್ದ 10 ಪರ್ಸೆಂಟ್ ರೂರಲ್ ಕೋಟಾ ಕೂಡ ಹೋಯಿತು, ಇನ್ನು ಮುಂದೆ ಅವರಿಗೆ ಯಾವ ನೌಕರಿಯೂ ಸಿಗುವುದಿಲ್ಲ. ಈಗಾಗಲೇ ಸಿಟಿಯಲ್ಲಿರುವ ಮಕ್ಕಳು ಅನೇಕ ಪಾಠಗಳನ್ನು ಓದಿ ಮುಗಿಸಿದ್ದಾರೆ. ಅಲ್ಲಿ ಇನ್ನೂ ಪುಸ್ತಕ ಇರುವುದಿಲ್ಲ, ಪಾಠ ಹೇಳುವುದಕ್ಕೆ ಟೀಚರ್ಸ್ ಇಲ್ಲ, ಅಲ್ಲಿರುವ ಮಕ್ಕಳಿಗೆ ಯಾವುದು ವ್ಯವಸ್ಥೆ ಇಲ್ಲ, ಮತ್ತೆ ಇವರು 8ನೇ ತರಗತಿಯನ್ನು 7ನೇ ತರಗತಿ ಇರುವ ಶಾಲೆಗೆ ಸೇರಿಸಿದರು. ಇದಕ್ಕೆ ನಾವು ಏನು ಮಾಡುವುದು? ಮಾನ್ಯ ಅಧ್ಯಕ್ಷರೆ, ಬಿಸಿಯೂಟದ ಬಗ್ಗೆ ನಾನು ಹೇಳುತ್ತಿಲ್ಲ, ಶಿಕ್ಷಣದ ಬಗ್ಗೆ ಹೇಳುತ್ತಿದ್ದೇನೆ. ಟೆಕ್ಸ್ಟ್‌ಬುಕ್ ಬಗ್ಗೆ ಹೇಳುತ್ತಿದ್ದೇನೆ. ಮಾನ್ಯ ಶಿಕ್ಷಣ ಸಚಿವರ ಬಗ್ಗೆ ನನಗೆ ಒಳ್ಳೆಯ ಅಭಿಪ್ರಾಯವಿದೆ. ಅವರು ಪ್ರೊಫೆಸರ್ ಇದ್ದಾರೆ. ಶಿಕ್ಷಣ ಇಲಾಖೆಯ ಇಬ್ಬರೂ ಸಚಿವರು ಒಳ್ಳೆಯವರು ಇರುವುದರಿಂದ ಇಲಾಖೆಯನ್ನು ನೋಡಿಕೊಟ್ಟಿದ್ದಾರೆ, ನಾನು ಇಲ್ಲವೆಂದು ಹೇಳುವುದಿಲ್ಲ. ಇದನ್ನು ನೀವು ಪ್ರಾಮಾಣಿಕವಾಗಿ ಹೇಳಬೇಕು. 8ನೇ ತರಗತಿಯನ್ನು ನೀವು ಮಾಡಬೇಡಿ ಎಂದು ನಾವು ಸಬ್ಜೆಕ್ಟ್ ಕಮಿಟಿಯಲ್ಲಿ ಹೇಳಿದೆವು, ನೀವು ಮಾಡಿದಿರಿ. ಏಕೆಂದರೆ ನೀವು 8ನೇ ತರಗತಿಯನ್ನು ಮಾಡುವುದರಿಂದ ಅಲ್ಲಿ ಒಂದು ಹೈಸ್ಕೂಲ್ ತೆಗೆದಂತಾಗುತ್ತದೆ. ಸಿಟಿಯಲ್ಲಿರುವ ಹೈಸ್ಕೂಲ್‌ನಲ್ಲಿ ಓದಿರುವಂಥ ಹುಡುಗ, ಅವನಿಗೆ ಸಿಬಿಝಡ್ ಇದೆ, ಪಿಸಿಎಂ ಇದೆ, ಇಂಗ್ಲಿಷ್ ಪಾಠ ಹೇಳುವವರು ಬೇರೆ ಇದ್ದಾರೆ. 8ನೇ ತರಗತಿಯನ್ನು ಕಲಿಸಲು 5 ಜನ ಶಿಕ್ಷಕರು ಇರುತ್ತಾರೆ.

ಹಳ್ಳಿಯಲ್ಲಿ ಹೋದರೆ ಯಾವ ಶಿಕ್ಷಕರೂ ಇರುವುದಿಲ್ಲ. ಪಿಯುಸಿ ಓದಿರುವ ಒಬ್ಬ ಮಾಸ್ತರನಿಗ ಟ್ರೈನಿಂಗ್ ಕೊಟ್ಟು ಪಾಠ ಹೇಳುವುದಕ್ಕೆ ಹಚ್ಚುತ್ತಾರಂತೆ. ಅವನು ಎಷ್ಟು ಕಲಿಸಬಹುದು? ಆಗ ಹಳ್ಳಿಯ ಹುಡುಗರು ಸಂಪೂರ್ಣವಾಗಿ ಹಾಳಾಗಿ ಹೋಗುತ್ತಾರೆ. ಇನ್ನಷ್ಟು ಅವರು ನೌಕರಿಯಿಂದ ವಂಚಿತರಾಗುತ್ತಾರೆ. ವಿದ್ಯಾಭ್ಯಾಸದಿಂದ ವಂಚಿತರಾಗುತ್ತಾರೆ. ಮಾನ್ಯ ಸಚಿವರೆ, ತಾವು ನಂತರ ಉತ್ತರ ಕೊಡಬಹುದು. ನನಗೆ ಟೈಮ್ ಆಗುತ್ತದೆ.

**ಪ್ರೊ: ಬಿ.ಕೆ. ಚಂದ್ರಶೇಖರ್** : ಮಾನ್ಯ ಅಧ್ಯಕ್ಷರೆ, ತಮಗೆ ಮಾಹಿತಿ ಹೇಳಿಬಿಡುತ್ತೇನೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರಂತೆ, ನಾನು ತಾವು ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳುತ್ತೇನೆ.

**ಪ್ರೊ: ಬಿ.ಕೆ. ಚಂದ್ರಶೇಖರ್** : ಮಾನ್ಯ ಸಭಾಧ್ಯಕ್ಷರೆ, ಒಂದೇ ನಿಮಿಷ, ನಾನು ಮಾಹಿತಿಯನ್ನು ಮಾತ್ರ ಕೊಡುತ್ತೇನೆ.

**ಅಧ್ಯಕ್ಷರು** : ಸಮಯ ತೆಗೆದುಕೊಳ್ಳುತ್ತದೆ. ಮಾನ್ಯ ವಿರೋಧ ಪಕ್ಷದವರು ಒಪ್ಪಿರುವ ಪ್ರಕಾರ, 12 ಗಂಟೆಯೊಳಗೆ ಮುಗಿಸಬೇಕು, ನಂತರ ಮಾನ್ಯ ಮುಖ್ಯಮಂತ್ರಿಗಳ ಉತ್ತರ ಪ್ರಾರಂಭವಾಗುತ್ತದೆ.

**ಶ್ರೀ ಎಸ್.ಎಸ್. ಪಾಟೀಲ್** : ನಾನು ಹೇಳಿಕೊಂಡು ಹೋದರೆ ಇನ್ನೂ ಬಹಳಷ್ಟು ವಿಷಯಗಳು ಇವೆ.

**ಅಧ್ಯಕ್ಷರು** : ತಮಗೆ ಇನ್ನೊಂದು ಸಲ ಯಾವಾಗಲಾದರೂ ಸಮಯವನ್ನು ಕೊಡುತ್ತೇನೆ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ, ನನ್ನದೇನೂ ತಕರಾರು ಇಲ್ಲ.

**ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)** : ಮಾನ್ಯ ಅಧ್ಯಕ್ಷರೆ, ನಾನು ಭಾಷಣವನ್ನು ಮಾಡುವುದಿಲ್ಲ, ಒಂದು ನಿಮಿಷದಲ್ಲಿ ಮಾಹಿತಿ ಕೊಡುತ್ತೇನೆ. ಇತ್ತೀಚೆಗೆ ಈ ಸದನದಲ್ಲಿ ಈ ವಿಚಾರ ಚರ್ಚೆಗೆ ಬಂದಿತ್ತು. ಎಷ್ಟು ಶಾಲೆಗಳಲ್ಲಿ 8ನೇ ತರಗತಿಯನ್ನು ಏಕೆ 7 ತರಗತಿಗೆ ಅಟ್ಯಾಚ್ ಮಾಡಿದ್ದೀರಿ ಎಂಬ ಪ್ರಶ್ನೆ ಬಂದಿತ್ತು. ಇಡೀ ರಾಜ್ಯದಲ್ಲಿ ಎಲ್ಲಾ ಶಾಲೆಗಳಲ್ಲಿ ನಾವು ಆ ಕೆಲಸವನ್ನು ಮಾಡಿಲ್ಲ. 2600 ಶಾಲೆಗಳಲ್ಲಿ ಮಾತ್ರ 8ನೇ ತರಗತಿಯನ್ನು 7ನೆ ತರಗತಿಗೆ ಸೇರಿಸಿರುತ್ತೇವೆ. ಇದಕ್ಕೆ ಕಾರಣವೇನೆಂದರೆ, 39 ಸಾವಿರ ಹೆಣ್ಣುಮಕ್ಕಳು 7ನೇ ತರಗತಿಯಾದ ನಂತರ ಶಾಲೆಯನ್ನು ಬಿಟ್ಟು ಹೋಗುತ್ತಿದ್ದರು. ಸಂವಿಧಾನದಲ್ಲಿರುವ ಒಂದು ಆದೇಶದ ಪ್ರಕಾರ 6 ರಿಂದ 14ನೇ ವಯಸ್ಸಿನವರೆಗೆ ಇರುವ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಬೇಕು ಎನ್ನುವ ಒಂದು ಕಟ್ಟುನಿಟ್ಟಿನ ಆದೇಶವಿರುತ್ತದೆ.

## 12.10 ಪಿಎಂ

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯವರೂ ಕೂಡ ನಮ್ಮ ಜೊತೆ ಮಾತನಾಡಿದರು ಮತ್ತು ಅವರು ಎಲ್ಲಾ ರಾಜ್ಯ ಸರ್ಕಾರಗಳಿಗೆ ಸೂಚನೆಯನ್ನು ಕೊಟ್ಟರು. ಸಂವಿಧಾನದಲ್ಲಿ ಈ ರೀತಿಯಾಗಿ ಇರುವುದರಿಂದ ದಯವಿಟ್ಟು 8ನೇ ತರಗತಿಯನ್ನು 7ನೇ ತರಗತಿಗೆ ಸೇರಿಸಿ ಎಂದು ಒಂದು ನ್ಯಾಷನಲ್ ಪಾಲಿಸಿಯನ್ನು ಮಾಡಿದರು. ಅವರು ಅದನ್ನು ನ್ಯಾಷನಲ್ ಪಾಲಿಸಿ ಎಂದು

ಮಾಡಿದರು ಎಂದು ಒಪ್ಪಿಗೆ ಮಾಡಬೇಕೆಂದು ನಾನು ಹೇಳುತ್ತಿಲ್ಲ, ಇದರಲ್ಲಿ ಬಹಳ ಉತ್ತಮವಾದ ಗುರಿ ಇದ್ದುದ್ದರಿಂದ ಇದನ್ನು ಮಾಡಬೇಕು ಒಂದನೇ ಪಾಯಿಂಟ್. ಇನ್ನು ಎರಡನೆಯದೆಂದರೆ, ಎಲ್ಲೆಲ್ಲಿ ಬಿಎಡ್ ಮಾಡಿರುವಂತಹ ಶಿಕ್ಷಕರು ಇದ್ದಾರೆ ಅಥವಾ 2600 ಶಾಲೆಗಳ ಅಸುಪಾಸಿನಲ್ಲಿ ಯಾರು ಬಿಎಡ್ ಮಾಡಿರುವವರು ಸಾಕಷ್ಟು ಸಿಗದೇ ಹೋದರೆ ಎಂ.ಎ., ಎಂ.ಎಸ್ಸಿ. ಮಾಡಿರುವವರು ಯಾರು ಇದ್ದಾರೆ, ಇವರೆಲ್ಲರನ್ನೂ ಗುರುತು ಮಾಡಿಕೊಂಡು ಅವರನ್ನು ಅಲ್ಲಿಂದ ಇಲ್ಲಿಗೆ ನಿಯೋಜಿಸಬೇಕೆಂದು ಆ ಕೆಲಸವನ್ನು ಶುರು ಮಾಡಿದ್ದೇವೆ. ಮಾನ್ಯ ಎಸ್.ಎಸ್. ಪಾಟೀಲ್‌ರವರು ಹೇಳಿದ ಹಾಗೆ, ಅಲ್ಲಲ್ಲಿ ನಿಧಾನವಾಗಿದೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ಈ ಸದನದಲ್ಲಿ ಅದನ್ನು ನಾನು ಒಪ್ಪಿಕೊಂಡು ಮಾಡಿದೆ, ಈಗಾಗಲೇ ಆ ನಿಯೋಜನೆಯ ಕೆಲಸ ಸಂಪೂರ್ಣವಾಗಿ ಆಗಿದೆ. ಮತ್ತು ನಾನು ಇನ್ನೊಂದು ಸಲಹೆ ಕೊಟ್ಟಿದ್ದಕ್ಕೆ ಒಪ್ಪಿಕೊಂಡರು. ಆ ದಿನ ಮಾನ್ಯ ಸಿಂಧ್ಯಾರವರು ಮತ್ತು 3–4 ಜನರು ಮಾತನಾಡಿದರು, ಆಗ ನಾನು ಹೇಳಿದೆ, ಗೆಸ್ಟ್ ಟೀಚರ್ಸ್ ಎಂದು ಇಂಥಿಂಥ ಶಾಲೆಗಳಲ್ಲಿ ತತ್‌ಕ್ಷಣದಿಂದ ಅಪಾಯಿಂಟ್ : ಮಾಡೋಣ ಎಂದು ಆ ಪ್ರಕ್ರಿಯೆ ಶುರುವಾಗಿದೆ, ಇದನ್ನು ಮಾಡದೆ ಇದ್ದಿದ್ದರೆ ಕೇಂದ್ರ ಸರ್ಕಾರದ ವತಿಯಿಂದ ನಮಗೆ 8ನೇ ತರಗತಿಯಲ್ಲಿ ಪಾಠ ಮಾಡುವುದಕ್ಕೆ ಹೆಚ್ಚುವರಿ ಶಿಕ್ಷಕರನ್ನು ಕೊಡುವುದಾಗಲಿ, ಅಥವಾ ಅದಕ್ಕೆ ಬೇಕಾದ ಕೊಠಡಿಗಳನ್ನು ಕೊಡುವುದಾಗಲಿ ಆಗುವುದಿಲ್ಲವೆಂದು ಹೇಳಿದರು. ನೀವು ಇದನ್ನು ಮಾಡಿ ಅದನ್ನು ನಾವು ನಂತರ ಮಾಡುತ್ತೇವೆಂದರು. ಆದ್ದರಿಂದ ಬರುವ ವರ್ಷ ನಮಗೆ ಅಗತ್ಯವಾದಷ್ಟು ಹೆಚ್ಚುವರಿ ಶಿಕ್ಷಕರನ್ನು 8ನೇ ತರಗತಿಗೆ ಪಾಠ ಮಾಡುವುದಕ್ಕೆ ಮತ್ತು ಕೊಠಡಿಗಳನ್ನು ಕೊಡುವುದಕ್ಕೆ ಕೇಂದ್ರ ಸರ್ಕಾರದವರೂ ಕೂಡ ಒಪ್ಪಿಕೊಂಡಿದ್ದಾರೆ. ನಾವು ಪ್ರಯತ್ನ ಪಟ್ಟಿದ್ದೇವೆ, ನಾವು ಮಾಡದೆಯೇ, ನೀವು ಮೊದಲು ಕೊಡಿ ಆಮೇಲೆ ಮಾಡೋಣವೆಂದರೆ ಅದು ಆಗುವುದಿಲ್ಲವೆಂದರು. ಅವರ ಪಾಲಿಸಿಯೂ ಸರಿ ಎಂದು ನನಗನ್ನಿಸುತ್ತದೆ. ಆದ್ದರಿಂದ ಕೆಲವು ದಿನಗಳಲ್ಲಿ ಆದ ತೊಂದರೆಯನ್ನು ಬಹಳ ದೊಡ್ಡದಾಗಿ ಮಾಡುವುದು ಬೇಡಿ.

**ಶ್ರೀ ಆರಗ ಜ್ಞಾನೇಂದ್ರ** : ಸುಮ್ಮನೆ ಹೇಳುವುದಿಲ್ಲ ಅಧ್ಯಕ್ಷರೆ, ನಾವು ಯಾವಾಗಲೂ ಊರಿನಲ್ಲಿ ಹೊಡೆತ ತಿನ್ನಬೇಕಷ್ಟೆ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಸಚಿವರು ಪ್ರಾರಂಭ ಮಾಡಿದ್ದಕ್ಕೆ ನಾನು ತಕರಾರು ಮಾಡಿಲ್ಲ. ಸಿಟಿಯಲ್ಲಿರತಕ್ಕ ಹೈಸ್ಕೂಲಿನಲ್ಲಿ ಹೇಗೆ ಕೊಟ್ಟಿದ್ದಿರೋ ಹಾಗೆ ಹಳ್ಳಿಗಳಲ್ಲಿರತಕ್ಕ ಶಾಲೆಗಳಿಗೂ 5 ಜನ ಶಿಕ್ಷಕರನ್ನು ಕೊಡಿ ಸಿಟಿಯಲ್ಲಿರತಕ್ಕ ಮಕ್ಕಳು ಚೆನ್ನಾಗಿ ಓದಿದ್ದಾರೆ, ಅವರಿಗೆಲ್ಲಾ ಪುಸ್ತಕ ಇದೆ, ಟೀಚರ್ಸ್‌ಗಳು ಇದ್ದಾರೆ, ಅವರು 50 ಪರ್ಸೆಂಟ್ ಓದಿದ್ದಾರೆ. ಇವರಿಗೆ ಇನ್ನು ಶಾಲೆ ಪ್ರಾರಂಭವಾಗಿಲ್ಲ, ಸುಮ್ಮನೆ 8ನೇ ಇಯತ್ತೆ ಎಂದು ಮಾಡಿದ್ದಾರೆ, ಅಷ್ಟು ಹುಡುಗರನ್ನು ಹಿಡಿದಿಟ್ಟು ಕೊಂಡಿದ್ದಾರೆ, ಅಲ್ಲಿ ಕಲಿಸುವುದಕ್ಕೆ ಒಬ್ಬ ಶಿಕ್ಷಕರೂ ಇಲ್ಲ; ಪುಸ್ತಕಗಳೂ ಸಹ ಇಲ್ಲ, ಇದು ನನ್ನ ತಕರಾರು. ನೀವು ಅದನ್ನು ಸರಿ ಮಾಡಿದರೆ ನನ್ನದೇನೂ ತಕರಾರು ಇಲ್ಲ.

**ಪ್ರೊ: ಬಿ.ಕೆ. ಚಂದ್ರಶೇಖರ್** : ದಯಮಾಡಿ ಅದನ್ನು ನಾನು ಸರ್ವಥಾ ಒಪ್ಪುವುದಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್** : ಇಬ್ಬರು ಒಟ್ಟಿಗೆ ಕೂಡಿ ಹೋಗೋಣ. ಯಾವುದು ಸರಿ ಎಂಬುದು ಗೊತ್ತಾಗುತ್ತದೆ.

**ಪ್ರೊ: ಬಿ.ಕೆ. ಚಂದ್ರಶೇಖರ್** : ಪುಸ್ತಕ ಇಲ್ಲವೆನ್ನುವುದು, 8ನೇ ತರಗತಿಗೆ ಶಿಕ್ಷಕರು ಇಲ್ಲವೆನ್ನುವುದು ಮಾನ್ಯ ಪಾಟೀಲ್‌ರವರು ಆ ಮಾತನ್ನು ಹೇಳಬಾರದು. ನೀವು ರಾಜಕೀಯವಾಗಿ ಮಾತನಾಡುತ್ತಿದ್ದೀರಿ.

**ಶ್ರೀ ಎಸ್.ಎಸ್. ಪಾಟೀಲ್** : ಇದರಲ್ಲಿ ರಾಜಕೀಯವಾದ ಮಾತಿಲ್ಲ. ನಾನು ಪ್ರಾಮಾಣಿಕವಾಗಿ ಮಾತನಾಡುವುದಕ್ಕೆ ಹತ್ತಿದ್ದೇನೆ.

**ಅಧ್ಯಕ್ಷರು** : ಮಾನ್ಯ ಪಾಟೀಲ್‌ರವರೆ, ತಾವು ನನ್ನ ಕಡೆ ನೋಡಿ ಮಾತನಾಡಿ. ತಮಗೆ ಮಾತನಾಡುವುದಕ್ಕೆ ಕೊಟ್ಟಿರುವ ಸಮಯ ಮುಗಿಯಿತು.

**ಶ್ರೀ ಎಸ್.ಎಸ್. ಪಾಟೀಲ್** : ಮಕ್ಕಳನ್ನು ಓದಿಸುವುದಕ್ಕೆ ಅಲ್ಲಿ ಶಿಕ್ಷಕರು ಇಲ್ಲ. ನಾನು ಮೊರಾರ್ಜಿ ವಸತಿ ಶಾಲೆಗೆ ಹೋಗಿದ್ದೇನೆ ಮಾನ್ಯ ಸಚಿವರೇ ದಯವಿಟ್ಟು ನಿಮ್ಮ ಬಗ್ಗೆ ನನಗೆ ಅಗೌರವವಿಲ್ಲ. ನೀವು ಬುದ್ಧಿವಂತರು ಇದ್ದೀರಿ.

**ಪ್ರೊ: ಬಿ.ಕೆ. ಚಂದ್ರಶೇಖರ್** : ಆ ಮಾತು ತಾವು ಹೇಳಬಾರದು.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಅವರು ಮತ್ತು ನಾವು ಇಬ್ಬರು ಒಟ್ಟಿಗೆ ಸೇರಿಕೊಂಡು ಅಲ್ಲಿಗೆ ಹೋಗೋಣ ನಾನು ಹೇಳಿದ್ದರಲ್ಲಿ ಏನಾದರೂ ಸುಳ್ಳು ಇದ್ದರೆ ಇಲ್ಲಿ ಓಪನ್ ಆಗಿ ಕ್ಷಮೆಯನ್ನು ಕೇಳುತ್ತೇನೆ. ಅಲ್ಲಿ ಟೀಚರ್ಸ್ ಇದ್ದಾರೆಯೇ ಹೋಗಿ ನೋಡಿ, ಅಲ್ಲಿ ಇಲ್ಲ, ಇವತ್ತು ಇನ್ನೂ ಕ್ಲಾಸ್ ಚಾಲೂ ಆಗಿಲ್ಲ. ಸುಮ್ಮನೆ ಯಾರೋ ಪಿಯುಸಿ ಆದ ಮೇಸ್ಟ್ರನ್ನು ಅಲ್ಲಿಗೆ ಹಚ್ಚಿದ್ದೀರಿ; ಇಲ್ಲವೆನ್ನುವುದಿಲ್ಲ. ಈಗಾಗಲೇ ಅರ್ಧ ವರ್ಷ ಮುಗಿಯಿತು, ಇನ್ನೂ ಹಳ್ಳಿ ಮಕ್ಕಳು ಓದುವ ಹಾಗಿಲ್ಲ, ಹಳ್ಳಿಯ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾದರು, ಅವರು 35 ಮಾರ್ಕ್ಸ್‌ನ್ನು ತೆಗೆದುಕೊಂಡು ಏನೋ ಮಾಡಿ, ಎಲ್ಲಿಯೂ ಅವರಿಗೆ ನೌಕರಿನೂ ಸಿಗುವುದಿಲ್ಲ. ಮೊದಲು ನೀವು ಅಲ್ಲಿಗೆ 5 ಜನ ಮಾಸ್ತರನ್ನು ಹಾಕಿ, ನೀವು ಮಾಡಿದ್ದೂ ಚಲೋ ಆಯಿತು, ನಾನು ಇಲ್ಲವೆಂದು ಹೇಳುವುದಿಲ್ಲ. ಇನ್ನು ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಗ್ರಾಮೀಣಾಭಿವೃದ್ಧಿಯಲ್ಲಿ ನಮ್ಮ ಸಿಂಗನೂರಿನಲ್ಲಿ, ಅಲ್ಲಿಯ ತಾಲ್ಲೂಕು ಪಂಚಾಯಿತಿಯಲ್ಲಿ ಇಷ್ಟೊಂದು ಅವ್ಯವಹಾರಗಳು ನಡೆದಿದೆ ಅದನ್ನೆಲ್ಲವನ್ನು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಇವತ್ತಿನವರೆಗೂ ಆ ತಾಲ್ಲೂಕು ಪಂಚಾಯಿತಿಯ ಮೇಲೆ ಏನೂ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಅಲ್ಲಿ ಕೋಟಿಗಟ್ಟಲೆ ಅವ್ಯವಹಾರಗಳು ನಡೆದಿವೆ, ಅದರ ಬಗ್ಗೆ ಲೆಕ್ಕಗಳು ಇವೆ, ಬೇಕಾದರೆ ಮಾಹಿತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ, ಅವೆಲ್ಲವನ್ನೂ ಇಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲ. ಆ ಕಾರಣದಿಂದ ಕೋಟಿಗಟ್ಟಲೆ ಅವ್ಯವಹಾರವನ್ನು ಮಾಡಿದರೂ ಕೂಡ ಕಣ್ಮುಚ್ಚಿಕೊಂಡು ಕುಳಿತಿದ್ದಾರೆ. ಇವತ್ತು ಕೂಡ ಆ ಕಮಿಟಿಯ ಮೇಲೆ ಯಾವ ಕ್ರಮವನ್ನು ಕೈಗೊಂಡಿರುವುದಿಲ್ಲ. ಏಕೆಂದರೆ ಆ ಕಮಿಟಿಯು ಕಾಂಗ್ರೆಸ್ಸಿನದು. ಇದೇ ಇರುವುದು ಗುಟ್ಟು ಯಾರೇ ಬದಲಿ ಇದ್ದರೆ ಇಷ್ಟರ ವೇಳೆಗೆ ಎಲ್ಲರಿಗೂ ನೋಟಿಸ್ ಬರುತ್ತಿತ್ತು, ಎಲ್ಲವೂ ಆಗಿಹೋಗುತ್ತಿತ್ತು. ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗೋಣವೆಂದರೆ ತಾವು ಟೈಮ್ ಇಲ್ಲವೆಂದು ಹೇಳುತ್ತೀರಿ. ಬಹುಶಃ ನಾನು ಏನೂ ಮಾತನಾಡಲಿಲ್ಲ ಅಧ್ಯಕ್ಷರೆ.

**ಅಧ್ಯಕ್ಷರು** : ಮಾನ್ಯ ಪಾಟೀಲರೆ, ಮಾನ್ಯ ಸಂಗಣ್ಣನವರ ಹೆಸರನ್ನು ಕರೆದಾಗ ಅವರು ಇರಲಿಲ್ಲ. ಅವರು ನನ್ನ ಕೊಠಡಿಗೆ ಬಂದು ಹೇಳಿಬಿಟ್ಟು ಹೋಗಿದ್ದರು.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಮ್ಮ ಅಧ್ಯಕ್ಷರು ತೀರಿಹೋಗಿರುವ ಬಗ್ಗೆ ತಮಗೂ ಗೊತ್ತಿದೆ, ನಾವು ಅಲ್ಲಿ ಅದನ್ನೆಲ್ಲವನ್ನೂ ಮಾಡಿ ಬರುವುದಕ್ಕೆ ಲೇಟಾಗಿದೆ, ನಾವು ಎಂದೂ ಸದನಕ್ಕೆ ಲೇಟಾಗಿ ಬಂದಿಲ್ಲ; ನಮ್ಮ ನಾಯಕರು ಬಂದಿಲ್ಲ.

**ಅಧ್ಯಕ್ಷರು** : ಮಾನ್ಯ ಪಾಟೀಲರೆ, ತಮ್ಮನ್ನು ಅಲ್ಲ ಸ್ವಾಮಿ. ಸಂಗಣ್ಣನವರು ಲೇಟಾಗಿ ಬರುತ್ತೇನೆಂದು ಹೇಳಿ ಹೋದರು, ಆಮೇಲೆ ಬರಲಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್** : ಆ ಕಾರಣದಿಂದ.........

**ಶ್ರೀ ಕರಡಿ ಸಂಗಣ್ಣ ಅಮರಪ್ಪ** : ನಾನು ಬೈರೇಗೌಡರಿಗೆ ಗೌರವವನ್ನು ಸೂಚಿಸುವುದಕ್ಕೆ ಹೋಗಿದ್ದೆ. ಅದು ತಮಗೂ ಗೊತ್ತಿದೆ.

**ಅಧ್ಯಕ್ಷರು** : ಮಾನ್ಯ ಸಂಗಣ್ಣನವರೆ, ಅದು ನನಗೂ ಸಹ ಗೊತ್ತಿದೆ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ** : ಮಾನ್ಯ ಅಧ್ಯಕ್ಷರೆ, ತಾವು ನನಗೆ ಹೇಳಿಹೋದರೂ ಬರಲಿಲ್ಲವೆಂದು ಹೇಳುತ್ತಿದ್ದೀರಿ.

**ಅಧ್ಯಕ್ಷರು** : ಅದು ನಮಗೂ ಸಹ ಗೊತ್ತಿದೆ.

**ಶ್ರೀ ಎಸ್.ಎಸ್. ಪಾಟೀಲ್** : ನಾನು ಈಗ ಮಾತನಾಡುವುದನ್ನು ಮುಗಿಸುತ್ತೇನೆ, ಮಾನ್ಯ ಕರಡಿ ಸಂಗಣ್ಣನವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

**ಅಧ್ಯಕ್ಷರು** : ಮಾನ್ಯ ಪಾಟೀಲರೆ, ಇವತ್ತು ಅದು ಆಗುವುದಿಲ್ಲ. ಇನ್ನೊಂದು ಸಾರಿ ಅವಕಾಶವನ್ನು ಕೊಡುತ್ತೇನೆ. ಅವರಿಗೆ ಅರ್ಧಗಂಟೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಎಸ್.ಎಸ್. ಪಾಟೀಲ್** : ನಾನು ಕೊನೆಯದಾಗಿ ಬಸವಣ್ಣನವರ ವಚನವನ್ನು ಇವರಿಗೆ ಏತಕ್ಕಾಗಿ ಹೇಳುತ್ತೇನೆಂದರೆ, ಇಲ್ಲಿ ಏನಾಗಿದೆ ಎಂದರೆ,

"ಎತ್ತಿಗುತ್ತಮ ಲಿಂಗಮುದ್ರೆಯನು
ಒತ್ತಿದರೆ ಅದು ಬಸವನೆಂಬರು
ಕತ್ತೆಯನು ಹಿಡಿದುಕೊಂಡು
ಮುದ್ರೆಯನು ಒತ್ತುವಿರಾ? ಅದು
ಕತ್ತೆಯಲ್ಲದೆ ಬಸವನಪ್ಪುವುದೇ ಎಂದು" ಹೇಳಬೇಕಾಗುತ್ತದೆ.

ಈ ರಾಜ್ಯದ ಜನತೆಯ ಜನ. ನಾವು ಮಾಡಿದ ತಪ್ಪಿಗೆ ಇವರನ್ನು ಏನೋ ಎಂದು ಆರಿಸಿ ತಂದುಬಿಟ್ಟರು. ತಾವು ಏನು ಹೇಳಿದಿರೆಂದರೆ, ಇವರೆಲ್ಲರೂ ಕೂಡುವುದಿಲ್ಲ, ನಿಮ್ಮ ಕೂಡ ಕೂಡುವುದಿಲ್ಲ ಎಂದು ಹೌದು ನಾವು ಕೂಡುವುದಿಲ್ಲ, ಇಲ್ಲಿ ನಾವು ನಾಲ್ಕು ಮಂದಿ ಉಳಿಯುತ್ತೇವೆ, ಏಕೆಂದರೆ, ಇಲ್ಲಿ ನೋಡಿ ಹೇಳುತ್ತೇನೆ, ನಿಮ್ಮದು ಒಂದು ಸತ್ತ ಸರ್ಕಾರವಾಗಿದೆ, ರಾಷ್ಟ್ರದಲ್ಲಿ ಒಂದು ಸತ್ತ ಸರ್ಕಾರವಿದೆ ಅದನ್ನು ಹೊರುವುದಕ್ಕೆ ಎಷ್ಟು ಮಂದಿ ಬೇಕು? 4 ಜನರು ಬೇಕು, ಆ ಕಡೆ ನಾಲ್ಕು ಮಂದಿ ಕೂಡಿಕೊಂಡು ಕಡೆಗೆ ಹೊರುವುದಕ್ಕೆ ಒಗ್ಗಟ್ಟಾಗಿ ಬಂದು ನಿಮ್ಮನ್ನು ಆಗ ಹೊರುತ್ತೇವೆ. ಆಮೇಲೆ ಇವರಿಗೆ ಒಬ್ಬರು ಕಡಿಮೆ ಬೀಳುತ್ತಾರೆ, ಈ ಕೇಂದ್ರ ಸರ್ಕಾರವನ್ನು ಒಗೆಯಬೇಕಾದರೆ ಒಬ್ಬರು ಕಡಿಮೆ ಬೀಳುತ್ತಾರೆ, ಅದನ್ನು ಒಂದು ಮುಟ್ಟಿಸುತ್ತೇವೆ. ಒಬ್ಬರು ಏತಕ್ಕಾಗಿ ಬೇಕೆಂದರೆ ಅಗ್ಗಿಷ್ಟಿಕೆ ಹಿಡಿಯುವುದಕ್ಕೆ ಬೇಕಾಗುತ್ತದೆ. ಅಗ್ಗಿಷ್ಟಿಕೆ ಹಿಡಿಯುವುದಕ್ಕೆ ಏನನ್ನುತ್ತೀರಿ? ಹೆಣದ ಮುಂದೆ

ಹಿಡಿಯುತ್ತೀರಲ್ಲಾ? ಹೆಣ ಹೊರುವುದಕ್ಕ 4 ಮಂದಿ ಇದ್ದು, ಅದಕ್ಕೆ ಇನ್ನೊಂದನ್ನು ಹುಟ್ಟಿಸುತ್ತೇವೆ. ಮಂದಿ ಕೂಡಿ ಇವರನ್ನು ಒಗೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮುಂದೆ ಅಗ್ಗಿಷ್ಟಿಕೆ ಹಿಡಿಯುವುದಕ್ಕೆ ಬೇಕಲ್ಲಾ, ಈ ಸರ್ಕಾರವನ್ನು ಅಗ್ಗಿಷ್ಟಿಕೆ ಹಿಡಿದು ಒಯ್ಯುವುದು, ನಂತರ ನಿಮ್ಮ ಸರ್ಕಾರಕ್ಕೆ ಹಿಡಿಯುವುದು.

ಅಧ್ಯಕ್ಷರು : ಮಾನ್ಯ ಪಾಟೀಲರೆ, ತಾವು ಬಜೆಟ್ ಬಿಟ್ಟು ಬೇರೆ ಮಾತನಾಡುವುದಕ್ಕೆ ಹೋಗುತ್ತಿದ್ದೀರಿ.

ಗೊಂದಲ

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಪಾಟೀಲರು, ನೀವು ರಾಜಕೀಯವನ್ನು ಬಿಟ್ಟು ಹೆಣ ಹೊರುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಹೆಣ ಹೊರುವಂತಹ ಕೆಲಸವನ್ನಾದರೂ ಮಾಡಿ.

ಅಧ್ಯಕ್ಷರು : ಮಾನ್ಯ ಪಾಟೀಲರೆ, ತಾವು ಬಜೆಟ್ ಬಗ್ಗೆ ಬಿಟ್ಟು ಬೇರೆ ವಿಚಾರ ಮಾತನಾಡುತ್ತಿದ್ದೀರಿ.

ಗೊಂದಲ

ಶ್ರೀ ಎಸ್.ಎಸ್. ಪಾಟೀಲ್ : ಸತ್ತು ಹೋಗಿದೆ, ಸರ್ಕಾರ

ಅಧ್ಯಕ್ಷರು : ಸರ್ಕಾರ ಯಾವುದು ಎಂದು, ನಾವು ಪರ್ಸನಲ್ ಆಗಿ ಡಿಸ್ಕಸ್ ಮಾಡುತ್ತಿಲ್ಲ.

ಶ್ರೀ ಪಿ.ಟಿ. ಪರಮೇಶ್ವರ ನಾಯಕ್ : ರೈಲು ಹಳಿಯನ್ನು ತಪ್ಪುತ್ತಿದೆ. ರೈಲು ಹಳಿಯನ್ನು ತಪ್ಪಿದೆ.

ಶ್ರೀ ಎಸ್.ಎಸ್. ಪಾಟೀಲ್ : "ಕಾಗೆ ಎಂದಾದರೂ ಕೋಗಿಲೆ ಆಗಬಹುದೆ?" ಎಂದು ಶರಣರು ಕೇಳುತ್ತಾರೆ. "ಕಾಗೆ ಎಂದಾದರೂ ಕೋಗಿಲೆ ಆಗಬಹುದೆ?
ಹಂದೆಯ ಕೈಯಲ್ಲಿ ಚಂದ್ರಾಯುಧವನ್ನು
ಕೊಟ್ಟರೆ ಏನು ಉಪಯೋಗ?"
"ಹಂದೆಯ ಕೈಯಲ್ಲಿ ಚಂದ್ರಾಯುಧ"ವನ್ನು ಕೊಟ್ಟರೆ ಏನು ಉಪಯೋಗವಾಗುತ್ತದೆ? ಕಾಗೆ ಎಂದೂ ಕೋಗಿಲೆ ಆಗುವುದಕ್ಕೆ ಸಾಧ್ಯವಿಲ್ಲ. ಕತ್ತೆ ಯಾವಾಗಲೂ ಬಸವ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಏನೇ ಮುದ್ರೆಯನ್ನು ಒತ್ತಿದರೆ ಅದು ಕತ್ತೆಯಲ್ಲದೆ ಬಸವನಾಗುವುದೇ ಅದು ಕತ್ತೆಯೇ ಹೌದು.

ಶ್ರೀ ಶಿವಾನಂದ ಎಸ್ ಪಾಟೀಲ್ : ಮಾನ್ಯ ಪಾಟೀಲ್‌ರವರು ಕತ್ತೆ ಯಾವುದು, ಹಂದಿ ಯಾವುದು, ಕಾಗೆಯಾವುದು ಎಲ್ಲವನ್ನೂ ತಾವು ಹೇಳಿಬಿಡಿ.

ಶ್ರೀ ಎಸ್.ಎಸ್. ಪಾಟೀಲ್ : ಟೈಮ್ ಕೊಟ್ಟರೆ ಎಲ್ಲವನ್ನೂ ಹೇಳಿಬಿಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಹೀಗೆ ವರ್ಣನೆಯನ್ನು ಮಾಡಿದರೆ ಕತ್ತೆ ಮತ್ತು ಕಾಗೆ ಎಲ್ಲವೂ ಸೇರಿಕೊಂಡು ನಿಮ್ಮ ಮೇಲೆ ಮಾನನಷ್ಟ ಮೊಕದ್ದಮೆಯನ್ನು ಹಾಕುತ್ತವೆ. ನೀವು ಅವುಗಳಿಗೆ ಹೋಲಿಸುತ್ತೀರಲ್ಲಾ?

ಶ್ರೀ ಬಿ. ರಮಾನಾಥ ರೈ : ನಮಗೆ ಹೋಲಿಸಿ ಹೇಳುತ್ತಿದ್ದೀರಲ್ಲಾ?

ಶ್ರೀ ಎಸ್.ಎಸ್. ಪಾಟೀಲ್ : ಇದನ್ನು ಬಸವಣ್ಣನವರು ಹೇಳಿದ್ದಾರೆ, ಇದನ್ನು ನಾನು ಹೇಳಿರುವುದಲ್ಲಾ?

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಪಾಟೀಲರು ಯಾರಿಗೂ ಹೋಲಿಸಿಲ್ಲ. ಅವರು ಉದಾಹರಣೆಯನ್ನು ಹೇಳುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಇದನ್ನು ಶರಣರು ಹೇಳಿದ್ದಾರೆ, ಸರ್ವಜ್ಞ ಹೇಳುತ್ತಾನೆ.

"ಮೂರ್ಖಂಗೆ ಬುದ್ಧಿಯನು
ನೂರ್ಕಾಲ ಹೇಳಿದರೆ,
ಗೋರ್ಕಲ್ಲ ಮೇಲೆ ಮಳೆಗೈಯ್ದಂತೆ,
ಆ ಕಲ್ಲು ನೀರು ಕುಡಿಯುವುದೇ ಸರ್ವಜ್ಞ"

ಇದನ್ನು ನಾಲ್ಕೂವರೆ ವರ್ಷಗಳ ಕಾಲ ಹೇಳಿಕೊಂಡು ಬಂದರೂ ಇವರಿಗೆ ಬುದ್ಧಿ ಬರಲಿಲ್ಲ, ಗೋರ್ಕಲ್ಲ ಮೇಲೆ ನೀರು ಕರೆದ ಹಾಗೆ ಆಯಿತು ನಮ್ಮ ಬಾಳು. ಈಗಾಗಲೇ 3 ವರ್ಷ 9 ತಿಂಗಳಾಯಿತು, ಪ್ರತಿ ಸಲ ಹೇಳುತ್ತೇವೆ, ಬೈಯ್ಯುತ್ತೇವೆ, ಎಲ್ಲವನ್ನೂ ಹೇಳುತ್ತೇವೆ, ನಾವು ಏನು ಹೇಳಿದರೂ ಕೂಡ ಇವರು ಸುಧಾರಿಸಲಿಲ್ಲ. ಮತ್ತೆ ಅವರು ಅಲ್ಲಿಯೇ ಇದ್ದಾರೆ. "ಗೋರ್ಕಲ್ಲ ಮೇಲೆ ನೀರು ಎರೆದರೆ, ಕಲ್ಲು ನೀರು ಕುಡಿಯುವುದೆ"

**ಶ್ರೀ ಎಸ್.ಪಿ. ಮುದ್ದಹನುಮೇಗೌಡ** : ಬುದ್ಧಿವಂತರು ಬುದ್ದಿಯನ್ನು ಹೇಳಿದರೆ ಕೇಳಬಹುದಪ್ಪಾ?

**ಶ್ರೀ ಎಸ್. ನಂಜಯ್ಯನಮಠ್** : ಮಾನ್ಯ ಪಾಟೀಲರು ಹೇಳಿರುವುದೆಲ್ಲಾ ಸುಳ್ಳು ಇತ್ತು, ಅದಕ್ಕಾಗಿ ನಾವು ಅದನ್ನು ಕೇಳಲಿಲ್ಲ.

**ಅಧ್ಯಕ್ಷರು** : ನಿಮ್ಮ ಜಗಳವನ್ನು ನನಗ್ಯಾಕೆ ಒಪ್ಪಿಸುತ್ತೀರಿ?

**ಶ್ರೀ ಎಸ್. ನಂಜಯ್ಯನಮಠ್** : ಅವರು ಹೇಳಿದ್ದೆಲ್ಲಾ ಸುಳ್ಳು ಇದ್ದಿದ್ದರಿಂದ ನಾವು ಕೇಳುವುದಕ್ಕೆ ಆಗಲಿಲ್ಲ ಅಷ್ಟೆ.

**ಶ್ರೀ ಎಸ್. ಸುರೇಶ್ ಕುಮಾರ್** : ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಒಂದು ಮನವಿ, 8ನೇ ಕ್ಲಾಸ್‌ಗೆ ಕನ್ನಡ ಶಿಕ್ಷಕರ ಅಭಾವವಿದ್ದರೆ ದಯವಿಟ್ಟು ಎಸ್.ಎಸ್. ಪಾಟೀಲ್‌ರವರನ್ನು ಕಳುಹಿಸಿಕೊಡಿ.

**ಅಧ್ಯಕ್ಷರು** : ಮಾನ್ಯ ಪಾಟೀಲ್‌ರವರೆ, ತಾವು ಮುಗಿಸುತ್ತೀರಾ ಇಲ್ಲವೋ? ನಾನು ಚರ್ಚೆ ಮುಗಿಯಿತು ಎಂದು ಹೇಳಬೇಕಾಗುತ್ತದೆ. ತಾವು ದಯವಿಟ್ಟು ಮುಗಿಸಬೇಕು.

**ಶ್ರೀ ಎಸ್.ಎಸ್. ಪಾಟೀಲ್** : ಮುಗಿಸುತ್ತೇನೆ,

"ಬೆಕ್ಕು ಮನೆಯೊಳಗೆ ಲೇಸು,
ಮುಕ್ಕು ಕಲ್ಲಿಗೆ ಲೇಸು
ನಕ್ಕುನಗಿಸುವ ನುಡಿ ಲೇಸು,
ಊರಿಗೆ ವಕ್ಕಲಿಗ ಲೇಸು ಸರ್ವಜ್ಞ"

ಊರಿಗೆ ವಕ್ಕಲಿಗರು ಬೇಕು ಆದರೆ ಇಬ್ಬರೂ ಕೂಡಿಕೊಂಡು ಅವನನ್ನೇ ಹಾಳುಮಾಡುತ್ತಿದ್ದೀರಿ. ಸುಮ್ಮನೆ ಇಬ್ಬರೂ ಇಲ್ಲಿ ಗುದ್ದಾಡುವುದು, ಅವರ ಮೇಲೆ ಇವರು ಹಾಕುತ್ತಾರೆ, ಇವರ ಮೇಲೆ ಅವರು ಹಾಕುತ್ತಾರೆ,

**ಶ್ರೀ ಆರಗ ಜ್ಞಾನೇಂದ್ರ** : ಬಡ್ಡಿಯನ್ನು 9 ಪರ್ಸೆಂಟ್ ಇಳಿಸಿದರೂ ಮತ್ತೆ ಮತ್ತೆ, ರೈತರ ಬಗ್ಗೆ ನೀವು ಏನು ಮಾಡಿದ್ದೀರಿ? 18 ಸರ್ಪೆಂಟ್‌ನಿಂದ 9 ಪರ್ಸೆಂಟ್‌ಗೆ ಮೊನ್ನೆ ಇಳಿಸಿದ್ದಾರೆ. ಮಾನ್ಯ ಪಾಟೀಲರು ನಮ್ಮ ಪ್ರಧಾನಮಂತ್ರಿಯವರಿಗೆ ಅಭಿನಂದನೆಯನ್ನು ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದರೆ, ಏನು ಪಾಟೀಲರೇ ಇದು? ನಾವು ರೈತರ ಪರವಾಗಿ ಚಿಂತನೆಯನ್ನು ಮಾಡುವವರಿಗೆ ಹೀಗೆ ಮಾಡಿದರೆ ಹೇಗೆ?

**ಅಧ್ಯಕ್ಷರು** : ಉಪಮಾನ ಉಪಮೇಯಗಳು ಇಲ್ಲಿ ಬೇಕಾಗಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್** : ಈ ಜನ ಎಲ್ಲಿಯೂ ಸಾಲ ಹುಟ್ಟುವುದಿಲ್ಲ, ಸಾಲವನ್ನು ತರುವುದಿಲ್ಲವೆಂದು ಹೇಳಿದ್ದಾರೆ? ಇಲ್ಲಿ ಸರ್ವಜ್ಞ ಹೇಳುತ್ತಾನೆ.

"ಸಾಲವನ್ನು ತರುವಾಗ ಹಾಲ ಬೋನುಂಡಂತೆ"

ಇವರು ಸಾಲವನ್ನು ಹುಟ್ಟಿಸಿದ್ದು, ಹುಟ್ಟಿಸಿದ್ದು

ನಮ್ಮ ಸಗೀರ್ ಅಹಮದ್‌ರವರು ಹೇಳುತ್ತಾರೆ, ಇವತ್ತು ಯಾವುದೇ ಪಕ್ಷವಿರಲಿ, ನೀವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಆದರೆ ನೀವು ಶ್ರೀ ಅನಂತ್‌ಕುಮಾರ್‌ರವರನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಹುಡ್ಕೋವನ್ನು ತೆಗೆದಿಟ್ಟಿದ್ದರಿಂದ ನಿಮಗೆ ಶುರು ಆಗಿದೆ. ಇಲ್ಲದಿದ್ದರೇ ಎಲ್ಲಾ ಬಂದ್ ಆಗುತ್ತಿತ್ತು. ಇವರಿಗೂ ಒಂದು ಮನೆ ಆಗುತ್ತಿರಲಿಲ್ಲ. ಇವರಿಗ್ಯಾರಿಗೂ ಹೇಳುವುದಕ್ಕೆ ಬರಲಿಲ್ಲ. ನಾನೇನು ಮಾಡಲಿ, ಅದಕ್ಕೆ ನಾನೇ ಹೇಳಬೇಕಾಗುತ್ತದೆ. ಈ ರಾಜ್ಯದ ಜನ ಅನಂತಕುಮಾರ್‌ರವನ್ನು ನೆನಪಿಸಿಕೊಳ್ಳಬೇಕಾಗುತ್ತದೆ.

**ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)** : ನಾವು ಸರ್ಕಾರಿ ಕಾರ್ಯಕ್ರಮಕ್ಕೆ ಹುಡ್ಕೋ ಸಂಸ್ಥೆಯಿಂದ ಸಾಲವನ್ನು ತೆಗೆದುಕೊಂಡಿಲ್ಲ ಸ್ವಾಮಿ.

**ಶ್ರೀ ಎಸ್.ಎಸ್. ಪಾಟೀಲ್** : ಅಯ್ಯೋ, ಶಿವಾಯ ನಮಃ ನಮಗೆ ಗೊತ್ತಿಲ್ಲವೇ ಎಲ್ಲೆಲ್ಲಿ ಏನೇನು ತಂದಿರಿ ಎಂದು.

**ಶ್ರೀ ಸಿ.ಆರ್. ಸಗೀರ್ ಅಹಮದ್** : ನಾನು ಶಿವನನ್ನು ಸಾಕ್ಷಿಯಾಗಿ ಇಟ್ಟುಕೊಂಡು ಹೇಳುತ್ತಿದ್ದೇನೆ. ನಾವು ಸಾಲವನ್ನು ತೆಗೆದುಕೊಂಡಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್** : ನಿಮ್ಮ ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೋರೇಷನ್.....

**ಶ್ರೀ ಸಿ.ಆರ್. ಸಗೀರ್ ಅಹಮದ್** : ಇಲ್ಲಾ ತೆಗೆದುಕೊಂಡಿಲ್ಲ, ಅಯ್ಯೋ ನೇರವಾಗಿ ಸರ್ಕಾರ ಸ್ವತಃ ಅದಕ್ಕೆ ಬೇಕಾದಂತಹ.....

**ಅಧ್ಯಕ್ಷರು** : ಮಾನ್ಯ ಪಾಟೀಲರೆ, ತಮ್ಮ ಭಾಷಣ ಮುಗಿಯಿತು ಎಂದು ಅನೌನ್ಸ್ ಮಾಡಬೇಕಾಗುತ್ತದೆ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ತಾವು ಬಹಳ ಟೈಮ್ ಕೊಡಲಿಲ್ಲ, ಇಷ್ಟಾದರೂ ಕೊಟ್ಟಿದ್ದೀರಿ, ಮಾನ್ಯ ಸಂಗಣ್ಣನವರು ಮಾತನಾಡುವುದಕ್ಕೆ 10 ನಿಮಿಷ ಕಾಲಾವಕಾಶವನ್ನು ಕೊಡಿ.

**ಅಧ್ಯಕ್ಷರು** : ಇವತ್ತು ಆಗುವುದಿಲ್ಲ.

## 12.10 ಪಿಎಂ

**ಶ್ರೀ ಎಸ್.ಎಸ್. ಪಾಟೀಲ್** : ನನಗೆ ಇನ್ನೊಂದು ವಿಷಯ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಿ.

**ಅಧ್ಯಕ್ಷರು** : ಇವತ್ತು ಆಗುವುದಿಲ್ಲ, ಇನ್ನೊಂದು ದಿವಸ ಕೊಡುತ್ತೇನೆ, ಇಲ್ಲಿಗೆ ಚರ್ಚೆ ಮುಗಿಯಿತು ನೀವು ಒಂದು ಗಂಟೆ ಹತ್ತು ನಿಮಿಷ ಮಾತನಾಡಿದ್ದೀರಿ, ದಯವಿಟ್ಟು ಕುಳಿತುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳೂ, ತಾವು ಉತ್ತರ ಹೇಳಿ.

**ಶ್ರೀ ಎಸ್.ಎಸ್. ಪಾಟೀಲ್** : ಒಂದೇ ಒಂದು ವಿಷಯದ ಬಗ್ಗೆ ಹೇಳುತ್ತೇನೆ, "ಅಕ್ರಮ ಲಾಟರಿಗೆ ಸಚಿವರ ಕುಮ್ಮಕ್ಕು"..........

**ಅಧ್ಯಕ್ಷರು** : ಪೇಪರ್‌ನಲ್ಲಿ ಬರೆದಿದ್ದನ್ನೆಲ್ಲಾ ಇಲ್ಲಿ ಏಕೆ ತಂದು ಓದುತ್ತೀರಿ?

**ಶ್ರೀ ಎಸ್.ಎಸ್. ಪಾಟೀಲ್** : ಹಾಗಾದರೆ ಪೇಪರ್‌ನಲ್ಲಿ ಸುಳ್ಳು ಬರೆಯುತ್ತಾರೆಯೇ? ಅವರು ಇದನ್ನು ಸುಳ್ಳು ಎಂದು ತಿರಸ್ಕಾರ ಮಾಡಲಿ, ಇದರ ಬಗ್ಗೆ ಡಿಟೇಲ್ ಆಗಿ ಪತ್ರಿಕೆಯಲ್ಲಿ ಬರೆದಿದ್ದಾರೆ.

**ಅಧ್ಯಕ್ಷರು** : ಈಗ ಚರ್ಚೆ ಮುಗಿಯಿತು, ಇನ್ನು ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಈಗ ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ. ಮಾನ್ಯ ಪಾಟೀಲರೆ, ತಾವು ದೊಡ್ಡವರು ಇದ್ದೀರಿ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಮುಖ್ಯಮಂತ್ರಿಗಳು ತಕ್ಷಣದಲ್ಲಿ ರೈತರಿಗೆ ಉಪಕಾರ ಮಾಡಿ ಆ ಇನ್‌ಷ್ಯೂರೆನ್ಸ್ ಅನ್ನು ತುಂಬುತ್ತಾರೆ ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**†ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ಈ ಚರ್ಚೆಯಲ್ಲಿ ಭಾಗವಹಿಸಿದಂತಹ ಎಲ್ಲಾ ಸದಸ್ಯರುಗಳಿಗೂ ಕೂಡ ನಾನು ಆಭಾರಿಯಾಗಿದ್ದೇನೆ. ಹಲವಾರು ಇಲಾಖೆಗಳ ಕೊರತೆಗಳನ್ನು ಎತ್ತಿತೋರಿಸಲಿಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನಗಳನ್ನು ಮಾಡಿದ್ದಾರೆ; ಟೀಕೆಗಳನ್ನು ಮಾಡಿದ್ದಾರೆ, ಸಲಹೆಗಳನ್ನು ಕೊಟ್ಟಿದ್ದಾರೆ. ಸೀಮಿತವಾಗಿ ಆಗಿರಬಹುದಾದಂತಹ ಒಳ್ಳೆಯ ಕೆಲಸಗಳನ್ನು ಅಭಿನಂದಿಸಿದವರೂ ಇದ್ದಾರೆ. ರಾಜ್ಯದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಈ ಎಲ್ಲಾ ಅಭಿಪ್ರಾಯಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ ಮುಂದೆ ಹೋಗಬೇಕಾಗುತ್ತದೆ ಎನ್ನತಕ್ಕಂತಹ ಕಲ್ಪನೆ ನಮ್ಮದಾಗಿದೆ. ಶ್ರೀ ಬಿ. ಸೋಮಶೇಖರ್, ಶ್ರೀ ಅರಗ ಜ್ಞಾನೇಂದ್ರ, ಶ್ರೀ ಎ. ರಾಮದಾಸ್, ಶ್ರೀ ಜಯಪ್ರಕಾಶ್ ಹೆಗಡೆ, ಶ್ರೀ ಮುದ್ದಹನುಮೇಗೌಡ, ಶ್ರೀ ಸಿ. ಗುರುಸ್ವಾಮಿ, ಶ್ರೀ ಸಭಾಪತಿ, ಶ್ರೀ ವೈ.ಕೆ. ರಾಮಯ್ಯ, ಶ್ರೀ ಚೆನ್ನಿಗಪ್ಪ, ಶ್ರೀ ಶಿವಾನಂದ ಎಸ್. ಪಾಟೀಲ್, ಶ್ರೀ ಶ್ರೀನಿವಾಸಗೌಡ, ಶ್ರೀ ಎ.ಎಸ್. ಗುರುಸ್ವಾಮಿ ಇವತ್ತು ಶ್ರೀ ಎಸ್.ಎಸ್. ಪಾಟೀಲ್ ಮತ್ತು ಶ್ರೀ ವಿ. ಪಾಪಣ್ಣ ಇವರೆಲ್ಲರೂ ಕೂಡ ಚರ್ಚೆಯಲ್ಲಿ ಭಾಗವಹಿಸಿ ಸಿಂಹಪಾಲನ್ನು ಪಡೆದು, ನಮ್ಮ ರಾಜ್ಯದ ಹಣಕಾಸಿನ ವಿಚಾರಗಳ ಬಗ್ಗೆ ಹೆಚ್ಚು ಇನ್‌ಸೈಟ್ ವ್ಯೂ – ಅನಾಲಿಸಿಸ್ ನಡೆಯಲಿಕ್ಕೆ ಕಾಲಾವಕಾಶದ ಇತಿಮಿತಿಗಳಿಂದ ಸಾಧ್ಯವಾಗಲಿಲ್ಲವೆಂದು ನಾನು ವಿಶ್ಲೇಷಣೆ ಮಾಡುತ್ತೇನೆ. ಅಖಿಲ ಭಾರತ ಪ್ರಗತಿಪರ ಜನತಾದಳದ ನಾಯಕರಾದ ಶ್ರೀ ಬಿ. ಸೋಮಶೇಖರ್‌ರವರು ಹಿಂದೆ ಸರ್ಕಾರದಲ್ಲಿದ್ದವರು, ಸರ್ಕಾರ ನಡೆಯಬಹುದಾದಂತಹ ವಿಚಾರಗಳೆಲ್ಲವನ್ನೂ ಸೂಕ್ಷ್ಮವಾಗಿ ಅವರು ಗಮನಿಸಿರುತ್ತಾರೆ. ಆ ಕಾರಣ ಅವರು ಮಾಡಿದಂತಹ ಹಲವಾರು ಟೀಕೆಗಳನ್ನು ನಾನು ಸ್ವೀಕರಿಸುತ್ತೇನೆ. ಕೆಲವೊಂದು ಸಾರಿ ಅಕ್ರಾಸ್ ದಿ ಬೋರ್ಡ್ ಕಾಮೆಂಟ್ಸ್ ಅವರು ಮಾಡಲಿಕ್ಕೆ ಪ್ರಯತ್ನ ಪಟ್ಟಿದ್ದರೂ ಕೂಡ ಎಲ್ಲೆಲ್ಲಿ ವಸ್ತುನಿಷ್ಠವಾದಂತಹ ಟೀಕೆಯನ್ನು ಮಾಡಿದ್ದಾರೆ, ಅದನ್ನು ನಾನು ಗಮನಿಸಿದ್ದೇನೆ. ಆಡಳಿತ ಆಯೋಗ ನೀಡಿದ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಲಿಲ್ಲ, ನೆಪಮಾತ್ರಕ್ಕೆ ಆಯೋಗ ರಚನೆ ಮಾಡಿದ್ದಾರೆ, ಅದರ ಶಿಫಾರಸ್ಸುಗಳನ್ನು ಬದಿಗೊತ್ತಲಾಗಿದೆ, ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟು ಹೋಗಿದೆ, ಸರ್ಕಾರ ದಿವಾಳಿಯಾಗಿದೆ, ಅಭಿವೃದ್ಧಿ ಕಾರ್ಯಗಳಿಗೆ ಬಜೆಟ್‌ನಲ್ಲಿ ನಿಗದಿಪಡಿಸಿದ್ದ ಹಣವನ್ನು ಒದಗಿಸಲು ಕಷ್ಟವಾಗಿದ್ದರೂ ಕೂಡ ಹಣವನ್ನು ಒದಗಿಸಲಾಗಿದೆಯೆಂದು ಪ್ರಚಾರ ಪಡೆದುಕೊಳ್ಳುತ್ತಿದ್ದಾರೆ. ರಾಜ್ಯದ

ಬಡ್ಡಿ ಹೊಣೆ ಶೇಕಡ 22 ರಿಂದ 25 ರಷ್ಟು ಇದೆ. ಸಂಪನ್ಮೂಲ ಸಂಗ್ರಹಿಸಲು 213 ವಸ್ತುಗಳ ಮೇಲೆ ಶೇಕಡ ಒಂದರಷ್ಟು ಹೆಚ್ಚುವರಿ ತೆರಿಗೆ ವಿಧಿಸಿ ಸುಗ್ರೀವಾಜ್ಞೆಯನ್ನು ಹೊರಡಿಸಿದ್ದಾರೆ, ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದು, ಪೂರಕವಾದುದಾಗಿದೆ; ಹೀಗೆ ಭ್ರಷ್ಟರಿಗೆ ಉತ್ತೇಜನವನ್ನು ಕೊಡುತ್ತಿದ್ದಾರೆ, ಲೋಕಾಯುಕ್ತ ಶಿಫಾರಸ್ಸು ಮಾಡಿದ್ದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಗಂಗಾ ಕಲ್ಯಾಣ ಯೋಜನೆ, ಕುಡಿಯುವ ನೀರಿನ ಯೋಜನೆ, 9ನೇ ಪಂಚವಾರ್ಷಿಕ ಯೋಜನೆಗೆ ಹಣವನ್ನು ಬಿಡುಗಡೆ ಮಾಡಿಲ್ಲವೆಂದು ಹೇಳಿ ಸಾರಾಸಗಟು ಟೀಕೆಗಳನ್ನು ಮಾಡಿದ್ದಾರೆ, ಹಾಗೆಯೇ ಶ್ರೀ ಅರಗ ಜ್ಞಾನೇಂದ್ರರವರು ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆ, ಆರ್ಥಿಕ ನೆರವಿನ ಕೊರತೆ, ಕೇಂದ್ರದ ಪುರಸ್ಕೃತ ಯೋಜನೆಗಳು ಸಂಪೂರ್ಣವಾಗಿ ನಿಷ್ಪ್ರಯೋಜಕವಾಗಿದೆ, ಕೇಂದ್ರ ಸರ್ಕಾರ ನೀಡುವ ಆರ್ಥಿಕ ನೆರವಿನ ಸಂಪೂರ್ಣ ಸದುಪಯೋಗವನ್ನು ಪಡೆಯಲಿಲ್ಲ. ಕೇಂದ್ರ ಸರ್ಕಾರ ಕೊಟ್ಟಿದ್ದನ್ನು ಸಂಪೂರ್ಣವಾಗಿ ಬಳಸಲಿಲ್ಲ, ಸಂಸದ್ ಭವನದ ಆವರಣದ ಗಾಂಧಿ ಪ್ರತಿಮೆ ಎದುರು ಕಾಂಗ್ರೆಸ್ ಸಂಸದರು ಧರಣಿ ಮಾಡಿದರು, ಇಲ್ಲಿ ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆ ಎದುರು ಇವರೆಲ್ಲಾ ಧರಣಿ ಮಾಡಲಿ, ಇದು ಅಪ್ರೋಪ್ರಿಯೇಷನ್ ಬಿಲ್ ಮೇಲೆ ನಡೆದಿರುವಂತಹ ಚರ್ಚೆಯ ಮೂಲ ಅಂಶ. ಕೇಂದ್ರ ಸರ್ಕಾರವು ಹಣವನ್ನು ಕೊಟ್ಟಿದ್ದರೂ ಸಹ ರಸ್ತೆ ಮಾಡಲಿಲ್ಲ, ಆಹಾರಧಾನ್ಯ ಹಂಚಿಕೆಯಲ್ಲಿ ತಾರತಮ್ಯ ಮಾಡಿದ್ದಾರೆ. ಆರ್.ಡಿ.ಪಿ.ಎ.ಆರ್. ಮತ್ತು ಮಲ್ನಾಡು ಅಭಿವೃದ್ಧಿ ಮಂಡಳಿಯವರು ಗ್ರಾಮಪಂಚಾಯಿತಿಗಳ ಮೂಲ ಸೌಲಭ್ಯಕ್ಕೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ್ದ 110 ಕೋಟಿ ರೂಪಾಯಗಳ ಹಣವನ್ನು ಬಿಡುಗಡೆ ಮಾಡಿಲ್ಲವೆಂದು ಹೇಳಿದ್ದಾರೆ. ಶ್ರೀ ಬಚ್ಚೇಗೌಡರವರು ನಗರಪ್ರದೇಶಗಳ ಅಭಿವೃದ್ಧಿಗೆ ಕೊಟ್ಟ ಒತ್ತನ್ನು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಕೊಟ್ಟಿಲ್ಲ. ಶ್ರೀ ಗುರುಸ್ವಾಮಿಯವರು ವಿದ್ಯುತ್ ಕೇಂದ್ರಗಳಿಗೆ ಅನುಮತಿ ದೊರೆತು ಸ್ಥಳ ಗುರುತಿಸಿದ್ದರೂ ಯೋಜನೆಗಳು ಟೇಕ್ ಆಫ್ ಆಗಿಲ್ಲ; ಕೂಡಲೇ ಹಣವನ್ನು ಒದಗಿಸಬೇಕು. ಪೊಲೀಸ್ ತರಬೇತಿ ಅಕಾಡೆಮಿಯಲ್ಲಿ ಅಪರಾಧಶಾಸ್ತ್ರ ಡಿಪ್ಲೊಮಾ ಕೋರ್ಸ್ ಆರಂಭ ಮಾಡಬೇಕು. ಬೆಂಗಳೂರಿನಿಂದ ಮೈಸೂರಿಗೆ ಜೋಡಿ ರೈಲು ಬಿಡಿ, ಕೃಷ್ಣ ನಿಗಮದಂತೆ ಕಾವೇರಿ ನಿಗಮವನ್ನು ಸ್ಥಾಪಿಸಬೇಕು. ಶ್ರೀ ರಾಮದಾಸ್ ಅವರು, 4 ವರ್ಷಗಳ ಬಜೆಟನ್ನು ಗಮನಿಸಿದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪ್ರತಿವರ್ಷ ಹಣವನ್ನು ಕಡಿಮೆ ಮಾಡುತ್ತಾ ಬಂದಿದ್ದಾರೆ. ವಿಶ್ವಬ್ಯಾಂಕ್‌ನವರು ಸಾಲ ಕೊಟ್ಟಿರುವ ಬಗ್ಗೆ ವರದಿಯನ್ನು ಸದನದ ಮುಂದಿಡಿ, ಶ್ವೇತ ಪತ್ರ ಹೊರಡಿಸಿ ಎಂದಿದ್ದಾರೆ. ಶ್ರೀ ಚೆನ್ನಿಗಪ್ಪ ಅವರು ಕೃಷಿಗೆ ಬಜೆಟ್‌ನಲ್ಲಿ ಬಹಳ ಕಡಿಮೆ ಹಣ ಇಟ್ಟಿದ್ದಾರೆ, ಉತ್ತಮವಾದಂಥ ಬೀಜಗಳನ್ನು ರೈತರಿಗೆ ಸರಬರಾಜು ಮಾಡುತ್ತಿಲ್ಲ, ರೈತಸೇವಾ ಕೇಂದ್ರಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಶ್ರೀ ಜಯಪ್ರಕಾಶ್ ಹೆಗ್ಡೆಯವರು ಕಬ್ಬು ಬೆಳೆಗಾರರ ಬಾಕಿ ಬಗ್ಗೆ ಹೇಳಿದ್ದಾರೆ. ಮಾನ್ಯ ವೈ.ಕೆ. ರಾಮಯ್ಯನವರು ತಮ್ಮ ಭಾಷಣದ ಬಹುತೇಕ ಸಮಯವನ್ನು ಉಪಯೋಗಿಸಿಕೊಂಡು ಸರ್ಕಾರದ ಆರ್ಥಿಕ ಚೌಕಟ್ಟಿನ ಬಗ್ಗೆ ವಿಶೇಷವಾದ ವಿಶ್ಲೇಷಣೆಗಳನ್ನು ಮಾಡಲಿಕ್ಕೆ ಪ್ರಯತ್ನ ಮಾಡಿದರು. ಹೇಗೆ ವಾಸ್ತವವಾಗಿ ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ಪರಿಣಾಮಕಾರಿಯಾಗಿ ರಾಜ್ಯ ಸರ್ಕಾರ ಕೆಲಸ ಮಾಡಿದೆ ಎನ್ನುವುದಕ್ಕೆ ಅವರು ಪೂರಕವಾಗಿ ಕೆಲವು ಅಂಕಿಅಂಶಗಳನ್ನು ಕೊಟ್ಟರು. ಹಾಗೆಯೇ ವೆಚ್ಚದಲ್ಲಿ ನಿಯಂತ್ರಣ ಸಾಧಿಸಿ ತೆರಿಗೆ ವಿಧಿಸುವುದರಲ್ಲಿ ಹೇಗೆ ಸಂಯಮವನ್ನು ತೋರಿದೆ ಎನ್ನುವುದರ ಬಗ್ಗೆ ಕೂಡ ಅವರು ಕೆಲವು ಮಾತುಗಳನ್ನು ಹೇಳಿದರು. ಮಾನೀಯ

ನಿಗಮವನ್ನು ಸ್ಥಾಪಿಸಿ ಈ ಸೆಕೆಂಡ್ಸ್ ವ್ಯವಹಾರಕ್ಕೆ ಕಡಿವಾಣವನ್ನು ಹಾಕಿರತಕ್ಕಂಥಾದ್ದರ ಬಗ್ಗೆ ಸದನದ ಗಮನವನ್ನು ಅವರು ಸೆಳೆದರು. ಹಿಂದಿನ ಸರ್ಕಾರಗಳ ಆರ್ಥಿಕ ನಿರ್ವಹಣೆ ಸರಿಯಾಗಿ ಇಲ್ಲವಾಗಿದ್ದರಿಂದ ಈ ಸರ್ಕಾರ ತೊಂದರೆಗೆ ಸಿಲುಕಿದೆ ಎನ್ನತಕ್ಕಂಥಾದ್ದನ್ನು ಅವರು ಕೊಂಚ ಒತ್ತು ಕೊಟ್ಟು ಹೇಳಿದರು ಮತ್ತು ಸತತವಾಗಿ ನಮ್ಮ ರಾಜ್ಯವನ್ನು ಕಾಡಿದಂಥ ಬರದ ಬಗ್ಗೆ ಅವರು ತಮ್ಮ ಅನಿಸಿಕೆಗಳನ್ನು ನಮ್ಮ ಜತೆಯಲ್ಲಿ ಹಂಚಿಕೊಂಡರು. ಶ್ರೀ ರಾಮಯ್ಯನವರು ಎಲ್ಲಿ ಬಿಟ್ಟರು, ಅಲ್ಲಿಂದ ನಾನು ಪ್ರಾರಂಭ ಮಾಡುತ್ತೇನೆ. ನಮ್ಮ ಈ ಸಾಲಿನ ಬಜೆಟ್‌ನ್ನು ವಿಮರ್ಶೆ ಮಾಡತಕ್ಕಂತ ಕಾಲದಲ್ಲಿ ಕೆಲವು ಮಾನ್ಯ ಸದಸ್ಯರುಗಳು ವಲಯವಾರು ಹಂಚಿಕೆ ಬಗ್ಗೆ ಆ ಅಂಕಿಅಂಶಗಳ ನೋಟವನ್ನು ತಮ್ಮ ಮುಂದೆ ಇಟ್ಟುಕೊಂಡಿದ್ದರೋ ಹೇಗೆ ಎಂದು ಗೊತ್ತಾಗಲಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ 1999–2000ನೇ ಸಾಲಿನಲ್ಲಿ 2947 ಕೋಟಿ ರೂಪಾಯಿಗಳ ಔಟಲೇಯನ್ನು ಇಟ್ಟು ಕೊಂಡಿದ್ದೆವು. ಅದು 2003–04ನೇ ಸಾಲಿಗೆ 3903 ಕೋಟಿ ರೂಪಾಯಿಗಳಿಗೆ ಏರಿತು. ಶೇಕಡಾ 7.5 ರಷ್ಟು ಹೆಚ್ಚಳವನ್ನು ಅದು ಪ್ರತಿಬಿಂಬಿಸುತ್ತಿದೆ. ಗ್ರಾಮೀಣಾಭಿವೃದ್ಧಿಗೆ 1999ನೇ ಇಸವಿಯಲ್ಲಿ 445 ಕೋಟಿ ರೂಪಾಯಿ ಇತ್ತು. ಅದು ಈಗ 604 ಕೋಟಿ ರೂಪಾಯಿಗಳಿಗೆ ಏರಿದೆ. ಅಂದರೆ ಇದು ಶೇಕಡಾ 8ರಷ್ಟು ಹೆಚ್ಚಳವನ್ನು ಪಡೆಯಿತು. ಆರೋಗ್ಯದ ಬಗ್ಗೆ, 1999ನೇ ಇಸವಿಯಲ್ಲಿ 976 ಕೋಟಿ ರೂಪಾಯಿ ಇತ್ತು. ಅದು ಈ ವರ್ಷ 1095 ಕೋಟಿ ರೂಪಾಯಿಗಳಿಗೆ ಹೋಗಿದೆ. ಸಮಾಜ ಕಲ್ಯಾಣಕ್ಕೆ 1999–2000ರ ಔಟ್‌ಲೇಯಲ್ಲಿ 473 ಕೋಟಿ ರೂಪಾಯಿ ಇತ್ತು. ಅದು ಈಗ 636 ಕೋಟಿ ರೂಪಾಯಿಗಳಿಗೆ ಹೋಯಿತು. ಇದು ಶೇಕಡಾ 8ರಷ್ಟು ಹೆಚ್ಚಳವಾಗಿದೆ. ವಸತಿ 1999–2000 ರಲ್ಲಿ 186 ಕೋಟಿ ರೂಪಾಯಿ ಇತ್ತು. ಅದು ಈ ವರ್ಷ 324 ಕೋಟಿ ರೂಪಾಯಿಗಳಿಗೆ ಹೋಗಿದೆ. ಇದು ಶೇಕಡಾ 16ರಷ್ಟು ಜಾಸ್ತಿಯಾಗಿರತಕ್ಕಂಥಾದ್ದು. 1999–2000ರಲ್ಲಿ ರಸ್ತೆಗಳಿಗೆ 478 ಕೋಟಿ ರೂಪಾಯಿಗಳು ಇದ್ದದ್ದು ಈ ವರ್ಷ 1176 ಕೋಟಿ ರೂಪಾಯಿ ಆಯಿತು. ಅಂದರೆ ಶೇಕಡಾ 26ರಷ್ಟು ಜಾಸ್ತಿಯಾಯಿತು. ನಾನು ಮಾನ್ಯ ರಾಮದಾಸ್ ಅವರನ್ನು ಕೇಳುತ್ತೇನೆ, ಎಲ್ಲಿ ಕಡಿಮೆಯಾಯಿತು? ನಿಮಗೆ ಅಂಕಿಅಂಶಗಳನ್ನು ಒದಗಿಸಿದವರು ಯಾರು? ಒದಗಿಸಿದ ಮೂಲಗಳನ್ನು ನೀವು ಶೋಧನೆ ಮಾಡಿ. ನಾನೂ ಶೋಧನೆ ಮಾಡುತ್ತೇನೆ. ಆದರೆ ನನ್ನ ಇವೆಲ್ಲಾ ಮೂಲಗಳಿಗೂ ಕೂಡ ಬಜೆಟ್ ಬ್ಯಾಕ್‌ಅಪ್ ಇದೆ. ಡಾಕ್ಯುಮೆಂಟ್ಸ್‌ನ್ನು ನಾನು ತಮಗೆ ತೋರಿಸಿಕೊಡುತ್ತೇನೆ. ಆದ್ದರಿಂದ ಒಟ್ಟಾರೆ ಸಾರಾಸಗಟು ಕೊಡುತ್ತಾ ಇರತಕ್ಕಂಥಾದ್ದು ಕಡಿಮೆಯಾಗಿದೆ ಎಂದು ಹೇಳಿ ಕಪ್ಪು ಮಸಿ ಬಳಿಯತಕ್ಕಂಥ ಪ್ರಯತ್ನಗಳು ಏನಿವೆ, ಆ ಪ್ರಯತ್ನದಲ್ಲಿ ಸತ್ಯ ಇಲ್ಲ ಎನ್ನತಕ್ಕಂಥಾದ್ದನ್ನು ಮಾತ್ರ ಹೇಳುತ್ತಾ, ಒಂದು ಲಿಮಿಟೆಡ್ ಪಾಯಿಂಟ್ ಆಗಿ ನಾವು ಮಾಡಿಕೊಳ್ಳಬಹುದಾಗಿದೆ. These are all social sectors. The indication, ಒಂದು ಸರ್ಕಾರದ ಥ್ರಸ್ಟ್ ಏರಿಯಾಗಳು ಏನಿವೆ, ಅದಕ್ಕೆ ನಾವು ಕೊಟ್ಟಿರತಕ್ಕಂಥ ವಿಶೇಷವಾದ ಒತ್ತು ಇದಾಗಿದೆ ಎಂದು ಹೇಳಿ ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮೂಲಕ ಸದನಕ್ಕೆ ಹೇಳಿಕೊಳ್ಳಲಿಕ್ಕೆ ಬಯಸುತ್ತೇನೆ. ನಮ್ಮ ಕರ್ನಾಟಕ ಸರ್ಕಾರದ ಆರ್ಥಿಕ ದಿವಾಳಿ ಆಗಿಹೋಯಿತು ಹಾಗೆ ಎಂದು ಹೇಳಿ ಮಾನ್ಯ ಸೋಮಶೇಖರ್‌ರವರು ಆಪಾದನೆ ಮಾಡಿದರು. ಫಿಸ್ಕಲ್ ಡಿಫಿಸಿಟ್‌ನ್ನು ನೀವು 3ಕ್ಕೆ ಇಳಿಸುತ್ತೇವೆ ಎಂದು 2000ನೇ ವರ್ಷದ ಬಜೆಟ್‌ನಲ್ಲಿ ಹೇಳಿದಿರಿ. ಆದರೆ ಅದು ಸಾಧ್ಯವಾಗಿಲ್ಲ ಎಂದು ಅವರು ಹೇಳಿದರು. 2000ನೇ ಇಸವಿಯಿಂದ ಬಜೆಟ್‌ಗಳ ವಿಹಂಗಮ ನೋಟವನ್ನು ನಾವು ತೆಗೆದುಕೊಳ್ಳಬಹುದಾದರೆ ಹೇಗೆ ವರ್ಷೇ ವರ್ಷೇ ಈ ಫಿಸ್ಕಲ್ ಡಿಫಿಸಿಟ್‌ನ್ನು

ನಿಯಂತ್ರಣಗೊಳಿಸಲು ನಾವು ಪ್ರಯತ್ನಗಳನ್ನು ಮುಂದುವರೆಸಿದ್ದೇವೆ ಎಂಬುದರ ಬಗ್ಗೆ ನಮ್ಮ ಕೆಲವು ಅಂಕಿಅಂಶಗಳನ್ನು ಮಾನ್ಯ ಸದನಕ್ಕೆ ನಾವು ಕೊಡಬಹುದಾದರೆ, 2001–02ರಲ್ಲಿ ನಮ್ಮ ಫಿಸ್ಕಲ್ ಡಿಫಿಸಿಟ್ 5.36 ಪರ್ಸೆಂಟ್ ಇತ್ತು. 2002–03ರಲ್ಲಿ ಫಿಸ್ಕಲ್ ಡಿಫಿಸಿಟ್‌ನ್ನು 4.89 ಪರ್ಸೆಂಟ್‌ಗೆ ಇಳಿಸಿದೆವು. ಇದು 2003–04ರಲ್ಲಿ 4.62ಕ್ಕೆ ನಿಲ್ಲುತ್ತದೆ ಎಂದು ಒಂದು ಅಂದಾಜನ್ನು ಮಾಡಲಾಗಿದೆ. ಪರ್ಸೆಂಟೇಜ್ ಪಾಯಿಂಟ್ ಅಲ್ಲ, ಒಂದು ಪಾಯಿಂಟ್ ಅತ್ತಕಡೆ ಇತ್ತಕಡೆ ಹೆಚ್ಚು ಕಡಿಮೆ ಆಗಬಹುದು. 2000ನೇ ಇಸವಿಯಲ್ಲಿ ನಾನು ಬಜೆಟ್ ಭಾಷಣ ಮಾಡಿದಂಥ ಕಾಲದಲ್ಲಿ ನಮ್ಮ ಟಾರ್ಗೆಟ್ ಏನಿತ್ತು ಎಂದರೆ ಮೀಡಿಯಂ ಟರ್ಮ್ ಫಿಸ್ಕಲ್ ಪ್ಲಾನ್‌ನಲ್ಲಿ ಏನು ನಮೂದಿಸಿದ್ದೇವೆ, ಆ ನಮೂದನೆಯಲ್ಲಿ ಸ್ಪಷ್ಟವಾದಂಥ ಒಂದು ಅಭಿಪ್ರಾಯವನ್ನು ನಾವು ರೂಪಿಸಿದ್ದೇವೆ. ಈ ಸ್ಪಷ್ಟವಾದಂಥ ಅಭಿಪ್ರಾಯ ರೂಪಣೆ ಏನೆಂದರೆ 2005–06ರ ಹೊತ್ತಿಗೆ ಇದನ್ನು 3 ಪರ್ಸೆಂಟ್‌ಗೆ ನಾವು ಇಳಿಸುತ್ತೇವೆ ಎನ್ನುವಂಥಾದ್ದು. 5 ರಿಂದ 5.36 ಆಗಿ, ನಂತರ 4.89 ರಿಂದ 4.62 ಕ್ಕೆ ನಾವು ಇಳಿಸಿದೆವು. ಕೆಳಮುಖವಾಗಿ ಅದು ಬರತಕ್ಕಂಥಾದ್ದು ಇದು ಒಂದು ಟ್ರೆಂಡ್ ಅಲ್ಲವೇನು? ಇದು ಒಂದು ಟ್ರೆಂಡ್‌ನ್ನು ಡಿಪಿಕ್ಟ್ ಮಾಡುವುದಿಲ್ಲವೇನು? ಇದು ಟ್ರೆಂಡ್‌ನ್ನು ನಮೂದು ಮಾಡುತ್ತದೆಯೇ ಇಲ್ಲವೇ ಎನ್ನತಕ್ಕಂಥಾದ್ದನ್ನು ಮಾನ್ಯ ಸದಸ್ಯರ ಅವಗಾಹನೆಗೆ ತಂದು ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಸಂಪನ್ಮೂಲ ಕಡಿಮೆಯಾಗಿ ಹೋಯಿತು, ಸಂಪನ್ಮೂಲಗಳಲ್ಲಿ ಗಮನಾರ್ಹವಾದಂಥ ಪ್ರಗತಿಯನ್ನು ನೀವು ಮಾಡಲಿಲ್ಲ ಎಂದು ಹೇಳಿದರು. ರೆವಿನ್ಯೂ ರಿಸಿಟ್ಸ್‌ನಲ್ಲಿ, ಈ ನಾಲ್ಕು ವರ್ಷಗಳಲ್ಲಿ ಒಂದು ದಿವಸ ಮಾತ್ರ ನಾವು ಓವರ್‌ಡ್ರಾಫ್ಟ್ ತೆಗೆದುಕೊಂಡಿದ್ದೇವೆ. ಇದು ಒಂದು ದಿವಸ ಎಂದು ನಾನೇನೂ ಹೇಳಬೇಕಾಗಿರಲಿಲ್ಲ. ಅವರೂ ಕೂಡ ರಾಜ್ಯಸರ್ಕಾರ ನಮ್ಮ ಸ್ಲೇಟ್‌ನ್ನು ಎಷ್ಟು ಕ್ಲೀನ್ ಆಗಿ ಇಡಬೇಕು ಎಂದು ಹೇಳಿ ನಾವು ಮುಂದುವರೆದಿದ್ದೇವೆ ಎಂದು ಹೇಳಿದರೆ ಮೂರು ವರ್ಷ ಬರಬಂದರೂ ಕೂಡ ನಮ್ಮ ಓವರ್‌ಡ್ರಾಫ್ಟ್ ಪೊಸಿಶನ್ ಬಹಳಮಟ್ಟಿಗೆ ನಿಯಂತ್ರಣದಲ್ಲಿದೆ ಎನ್ನತಕ್ಕಂಥಾದ್ದಕ್ಕೆ ನಾನು ಈ ಒಂದು ನಮೂದನ್ನು ಮಾಡುತ್ತಿದ್ದೇನೆ. ರೆವಿನ್ಯೂ ರಿಸೀಟ್ಸ್, 1999–2000ದಲ್ಲಿ 12900 ಕೋಟಿ ರೂಪಾಯಿ ಇತ್ತು. 2002–03ರಲ್ಲಿ ಅದು 17 ಸಾವಿರ ಕೋಟಿ ರೂಪಾಯಿಗೆ ಹೋಯಿತು. ಇಳಿಮುಖವಾಯಿತೋ ಅಥವಾ ಉರ್ಧ್ವಮುಖವಾಯಿತೋ? ತಲೆಕೆಳಗಾಗಿ ನೋಡಿದರೆ ಅದು ಇಳಿಮುಖವಾಗುತ್ತದೆ ಅಷ್ಟೇ. ಇಲ್ಲದಿದ್ದರೆ ಅದು ಊರ್ಧ್ವಮುಖವಾಗಿಯೇ ಹೋಗುತ್ತಿರುತ್ತದೆ. ಅದೂ 2 ವರ್ಷಗಳ ಬರದಲ್ಲಿ ಇಂತಹ ಒಂದು ಪ್ರಯತ್ನವನ್ನು ನಾವು ಮುಂದುವರಿಸಿರಬೇಕಾದರೆ, ನಾವು ನಮ್ಮ ಸಂಪನ್ಮೂಲಗಳನ್ನು ಹೀಗೆ ಕ್ರೋಢೀಕರಿಸದೇ ಹೋದರೆ ನಮ್ಮ ಅಭಿವೃದ್ಧಿಯ ಮಾತು ಇವೆಲ್ಲವೂ ನಿರರ್ಥಕವಾಗಿರುತ್ತದೆ; ಶೂನ್ಯವಾಗಿರುತ್ತದೆ. ಆದ್ದರಿಂದಲೇ ನಾವು ಇದರ ಬಗ್ಗೆ ವಿಶೇಷವಾದ ಗಮನವನ್ನು ಹರಿಸಿದ್ದೇವೆ. "12th Conference of State Finance Secretaries" ಬಗ್ಗೆ ರಿಜರ್ವ್ ಬ್ಯಾಂಕ್‌ನವರು ಕರ್ನಾಟಕಕ್ಕೆ ವಿಶೇಷವಾದ ಒಂದು ಆಮಂತ್ರಣವನ್ನು ಕೊಟ್ಟಿದ್ದಾರೆ. ಅದು ಏನು ಎಂದು ಹೇಳಿದರೆ ತಾರೀಖು 2ನೇ ಆಗಸ್ಟ್ 2003ರಂದು ಈ ಮೀಟಿಂಗ್ ನಡೆಯುತ್ತಿದೆ.

> ``We would request you to make a brief presentation on
> your experience of cash management in the State
> wherein you may like to cover the techniques
> that you have deployed successfully in Karnataka."

ಈ ಕ್ಯಾಶ್ ಮ್ಯಾನೇಜ್‌ಮೆಂಟ್, ಮಾನ್ಯ ಬೆಲ್ಲದ್‌ರವರಿಗೆ ಅರ್ಥವಾಗುತ್ತದೆ ಅಲ್ಲವೆ? ಯಾರಿಂದ ನೀವು ಸರ್ಟಿಫಿಕೇಟ್ ಪಡೆಯಬೇಕು? ತಿಳಿಯದೇ ಟೀಕೆ ಮಾಡತಕ್ಕಂಥವರೋ ಅಥವಾ ತಿಳಿದೂ ಟೀಕೆ ಮಾಡತಕ್ಕಂಥವರೋ ಅಥವಾ ರಿಜರ್ವ್‌ಬ್ಯಾಂಕ್‌ನಿಂದಲೋ? ಮೇಲೆ ಕುಳಿತಿರುವಂತಹರು, ಎಲ್ಲವನ್ನೂ ಓವರ್‌ಸೀ ಮಾಡತಕ್ಕಂಥವರು, ಎಲ್ಲವನ್ನೂ ಮಾನಿಟರ್ ಮಾಡತಕ್ಕಂಥಾವರು, ರಿಜರ್ವ್‌ಬ್ಯಾಂಕ್‌ನವರು ರಿಸರ್ವ್‌ಬ್ಯಾಂಕ್ ಯಾರ ದಾಕ್ಷಿಣ್ಯದಲ್ಲೂ ಇಲ್ಲ; ಯಾರ ಮರ್ಜಿಯಲ್ಲೂ ಇಲ್ಲ. ಅದಕ್ಕೆ ಏನಾದರೂ ಅಷ್ಟೋ ಇಷ್ಟೋ ಮರ್ಜಿ ಇದ್ದರೆ ಕೇಂದ್ರ ಸರ್ಕಾರದ ಮರ್ಜಿ ಇರಬೇಕು. ರಿಜರ್ವ್ ಬ್ಯಾಂಕ್‌ನ ಮೇಲೆ ನಮ್ಮ ಮರ್ಜಿ ಏನೂ ಇಲ್ಲ, ಅಂದಮೇಲೆ ಅವರು ಏಕೆ ಕರ್ನಾಟಕಕ್ಕೆ ವಿಶೇಷವಾದ ಆಮಂತ್ರವನ್ನು ಕೊಡುತ್ತಾರೆ? ನಮಗೆ ನೀವು ಹೇಳಿ ಕೊಡಿ ಎಂದು ತಮಿಳುನಾಡಿನವರನ್ನು ಕರೆಯಬಹುದಾಗಿತ್ತು. ಆಂಧ್ರ ಪ್ರದೇಶದವರನ್ನು ಕರೆಯಬಹುದಾಗಿತ್ತು, ಅವರೂ ನೋಡುತ್ತಾರೆ.

**ಮಾನ್ಯ ಸದಸ್ಯರು** : ರಿಜರ್ವ್ ಬ್ಯಾಂಕ್‌ನ ಪತ್ರವನ್ನು ಇನ್ನೊಂದು ಸಲ ಓದಿದರೆ ಒಳ್ಳೆಯದು.

**Sri S.M. Krishna :** "We would request you to make a brief presentation on your experience in cash management in the State. wherein you may like to cover the techniques that you have deployed successfully in Karnataka.

ಬಹಳ ನೀರು ಕುಡಿಯಬೇಕಾಗುತ್ತದೆ. ಯಾವ ನೀರು ಕುಡಿಯುತ್ತೇವೆಯೋ ಗೊತ್ತಿಲ್ಲ, ಅಂತೂ ಬಹಳ ನೀರು ಕುಡಿಯಬೇಕಾಗುತ್ತದೆ. ನೀರು ಕುಡಿಯದೇ, ಸಾಧನೆ ಮಾಡದೇ ಇಂತಹ ಕಾಂಪ್ಲಿಮೆಂಟ್ಸ್ ರಿಜರ್ವ್ ಬ್ಯಾಂಕ್‌ನಿಂದ ಬರಲಿಕ್ಕೆ ಸಾಧ್ಯವಾಗುವುದಿಲ್ಲ ಎಂಬ ಒಂದು ನಿವೇದನೆಯನ್ನು ನಾನು ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸೋಮಶೇಖರ್‌ರವರು ತಮ್ಮ ಭಾಷಣದಲ್ಲಿ ಹೇಳಿದರು, ನಮ್ಮ ರಾಜ್ಯದ ಮೇಲೆ ಸಾಲದ ಹೊರೆ ಇದೆ ಎಂದು. ನಾನು ಯೋಚನೆ ಮಾಡುತ್ತಿದ್ದೆ, 1994–1999ರಲ್ಲಿ ಇವರೇನೂ ಸಾಲ ಮಾಡಲಿಲ್ಲವೇನೋ ಹಾಗೆ ಎಂದು ಹೇಳಿ. 1994–95ರಲ್ಲಿ ನೀವು ಅಧಿಕಾರಕ್ಕೆ ಬಂದರಲ್ಲಾ ಆಗ 7100 ಕೋಟಿ ರೂಪಾಯಿ ಸಾಲ ಇತ್ತು. ನೀವು ಅಧಿಕಾರವನ್ನು ಬಿಟ್ಟು ಕೊಟ್ಟಾಗ ಅದು 15 ಸಾವಿರ ಕೋಟಿ ರೂಪಾಯಿಗೆ ಹೋಯಿತು. ನೀವು ಏಕೆ ಸಾಲ ಮಾಡಿದ್ದಿರಿ? ಅದು ಸಾಲ ಹೆಚ್ಚಳ ಹೌದೋ ಅಲ್ಲವೋ? ಅದೂ 7 ಸಾವಿರ ಕೋಟಿ ರೂ.ಗಳಿಂದ 15 ಸಾವಿರ ಕೋಟಿರೂ.ಗಳವರೆ ಸಾಲ ಏನು ಹಂಪನಗೌಡರೇ, ಸಾಲ ಮಾಡಿದ್ದೇವೆಂದೋ ಇಲ್ಲ ಅಂತಲೋ?

**ಶ್ರೀ ಹಂಪನಗೌಡ ಬಾದರ್ಲಿ** : ಮಾನ್ಯ ಅಧ್ಯಕ್ಷರೆ, ಕಳೆದ 4–5 ವರ್ಷಗಳಲ್ಲಿ ನಮ್ಮ ಪಕ್ಷ ಅಧಿಕಾರದಲ್ಲಿದ್ದಾಗ 8 ಸಾವಿರ ಕೋಟಿ ರೂಪಾಯಿ ಸಾಲ ಮಾಡಿದೆ. ಈ 5 ವರ್ಷಗಳಲ್ಲಿ ತಾವು ಎಷ್ಟು ಸಾಲ ಮಾಡಿದ್ದೀರಿ ಎನ್ನುವುದನ್ನೂ ಸ್ವಲ್ಪ ಹೇಳಿದರೆ ಒಳ್ಳೆಯದು.

**ಶ್ರೀ ಎಸ್.ಎಂ. ಕೃಷ್ಣ** : ಅದನ್ನೇ ಹೇಳುತ್ತೇನೆ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೇ.....

**ಶ್ರೀ ಎಸ್.ಎಂ. ಕೃಷ್ಣ** : ಇಲ್ಲ, ಇಲ್ಲ. ಯಾರಿಗೆ ಮಾತನಾಡಲು ಅವಕಾಶ ಸಿಗಲಿಲ್ಲವೋ ಅಂತಹವರಿಗೆ ನಾನು ಪ್ರಚೋದನೆ ಮಾಡಿ ಮೇಲಕ್ಕೆ ಎಳಿಸುತ್ತಿದ್ದೇನೆ. ಮಾನ್ಯ ಹಂಪನಗೌಡರು ಮಾತನಾಡಿರಲಿಲ್ಲ; ಆದ್ದರಿಂದ ನಾನು ಮಾನ್ಯ ಹಂಪನಗೌಡರ ಹೆಸರನ್ನು ತೆಗೆದುಕೊಂಡೆ.

**ಶ್ರೀ ಎಸ್.ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರು ನನಗೆ ಅವಕಾಶ ಕೊಡಲಿಲ್ಲ. ಅವಕಾಶ ಕೊಟ್ಟಿದ್ದರೆ ನಾನು ಎಲ್ಲವನ್ನೂ ಹೇಳುತ್ತಿದ್ದೆ, ಆಗ ತಾವು ಉತ್ತರ ಕೊಡಲು ಕಷ್ಟವಾಗುತ್ತಿತ್ತು.

**ಶ್ರೀ ಎಸ್.ಎಂ. ಕೃಷ್ಣ** : ಅದಕ್ಕೆ ನೀವು ಹೇಳುವುದನ್ನೆಲ್ಲಾ ಕೇಳಲಿಕ್ಕೆ ಬೇರೆ ಒಂದು ಅಧಿವೇಶನ ಮಾಡೋಣ.

**ಶ್ರೀ ಎಸ್.ಎಸ್. ಪಾಟೀಲ್** : 1997–98ರಲ್ಲಿ 10 ಸಾವಿರ ಕೋಟಿ ರೂಪಾಯಿ ಇದ್ದದ್ದು, 2001ಕ್ಕೆ ನೀವು 115 ಪಟ್ಟು ಹೆಚ್ಚು ಮಾಡಿದ್ದೀರಿ ಸಿಎಜಿ ವರದಿಯಲ್ಲಿ ಇದೆ. ಪೂರ್ಣ ಈ ವರದಿ ಹೇಳಿದರೆ ಕಷ್ಟವಾಗುತ್ತದೆ.

**ಶ್ರೀ ಎಸ್.ಎಂ. ಕೃಷ್ಣ** : ನಿಜ.

**ಶ್ರೀ ಎಸ್.ಎಸ್. ಪಾಟೀಲ್** : ತಾವು ಆ ರಿಜರ್ವ್ ಬ್ಯಾಂಕಿನದು ಒಂದನ್ನು ಹಿಡಿದುಕೊಂಡು ಬಿಟ್ಟಿರಿ. ಆ ವರದಿಯನ್ನು ಹೇಳಿದರೆ ಬಹಳ ಕಷ್ಟ ಅನ್ನಿಸುತ್ತದೆ.

**ಶ್ರೀ ಎಸ್.ಎಂ. ಕೃಷ್ಣ** : ನಿಜ; ಬಹಳ ಕಷ್ಟ ಇದೆ ಅನ್ನಿಸುತ್ತದೆ. ಈಗ ಪಾಟೀಲರೇ, ತಾವು ಏನು ಹೇಳಿದಿರಿ?

**ಶ್ರೀ ಎಸ್.ಎಸ್. ಪಾಟೀಲ್** : ಇಲ್ಲಿ ಏನು ಹೇಳುತ್ತಾರ ಅಂದರೆ 2001–02ರಲ್ಲಿ 22,432 ಕೋಟಿ ರೂ.ಗಳಿಗೆ ಏರಿ ಶೇಕಡ 115ರಷ್ಟು ಹೆಚ್ಚಾಗಿದೆ. ಇದು ಸಿಎಜಿ ವರದಿಯಲ್ಲಿದೆ.

**ಶ್ರೀ ಎಸ್.ಎಂ. ಕೃಷ್ಣ** : ಈಗ ನಾನು ತಮಗೆ ಒಂದು ಫಿಗರ್ ಕೊಡುತ್ತೇನೆ. 7 ಸಾವಿರ ಕೋಟಿ ರೂ. ಸಾಲ ಏನು ಇತ್ತು ಅದನ್ನು 15 ಸಾವಿರ ಕೋಟಿ ರೂಪಾಯಿಗಳಿಗೆ ತೆಗೆದುಕೊಂಡು ಹೋದಿರಿ. ಎಷ್ಟು ಪಟ್ಟು ಆಯಿತು? ಆದ್ದರಿಂದ ಇವರು ಏನು ಭಾಷಣ ಮಾಡಿದರು.....

**ಶ್ರೀ ಎಸ್.ಎಸ್. ಪಾಟೀಲ್** : 10,446 ಕೋಟಿ ರೂ. ಇದ್ದ ಸಾರ್ವಜನಿಕ ಋಣವು 2001–02ರಲ್ಲಿ ನಿಮ್ಮ ಕಾಲದಲ್ಲಿ 22 ಸಾವಿರ ಕೋಟಿ ರೂ.ಗಳಿಗೆ ಏರಿ ಶೇಕಡ 115ರಷ್ಟು ಹೆಚ್ಚಾಗಿದೆ.

**ಶ್ರೀ ಎಸ್.ಎಂ. ಕೃಷ್ಣ** : ಅದನ್ನು ನಾನು ಇಲ್ಲ ಎನ್ನುವುದಿಲ್ಲ.

**ಶ್ರೀ ಎಸ್.ಎಸ್. ಪಾಟೀಲ್** : ಅಂದಮೇಲೆ ನಾವೂ ಒಪ್ಪಿಕೊಳ್ಳುತ್ತೇವೆ.

**ಶ್ರೀ ಎಸ್.ಎಂ. ಕೃಷ್ಣ** : ನೀವು ಒಪ್ಪಿಕೊಳ್ಳುತ್ತೀರಿ ತಾನೇ?

**ಶ್ರೀ ಎಸ್.ಎಸ್. ಪಾಟೀಲ್** : ನೀವು ಹೇಳಿದಷ್ಟು ಅಲ್ಲ. ಸರ್ಕಾರವನ್ನು ನಡೆಸಲು ಸಾಲ ಆಗಲೇಬೇಕಾಗುತ್ತದೆ. ಸಾಲ ಇಲ್ಲದೆ ನಡೆಯುವುದಿಲ್ಲ. ಪರಿಸ್ಥಿತಿ ಆ ರೀತಿ ಆಗಿದೆ.

**ಶ್ರೀ ಎಸ್.ಎಂ. ಕೃಷ್ಣ** : ಆದ್ದರಿಂದ ಮಾನ್ಯ ಸೋಮಶೇಖರ್‌ರವರ ಭಾಷಣಕ್ಕೆ ಅದು ಒಂದು ಇಂಪಾರ್ಟೆಂಟ್ ತಿದ್ದುಪಡಿ. ಏನು ಅಂದರೆ ಸಾಲ ಮಾಡಬೇಕಾಗುತ್ತದೆ. ಸಾಲ ಮಾಡದೇ ರಾಜ್ಯವನ್ನು ನಡೆಸುವುದಕ್ಕೆ ಆಗುವುದಿಲ್ಲ, ಅಭಿವೃದ್ಧಿ ಮಾಡುವುದಕ್ಕೆ ಆಗುವುದಿಲ್ಲ ಎಂದು, ಅದಕ್ಕಾಗಿ ನಾನು ತಮಗೆ ಅಭಾರಿಯಾಗಿದ್ದೇನೆ. ಹಾಗಾಗಿ ನೀವು 100 ಪರ್ಸೆಂಟ್ ಹೇಳಿದಿರಿ. ಈಗ ನಾವು 2002–03ರ ಆರ್ಥಿಕ ವರ್ಷಾಂತ್ಯಕ್ಕೆ 26,507 ಕೋಟಿ ರೂಪಾಯಿಗಳ ಸಾಲವನ್ನು ಮಾಡಿದ್ದೇವೆ. ಇವತ್ತು ನಾನು ಏನು ಡಿಸಿಶನ್ ತೆಗೆದುಕೊಂಡಿದ್ದೇನೆ, ಇನ್ನು ನಮಗೆ ಸಾಲ ಬೇಕಾಗಿಲ್ಲ ಎಂದು. ಹಾಗೆಂದರೆ ಸಾಲ ಕೊಡುವವರು ಇಲ್ಲ ಎಂದು ಅಲ್ಲ. ವರ್ಲ್ಡ್ ಬ್ಯಾಂಕ್‌ನವರು ನಮ್ಮ ಬಾಗಿಲು ತಟ್ಟುತ್ತಿದ್ದಾರೆ; ನಮ್ಮ ಕದ ಬಡಿಯುತ್ತಿದ್ದಾರೆ.

ಗೊಂದಲ

**ಅಧ್ಯಕ್ಷರು** : ಮಧ್ಯೆ ಮಧ್ಯೆ ಮಾತನಾಡಬೇಡಿ ಪಾಟೀಲರೇ.

**ಶ್ರೀ ಎಸ್.ಎಂ. ಕೃಷ್ಣ** : ಮೀಡಿಯಂ ಟರ್ಮ್ ಫಿಸ್ಕಲ್ ಪ್ಲಾನ್‌ನಲ್ಲಿ ನಾವು ಏನನ್ನು ನಮೂದಿಸಿದ್ದೇವೆ, ಅದರಲ್ಲಿ ನಾವು ಎಷ್ಟು ಸಾಲ ಮಾಡಿದ್ದೇವೆ, ಆ ಸಾಲವನ್ನು ಭರಿಸಲಿಕ್ಕೆ ನಮ್ಮಲ್ಲಿ ಶಕ್ತಿ ಇದೆಯೇ, ಮಿಕ್ಕ ರಾಜ್ಯಗಳ ಕಂಪ್ಯಾರಿಜನ್ ಅನ್ನು, ಹಿಂದಿನ ನನ್ನ ಭಾಷಣವನ್ನು ಕೊಟ್ಟಿದ್ದೇನೆ. ಮತ್ತು ನಮ್ಮ ಆಂತರಿಕ ಉತ್ಪನ್ನಗಳ ಮೌಲ್ಯಗಳನ್ನೂ ಕೂಡ ನಾನು ತಮಗೆ ಕೊಟ್ಟಿದ್ದೇನೆ. ಯಾವುದೇ ಆರ್ಥಿಕತೆ ವಿಶೇಷವಾಗಿ ರಾಜ್ಯಗಳಲ್ಲಿನ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಸಾಲಗಳ ಎತ್ತುವಳಿ ಸಾಮಾನ್ಯವಾದ ಒಂದು ಹಣಕಾಸಿನ ಪದ್ಧತಿಯಾಗಿದೆ. ಕೇಂದ್ರ ಸರ್ಕಾರದವರು ಸಾಲ ಮಾಡುತ್ತಾರೆ. ಅಕ್ಕಪಕ್ಕದ ರಾಜ್ಯಗಳವರು ಸಾಲ ಮಾಡುತ್ತಾರೆ. ಕರ್ನಾಟಕದವರಾದ ನಾವೂ ಸಾಲ ಮಾಡಿದ್ದೇವೆ. ಆದ್ದರಿಂದ ಯಾರೇ ವಿರೋಧ ಪಕ್ಷದಲ್ಲಿ ಕುಳಿತಿರಲಿ; ನಾವು ಒಂದು ವಿಚಾರವನ್ನು ಗಮನಿಸಿರಬೇಕು, ಆ ಗಮನ ಏನು ಇರಬೇಕು ಎಂದು ಹೇಳಿದರೆ ಸಾಲವನ್ನು ಮಾಡದೇ ನಾವು ಅಭಿವೃದ್ಧಿಯನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದು ಒಂದು ಮುಖ್ಯವಾದ ಸಾಧನೆ. ಅದನ್ನು ರಾಜ್ಯ ಸರ್ಕಾರಗಳು ಆಗಿಂದಾಗ್ಗೆ ಡಿಪೆಂಡಿಂಗ್ ಅಪ್ ಅನ್ ಈ ಮೀಡಿಯಂ ಟರ್ಮ್ ಫಿಸ್ಕಲ್ ಪ್ಲಾನ್‌ನಲ್ಲಿ ಏನು ಒಂದು ಇತಿಮಿತಿ ಹಾಕಿದ್ದೇವೆ ಆ ಇತಿಮಿತಿಯಲ್ಲಿ ಆಗಬೇಕು ಎಂದು ಹೇಳಿ. ಮಾನ್ಯ ಸೋಮಶೇಖರ್‌ರವರು 22 ಪರ್ಸೆಂಟ್ ಇಂಟರೆಸ್ಟ್ ಕೊಡುತ್ತಿದ್ದೇವೆ ಎಂದು ಹೇಳಿದರು. ಇವತ್ತು ನಾವು ಕೊಡುತ್ತಿರುವ ಇಂಟರೆಸ್ಟ್ ಎಷ್ಟು ಎಂದು ಹೇಳಿದರೆ ನಮ್ಮ ಸಾಲದ ಸರ್ವೀಸಿಂಗ್‌ಗೆ ಈ ವರ್ಷ 2.5 ಪರ್ಸೆಂಟ್ ಕೊಡುತ್ತಿದ್ದೇವೆ. ಬಹುಶಃ ಆ ಕಾಮಾ ಮಿಸ್ಸಿಂಗ್ ಅಷ್ಟೆ. ಅವರು 22 ಪರ್ಸೆಂಟ್ ಎಂದು ಹೇಳಿದರು..

## 12.40 ಪಿಎಂ

1997–98ರಲ್ಲಿ ರಾಜಸ್ವ ಕೊರತೆ ಇತ್ತು. ಆ ಕೊರತೆ ಮುಂದುವರೆಯಿತು. ಇವತ್ತು ಆ ಕೊರತೆಯನ್ನು ನಿಯಂತ್ರಣಗೊಳಿಸುವುದಕ್ಕೆ ಪ್ರಯತ್ನಪಟ್ಟಿದ್ದೇವೆ. ಯೋಜನೇತರ ವೆಚ್ಚದ ಪ್ರಮಾಣ ಜಾಸ್ತಿಯಾಗಿದೆಯೆಂದು ಮಾನ್ಯ ಸೋಮಶೇಖರ್‌ರವರು ಅಭಿಪ್ರಾಯಪಟ್ಟರು. ಆ ಪ್ರಮಾಣವನ್ನು ನಿರ್ಬಂಧಿಸುವಲ್ಲಿ ನಾವು ಸಾಕಷ್ಟು ಯಶಸ್ಸನ್ನು ಪಡೆದಿದ್ದೇವೆ. ಅದನ್ನು ಈ ವರ್ಷ 12.8 ಕ್ಕೆ ನಿಲ್ಲಿಸುವುದಕ್ಕೆ ಪ್ರಯತ್ನಗಳನ್ನು ಮುಂದುವರಿಸಿದ್ದೇವೆ. ಪ್ರಸಕ್ತ ಆಯವ್ಯಯದಲ್ಲಿ ಯೋಜನೇತರ ವೆಚ್ಚದ ಅವಕಾಶವನ್ನು ಕಳೆದ ವರ್ಷವಿದ್ದ 22 ಸಾವಿರ ಕೋಟಿ ರೂ.ಗಳ ಬದಲು ಪ್ರಸಕ್ತ ವರ್ಷದಲ್ಲಿ 20,400 ಕೋಟಿ ರೂಪಾಯಿಗಳಿಗೆ ಮಿತಿಗೊಳಿಸಿದ್ದೇವೆ. ಇದು 1,600 ಕೋಟಿ ರೂಪಾಯಿಗಳ ಇಳಿಕೆಯನ್ನು ತೋರಿಸುತ್ತದೆ. ಆ ಸಾಧನೆಯತ್ತ ನಾವು ಮುಂದೆ ಹೋಗಿದ್ದೇವೆ. ಕರ್ನಾಟಕದ ಒಟ್ಟು ಬಾಕಿ ಇರತಕ್ಕ ಸಾಲಗಳ ಚಿತ್ರಣ 26 ಸಾವಿರ ಕೋಟಿ ರೂ.ಗಳು ಎಂದು ಹೇಳಿದ್ದೇವೆ. ನಮ್ಮ ಉದ್ದೇಶ exegenciesಗೆ ಡಿಪೆಂಡ್ ಆಗಿ ಅದನ್ನು ಅಲ್ಲಿಗೆ ನಾವು ನಿಯಮಿತ ಮಾಡಿದ್ದೇವೆ. ನಮಗೆ ಇನ್ನೂ ಹೆಚ್ಚು ಸಾಲ ಮಾಡತಕ್ಕ ಶಕ್ತಿ ಇದ್ದರೂ ಕೂಡ ಆ ಸಾಲ ನಮ್ಮ fiscal prudence ಕಾರಣ ನಾವು ಅದನ್ನು ಅಲ್ಲಿಗೇ peg ಮಾಡಬೇಕೆನ್ನತಕ್ಕಂಥಾದ್ದು ನಮ್ಮ ಉದ್ದೇಶ. ರಾಜ್ಯಗಳು ಸಾಲ ಎತ್ತತಕ್ಕಂಥ ಕಾಲದಲ್ಲಿ ಯೋಜನಾ ಆಯೋಗ ಮತ್ತು ಭಾರತ ಸರ್ಕಾರ ಇವರಿಬ್ಬರ ಅನುಮತಿ ಇಲ್ಲದೇ ಯಾವ ರಾಜ್ಯವೂ ಸಾಲ ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದ ಎಕನಾಮಿಕ್ ಮಿನಿಸ್ಟ್ರಿ ಮತ್ತು ಹಣಕಾಸಿನ

ಆಯೋಗ ಇರತಕ್ಕಂಥಾದ್ದೇ ಈ ಕೆಲಸಕ್ಕೋಸ್ಕರ ಪ್ರತಿಯೊಂದು ರಾಜ್ಯದ ಶಕ್ತಿ ಏನಿದೆ ಎನ್ನತಕ್ಕಂಥಾದ್ದನ್ನು ಪೀರಿಯಾಡಿಕಲಿ ಅಳತೆ ಮಾಡುತ್ತಾ ಇರತಕ್ಕಂಥಾದ್ದು. ಮೊದಲು, ಅವರು ಬಡ್ಡಿ ಕಟ್ಟಲಿಕ್ಕೆ ಸಾಧ್ಯವೇ? ಎರಡನೆಯದು ಆ ಲೋನ್ ripe ಆದಾಗ, ಅದನ್ನು ಸರ್ವೀಸ್ ಮಾಡಲಿಕ್ಕೆ ಸಾಧ್ಯವೇ? ಯಾವ ಸರ್ಕಾರಗಳು ಸಾಲ ಮಾಡಬೇಕಾಗಿದ್ದರೂ, ಅದು ಅಭಿವೃದ್ಧಿ ಯೋಜನೆಗಳಿಗೋಸ್ಕರವೇ ಸಾಲ ಮಾಡುವುದು. 1992-93ನೇ ಇಸವಿಯಲ್ಲಿ ಈ ಕೃಷ್ಣ ಜಲಭಾಗ್ಯ ನಿಗಮ ಬಂತು. ವಿಶೇಷವಾಗಿ ಆ ಜಲ ಭಾಗ್ಯ ನಿಗಮವನ್ನು ಒಂದು ಇನ್‌ಸ್ಟುಮೆಂಟ್‌ನ್ನಾಗಿ ಮಾಡಿ, ಸ್ಪೆಷಲ್ ಪರ್ಪಸ್ ವೆಹಿಕಲ್ಲನ್ನಾಗಿ ಮಾಡಿಕೊಂಡಿದ್ದೇವೆ. ಮಾನ್ಯ ಶಿವಾನಂದ ಪಾಟೀಲರು, ಇರಿಗೇಷನ್ ಮಿನಿಸ್ಟರ್‌ರವರು 2002 ಎಂದು ಹೇಳಿದರು, 2003 ಎಂದು ಹೇಳಿದರು, ಆಮೇಲೆ, 2005 ಎಂದು ಹೇಳಿದರೆಂದು ಹೇಳಿದರು. ನಿಜ, 2000 ಇಸವಿಯಲ್ಲಿ ಇರಿಗೇಷನ್ ಮಿನಿಸ್ಟರು ಮುಗಿಸುತ್ತೇವೆಂದು ಹೇಳಿದಾಗ, ಈ ಬರದ ವಿಚಾರವನ್ನು ನಾವು ಯಾರೂ ನಿರೀಕ್ಷೆ ಮಾಡಿರಲಿಲ್ಲ. ಆದ್ದರಿಂದ, ಈ ಬರದ ಚೌಕಟ್ಟು ಕಳೆದ ಮೂರು ವರ್ಷಗಳಿಂದ ಇದ್ದರೂ ಕೂಡ ನಮ್ಮ ಕೃಷ್ಣ ಕೊಳ್ಳದ ಎಲ್ಲಾ ಯೋಜನೆಗಳನ್ನು 2005ಕ್ಕೆ ನಾವು ಮುಗಿಸುತ್ತೇವೆ ಎಂಬ ವಿಶ್ವಾಸದ ಮಾತುಗಳನ್ನು ಆಡಬೇಕಾಗಿದ್ದರೆ, ಅದರಲ್ಲಿ ರಾಜಕೀಯ ಇಚ್ಛಾಶಕ್ತಿ ಇದೆ. ಅದನ್ನು ಜೇನರೇಸಿಕೊಳ್ಳತಕ್ಕ ಶಕ್ತಿಯನ್ನು ರಾಜ್ಯ ಸರ್ಕಾರ ಪಡೆದಿದೆ ಎನ್ನುವುದಕ್ಕೆ ಅದು ಒಂದು ಇಂಗಿತವನ್ನು ವ್ಯಕ್ತಪಡಿಸುತ್ತದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕರ್ನಾಟಕ ವಿದೇಶಿ ನೇರ ಬಂಡವಾಳ ಹೂಡಿಕೆಯ ಪ್ರಶಸ್ತ ತಾಣವಾಗಿ ಮಾರ್ಪಟ್ಟಿದೆ. Foreign direct investment. ಒಂದು ರಾಜ್ಯದ ಹೆಲ್ತ್, ಸ್ವಾಸ್ತ್ಯ ಚೆನ್ನಾಗಿದೆ ಎಂಬುದಕ್ಕೆ ಹಲವಾರು ಇಂಡಿಕೇಟರ್ಸ್ ಇರುತ್ತವೆ. ನನ್ನ limited knowledge of economics ಅದರ ಮೂಲಕ ನಾನು ಹೇಳಬಹುದಾದರೆ ಇದು ಒಂದು important bench-mark or important parameter. ಒಂದು ರಾಜ್ಯ ಸರಿಯಾದ ದಿಕ್ಕಿನಲ್ಲಿ ನಡೆಯುತ್ತಾ ಇದೆಯೇ, ಹೋಗುತ್ತಾ ಇದೆಯೇ, ಅದು ಬಂಡವಾಳವನ್ನು ಆಕರ್ಷಣೆ ಮಾಡತಕ್ಕಂಥ ಶಕ್ತಿಯನ್ನು ಪಡೆದಿದೆಯೇ ಎನ್ನತಕ್ಕಂಥಾದ್ದಕ್ಕೆ ಕಳೆದ ಎರಡು ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ವಾರಕ್ಕೆ ಎರಡು ಬಹು ರಾಷ್ಟ್ರೀಯ ಕಂಪನಿಗಳು, ತಮ್ಮ ಸಂಸ್ಥೆಯ ಘಟಕಗಳನ್ನು ವಿಶೇಷವಾಗಿ ತಂತ್ರಾಂಶ ಉದ್ದಿಮೆಗಳನ್ನು ಸ್ಥಾಪನೆ ಮಾಡುತ್ತಿವೆ. ಹೇಳುತ್ತಾರೆ, ನಿಜ. ಏನು ಸ್ವಾಮಿ ಎಲ್ಲವೂ ಬೆಂಗಳೂರಿನಲ್ಲಿಯೇ ನಡೆಯುತ್ತಾ ಇದೆ ಎಂದು. ಬೆಂಗಳೂರು ಕರ್ನಾಟಕಕ್ಕೆ ಸೇರಿಲ್ಲ ಎಂಬತಕ್ಕ ಕಲ್ಪನೆ ಏನಾದರೂ ಇದೆಯೇ? ಇದರದ್ದು spin-off effects ಏನೂ ಇರುವುದಿಲ್ಲವೇ? ಹಾಗಾದರೆ, ಬಂಡವಾಳಗಳೆಲ್ಲಾ ಬರತಕ್ಕಂಥಾದ್ದು ಪಟ್ಟಣ ಪ್ರದೇಶಗಳಿಗೇ. ಹಳ್ಳಿಗಾಡಿನ ಪ್ರದೇಶಗಳನ್ನು ನೋಡಿಕೊಳ್ಳುವುದಕ್ಕೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಇದೆ. ಮೊನ್ನೆ ವಿಪ್ರೋ ಚೇರ್ಮನ್ ಪ್ರೇಮ್‌ಜೀಯವರು ಹೇಳಿದರು. ನಮ್ಮ ಸರ್ಜಾಪುರ ರೋಡಿನಲ್ಲಿ ಏನೂ ನಡೆಯುತ್ತಾ ಇಲ್ಲ ಎಂದು. ನಿಜ, ಸ್ವಲ್ಪ ಕಡಿಮೆಯಾಗಿದೆ. ಉದ್ದೇಶ ಪೂರ್ವಕವಾಗಿ, ಬುದ್ಧಿಪೂರ್ವಕವಾಗಿ ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ. ಆದ್ದರಿಂದ ನಮ್ಮ ಗಮನವೆಲ್ಲಾ, ನಮ್ಮ ದೃಷ್ಟಿಯೆಲ್ಲಾ ನಮ್ಮ focus ಎಲ್ಲಾ ಇವತ್ತು ಗ್ರಾಮಾಂತರ ಪ್ರದೇಶಗಳಿಗೆ ಹೋಗುತ್ತಾ ಇದೆ. ಅದರಲ್ಲಿ ತಪ್ಪೇನೂ ಇಲ್ಲ. I am not going to be apologetic about it. But, one should not be at the cost of the other, ಆ ಕಾರಣ ಇದಕ್ಕೆ ಕಡಿಮೆಯಾಯಿತೋ ಅಥವಾ ಈ ಕಾರಣ ಅದಕ್ಕೆ ಕಡಿಮೆಯಾಯಿತೋ. ಈ ಸರ್ಕಾರದ ಮೇಲೆ ಏನೇ ಪ್ರಚಾರಗಳು

ನಡೆಯಲಿ, ಅಪಪ್ರಚಾರಗಳು ನಡೆಯಲಿ, ಈ ಸರ್ಕಾರ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಬಗ್ಗೆ ಹಿಂದಿನಿಂದಲೂ ವಿಶೇಷವಾದ ಗಮನವನ್ನು ಕೊಟ್ಟಿದೆ. ಆ ಗಮನ ಇತ್ತೀಚಿನ ಸಾಲಿನಲ್ಲಿ ಜಾಸ್ತಿಯಾಗಿದೆ, ಅದಕ್ಕೆ ಇನ್ನಾವುದೂ ಕಾರಣ ಅಲ್ಲ. ಬುದ್ಧಿಪೂರ್ವಕವಾದಂಥ ಒಂದು strategy ಏನು ನಾನು ಹಾಕಿಕೊಂಡಿದ್ದೇವೆ, ಆ strategy ಅತ್ಯಧಿಕ ವಿದೇಶೀ ನೇರ ಬಂಡವಾಳವನ್ನು ಪಡೆದಿರತಕ್ಕಂಥ ಪ್ರಮುಖ ರಾಜ್ಯಗಳಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಇದನ್ನು ಒಂದನೇ ಸ್ಥಾನಕ್ಕೆ ತೆಗೆದುಕೊಂಡು ಹೋಗಬೇಕೆಂಬ ಅವಿರತ ಪ್ರಯತ್ನಗಳನ್ನು ನಾವು ಮಾಡುತ್ತಾ ಇದ್ದೇವೆ. ರಾಜ್ಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಮಂಜೂರಾತಿ ಪ್ರಮಾಣ, ನಾಲ್ಕು ವರ್ಷಗಳ ಕೆಳಗೆ ಮೂರರಷ್ಟು ಇತ್ತು, ಅದನ್ನು ಇವತ್ತು 19 ಪರ್ಸೆಂಟ್‌ಗೆ ತೆಗೆದುಕೊಂಡು ಹೋಗಿದ್ದೇವೆ. 2006–07ರ ಅವಧಿಗೆ ಮಧ್ಯಾವಧಿ ವಿತ್ತೀಯ ಯೋಜನೆಯನ್ನು ಸದನದಲ್ಲಿ ಅತಿ ಶೀಘ್ರದಲ್ಲಿಯೇ ಮಂಡಿಸಲಿದ್ದೇನೆ. ಇದರ ಜೊತೆಯಲ್ಲಿ ಹಲವಾರು ಇಲಾಖೆಗಳ ಮಧ್ಯಾವಧಿ ವಿತ್ತೀಯ ಯೋಜನೆಗಳನ್ನೂ ಕೂಡ, ಅದು ಒಳಗೊಂಡಿರುತ್ತದೆ. ಅಂದರೆ ಸಿಸ್ಟಂ ಇಂಪ್ರೂವ್‌ಮೆಂಟ್ ಏನಿದೆ, system evolution ಏನಿದೆ, that system evolution is in place in our fiscal development. ವೇಗದ ಆರ್ಥಿಕ ಬೆಳವಣಿಗೆ, ಆ ಮೂಲಕ ಕರ್ನಾಟಕದ ಜನಗಳ ಜೀವನದ ಗುಣಮಟ್ಟ ಸುಧಾರಣೆ. ಇವೆರಡೂ ಅನುಪಾಸಾಗಿ ಹೋಗಬೇಕಾಗಿರತಕ್ಕಂಥಾದ್ದು. ಇಷ್ಟು ನಮ್ಮ ಹಣಕಾಸಿನ ವಿಚಾರ. ಇವತ್ತು ಏನು ನಾನು ಸದನದ ಮುಂದೆ ಬಂದಿದ್ದೇನೆ, ನನ್ನ 2003–04ನೇ ಸಾಲಿನ ಆಯವ್ಯಯವನ್ನು ಮಂಡಿಸಿ, ಇದರ ಬಗ್ಗೆ ಮಂಜೂರ್ಮಾಡಬೇಕೆಂದು ಕೇಳಿದ್ದೇನೆ. ಅದಕ್ಕೆ ಸಂಬಂಧಪಟ್ಟಿದ್ದು ಇಷ್ಟು. ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕು, ನಿಜ. ಹೇಗೆ? ತೆರಿಗೆ ಹಾಕಿದರೆ, ಈಗಾಗಲೇ ನಮ್ಮ ಜನಗಳ ಮೇಲೆ ದೊಡ್ಡ ಪ್ರಮಾಣದ ಕರಭಾರ ಇದೆ. ಆ ಭಾರವನ್ನು ಇನ್ನು ಸಹಿಸಲಿಕ್ಕೆ ಆಗದು. ನಮ್ಮ ಸಹನೆಯ ಕಟ್ಟೆಯನ್ನು ಪರೀಕ್ಷೆ ಮಾಡಬೇಡಿ. ಆದುದರಿಂದ ನೀವು ಯಾವ ತೆರಿಗೆಯನ್ನೂ ಹಾಕಬೇಡಿ ಎಂದು ಹೇಳಿದ್ದಾರೆ. ತೆರಿಗೆ ಹಾಕಲಿಕ್ಕೆ ಈ ಸದನದ ಅನುಮತಿ ಇಲ್ಲದೆ ಹೋದರೆ, by and large, ಇರತಕ್ಕಂಥ ವ್ಯವಸ್ಥೆಯಲ್ಲಿ ಕೊಂಚ ಸುಧಾರಣೆ ಮಾಡಬೇಕು. ಇನ್ನು ಎಕ್ಸೈಸ್ ಪಾಲಿಸಿ ಬಗ್ಗೆ, ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಭಾಷಣ ಮಾಡಿದಂಥವರು ಇದರ ಬಗ್ಗೆ ಗಮನ ತೆಗೆದುಕೊಳ್ಳಬಹುದಾಗಿತ್ತು. ಬಜೆಟ್ ಡಿಸ್‌ಕಶನ್ ಆಗತಕ್ಕಂಥ ಸಮಯದಲ್ಲಿ ಜುಲೈ ಒಂದರಂದು ಈ ಸದನಕ್ಕೆ ನಾನು ಹೇಳಿದ್ದೆ. ಅದೇನೆಂದರೆ, ಮೂಲಭೂತವಾದಂಥ ಸುಧಾರಣೆಯನ್ನು ನಾನು ತರುತ್ತಾ ಇದ್ದೇನೆ. ಆ ಮೂಲಭೂತವಾದಂಥ ಸುಧಾರಣೆಯನ್ನು ಎಕ್ಸೈಸ್ ಈಯರ್ 2003 ಜುಲೈ ಒಂದನೇ ತಾರೀಖಿನಿಂದ ನಾನು ಜಾರಿಗೆ ತರುತ್ತಾ ಇದ್ದೇನೆ ಎಂದು ಹೇಳಿದ್ದೆ. ಬಹಳ ಜನಕ್ಕೆ ಅಪನಂಬಿಕೆ ಇತ್ತು. ಆ ಬಾಬಿನಲ್ಲಿರುವಂಥವರಿಗಂತೂ ತುಂಬಾ ಅಪನಂಬಿಕೆಯಿತ್ತು. ಅದು ಏನು ಎಂದು ಹೇಳಿದರೆ..... ಇದನ್ನು ಮಾಡಲು ಧೈರ್ಯ ಎಲ್ಲಿಂದ ಬರುತ್ತದೆ ಎಂದು ಏಕೆಂದರೆ, ಬಂದು ಬಂದ ಹಿಂದಿನ ಎಲ್ಲಾ ಸರಕಾರಗಳೂ ಕೂಡ ಒಂದಲ್ಲ ಒಂದು ದಾಕ್ಷಿಣ್ಯದಲ್ಲಿದ್ದುವು. ಇವೊತ್ತು ಆ ದಾಕ್ಷಿಣ್ಯದ ಕಟ್ಟಿನಿಂದ ನಾವು ಹೊರಗೆ ಬಂದು ಬಿಟ್ಟಿದ್ದೇವೆ. ಈ ಸೆಕೆಂಡ್ಸ್ ಎನ್ನುವಂಥಾದ್ದು ನಮ್ಮ ರಾಜ್ಯಕ್ಕೆ ಏನು ಬಹಳ ದೊಡ್ಡ ಕಳಂಕವಿತ್ತು, ಆ ಬಗ್ಗೆ ಕಳೆದ ನಾಲ್ಕು ವರ್ಷಗಳ ಕಾಲ ನಾವು ಯೋಚನೆ ಮಾಡಿದೆವು. ಇವೊತ್ತು ಸರಿಹೋಗಬಹುದು, ನಾಳೆ ಸರಿಹೋಗಬಹುದು ಎಂದು ಇದ್ದೆವು. ಆದರೆ ಅಲ್ಲಿ ಸರಿಹೋಗತಕ್ಕಂಥ ಸೂಚನೆಗಳು ಕಂಡುಬರಲಿಲ್ಲ.

ಅದರ ಪ್ರಮಾಣವು ಜಾಸ್ತಿಯಾಗಲು ಪ್ರಾರಂಭವಾಯಿತು. ನಾವು ಸೆಕೆಂಡ್ಸ್ ಕೇಳಿದ್ದೆವು..... ಥರ್ಡ್ಸ್ ಶುರುವಾಯಿತು. ಆದುದರಿಂದ ಎಲ್ಲಾದರೂ ಒಂದು ಕಡೆ, ಯಾರಾದರೂ ಒಬ್ಬರು ಅಥವಾ ಯಾವುದಾದರೆ ಒಂದು ಸರಕಾರ, ಇದರ ಬಗ್ಗೆ ಒಂದು ಬಿಗಿ ನೀತಿಯನ್ನು ಅನುಸರಿಸಬೇಕು. ಹಿಂದೆ ಪ್ರಯತ್ನ ನಡೆದಿತ್ತು. ಕೋರ್ಟ್‌ಗೆ ಹೋಗಿ ಅದನ್ನು ಸ್ಟೇ ಮಾಡಿಸಿದರು. ಅದನ್ನು ನಾನು ಈಗ ನೆನಸುತ್ತೇನೆ. ಧೈರ್ಯವಾಗಿ ನಾವು, ಈ ಸರಕಾರ, ಈ ಪಕ್ಷ, ತೆಗೆದುಕೊಂಡ ದಿಟ್ಟ ನಿಲುವನ್ನು ಹಿಂದೆ ತೆಗೆದುಕೊಂಡಿದ್ದಿದ್ದರೆ, ಈ ಸುಧಾರಣೆ ಬರಲಿಕ್ಕೆ ಪ್ರಾರಂಭವಾಗಿ ಈಗ ಅದು 7 ಅಥವಾ 8 ವರ್ಷಗಳಾಗಿರುತ್ತಿತ್ತು. ಈಗ we are only late, But, better late than never. ತಡವಾಗಿಯಾದರೂ ಕೂಡ ಇಂಥ ಒಂದು ದೊಡ್ಡ ಪ್ರಮಾಣದ ಸುಧಾರಣೆಯನ್ನು ಎಷ್ಟೇ ವಿರೋಧ ಬಂದರೂ ಕೂಡ ನಾವು ತೆಗೆದುಕೊಂಡಿರತಕ್ಕಂಥಾದ್ದಕ್ಕೆ, ಶ್ರೀ ವೈ.ಕೆ. ರಾಮಯ್ಯನವರು ಆ ಕುರಿತು ಮುಕ್ತಕಂಠದ ಶ್ಲಾಘನೆಯನ್ನು ಮಾಡಿದ್ದಾರೆ. ಅವರಿಗೆ ನಾನು ಆಭಾರಿಯಾಗಿದ್ದೇನೆ. ಇಂಥ ಒಂದು ದೊಡ್ಡ ಪ್ರಮಾಣದ ಸುಧಾರಣೆ ಸಾಧ್ಯವಾಗುತ್ತದೆ ಎಂದು ನಾನು ನೆನಸಿರಲಿಲ್ಲ. ಆದರೆ ಕೆಲವೊಂದು ಸಾರಿ ಸುಧಾರಣೆಗಳು ಬರಬೇಕಾಗಿದ್ದರೂ ಕೂಡ the compulsions of the ಸನ್ನಿವೇಶಗಳ ಒತ್ತಡಗಳಿಂದಲೂ ಕೂಡ ಕೆಲವು ಸಮಯ ಸುಧಾರಣೆಗಳನ್ನು ನಾವು ಮಾಡಬೇಕಾಗಿ ಬರುತ್ತದೆ. ಅದನ್ನು ಮಾಡಿದ್ದೇವೆ. ಕಳೆದ ಎರಡು ವರ್ಷಗಳಲ್ಲಿ ಈ ಬರದ ಛಾಯೆ ಏನು ನಮ್ಮನ್ನು ಕಾಡುತ್ತಾ ಇದೆ, ಅದು ಭಾಗಶಃ ನಮ್ಮ ಈ ನಿರ್ಧಾರಕ್ಕೆ ಒಂದು ಪ್ರಬಲವಾದಂಥ motivating force ಹಾಗೆಂದು ನಾನು ಭಾವನೆ ಮಾಡುತ್ತೇನೆ.

ಶ್ರೀ ಶಿವಾನಂದ ಪಾಟೀಲರವರು ಪರಗೋಡು ವಿಚಾರವನ್ನು ಮಾತನಾಡಿದರು. ಆಂಧ್ರದವರ ಜೊತೆಗೆ ಜಗಳ ಮಾಡುತ್ತೇವೆ, ತಮಿಳುನಾಡಿನವರ ಜೊತೆಗೆ ಜಗಳ ಮಾಡುತ್ತೇವೆ,.... ಹಾಗಾದರೆ ಬೇರೆ ಏನಾದರೂ ದಾರಿ ಇದೆಯೇ? ಜಗಳ ಮಾಡಿದ್ದು ನಮ್ಮ ರಾಜ್ಯಕ್ಕೆ ಸಲ್ಲಬೇಕಾಗಿರತಕ್ಕಂಥ rightful share in inter-state rivers... ಜಗಳ ಮಾಡುತ್ತಾರೆ ಎನ್ನತಕ್ಕಂಥ ಕಾರಣಕ್ಕೋಸ್ಕರ ನಾವು ದಾನಶೂರಕರ್ಣರಾಗುವುದಕ್ಕೆ ಸಾಧ್ಯವೇ? ಈ ಸರಕಾರದ ನಿಲುವು ಅದಲ್ಲ. ಪ್ರತಿಯೊಂದು ತೊಟ್ಟು ನೀರು.. ರಾಜ್ಯಕ್ಕೆ ಏನು ಬಚಾವತ್ ಅಥವಾ ಕಾವೇರಿ ಟ್ರೈಬ್ಯುನಲ್ ಏನು ನಿಗದಿಪಡಿಸಿದೆ, ಅದರ ಕೊನೆಯ ತೊಟ್ಟು ನೀರನ್ನೂ ಉಪಯೋಗಿಸಬೇಕು ಎನ್ನತಕ್ಕಂಥಾದ್ದು ನಮ್ಮ ಮತ್ತು ಈ ಸದನದ ಒಟ್ಟಾರೆ ಇಂಗಿತವಾಗಿದೆ. ಕೇವಲ ಒಂದು ಪಕ್ಷದವರದ್ದು ಅಲ್ಲ ಇದು. ಇದು ಸದನದ ಒಟ್ಟಾರೆ ರಿಸಾಲ್ವ್. ಆ ರಿಸಾಲ್ವ್‌ಗೆ ಈ ಸರಕಾರ ಬದ್ಧವಾಗಿದೆ ಅಷ್ಟೆ.. ಯಾರ ದ್ವೇಷವನ್ನಾದರೂ ಕೂಡ ನಾವು ಎದುರಿಸುತ್ತೇವೆ. ಕಾರಣ ನಮ್ಮ ನಿಲುವು ಏನಿದೆ, ಅದು righteous ನಿಲುವು. ಈಗ ಪರಗೋಡು ವಿಚಾರದಲ್ಲಿ ನಾವು ಸ್ಪಷ್ಟವಾಗಿ ನಮೂದಿಸಿದ್ದೇವೆ. ಕನ್ನಡದಲ್ಲಿ ಹೇಳಿಯಾಯಿತು, ಇಂಗ್ಲೀಷ್‌ನಲ್ಲಿ ಹೇಳಿಯಾಯಿತು, ತೆಲುಗಿನಲ್ಲಿ ಹೇಳಲಿಲ್ಲ ಅಷ್ಟೇ... ಪಕ್ಕದ ರಾಜ್ಯದವರಿಗೆ ತೆಲುಗು ಅರ್ಥವಾಗುವುದೋ ಏನೋ? ಇದರಲ್ಲಿ ಒಂದು ಹನಿ ನೀರನ್ನೂ ಕೂಡ ನಾವು ನೀರಾವರಿಗೋಸ್ಕರ ಉಪಯೋಗಿಸುವುದಿಲ್ಲ. ಇದು ಕೇವಲ creating water bodies for recharging of ground water ಹಾಗೆ ಎಂದು ಹೇಳಿದರೂ ಕೂಡ ಯುನೈಟೆಡ್ ನೇಶನ್ಸ್ ಒಂದಕ್ಕೆ ಹೋಗಿರಲಿಲ್ಲ. ಬಾಕಿ ಎಲ್ಲಾ ಸಂಸ್ಥೆಗಳ ಹತ್ತಿರವೂ ಹೋದರು. ಪ್ರೆಸಿಡೆಂಟ್‌ರವರ ಹತ್ತಿರ, ಪ್ರೈಮ್‌ಮಿನಿಸ್ಟರ್ ಹತ್ತಿರ ಹೋದರು. ಡೆಪ್ಯುಟಿ ಪ್ರೈಮ್ ಮಿನಿಸ್ಟರ್ ಹತ್ತಿರ ಹೋದರು. ನಮ್ಮನ್ನೂ ಕೂಡ ಪ್ರೆಸಿಡೆಂಟ್‌ರವರ

ಹತ್ತಿರ ಹೋಗುವ ಹಾಗೆ ಮಾಡಿದರು. ಹಾಗಾದರೆ ಕರ್ನಾಟಕ ಏನು ತಪ್ಪು ಮಾಡಿದೆ? ಕುಡಿಯುವ ನೀರನ್ನು ಕೊಡಬೇಕೆನ್ನುವ ಬೇಸಿಕ್ ಕಮಿಟ್‌ಮೆಂಟ್ ಏನಿದೆ, ದೇಶದ ಕಮಿಟ್‌ಮೆಂಟ್ ಇದೆ. ಇದು ಕೇವಲ ರಾಜ್ಯದ ಕಮಿಟ್‌ಮೆಂಟ್ ಎಂದು ನಾನು ಭಾವನೆ ಮಾಡುವುದಿಲ್ಲ. ರಾಜೀವ್ ಗಾಂಧಿ ಡ್ರಿಂಕಿಂಗ್ ವಾಟರ್ ಮಿಶನ್ ಅವರು ಹೇಳುತ್ತಾರೆ. Inter-state river waters dispute ಕುಡಿಯುವ ನೀರಿನ ಮಟ್ಟಿಗೆ, ......

**ಶ್ರೀ ಶಿವಾನಂದ ಎಸ್ ಪಾಟೀಲ್** : ಮಾನ್ಯ ಅಧ್ಯಕ್ಷರೆ, ನಾನು ಕರ್ನಾಟಕ ತಪ್ಪು ಮಾಡಿದೆ ಎಂದು ಹೇಳಲಿಲ್ಲ. ಅದು ರೆಕಾರ್ಡ್‌ಗೆ ಹೋಗಬಾರದು. ಆಂಧ್ರಪ್ರದೇಶ ತಪ್ಪು ಮಾಡಿಯೂ ಕೂಡ, ಕರ್ನಾಟಕ ತಪ್ಪು ಮಾಡುತ್ತಾ ಇದೆ ಎಂದು ಹೇಳುತ್ತಾ ಇದೆ ಎಂದು ನಾನು ಹೇಳಿದ್ದು. ಅಲ್ಲಿಂದ ಅವರು 800 ಟಿ.ಎಂ.ಸಿ ಬದಲು 1400 ಟಿಎಂಸಿ ನೀರನ್ನು ಅಪಹರಿಸುತ್ತಿದ್ದಾರೆಂದು ನಾನು ಹೇಳಿದ್ದೇನೆ. That also you have got the information. ಅದು ನಿಮಗೂ ಗೊತ್ತು. ಆದರೆ ನಮ್ಮ 734 ಟಿಎಂಸಿ ನೀರನ್ನು ಇನ್ನೂ ನಾವು ಉಪಯೋಗಿಸಿಲ್ಲ. ಅದು ನನ್ನ ವ್ಯಥೆ ಎಂದು ನಾನು ಹೇಳಿದ್ದೇನೆ.

**ಶ್ರೀ ಎಸ್.ಎಂ. ಕೃಷ್ಣ** : 734 ಟಿಎಂಸಿಎಫ್‌ಟಿ ನೀರನ್ನು ಜಾದೂ ಮಾಡಿದರೂ ಉಪಯೋಗ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ವ್ಯವಸ್ಥಿತವಾದಂಥ ಪ್ರಯತ್ನಗಳನ್ನು ಮುಂದುವರಿಸಬೇಕು, ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು, ಆ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು, ಯೋಜನೆಗಳನ್ನು ಜಾರಿಗೆ ತರಬೇಕು. ಅದಕ್ಕೆ ಪ್ರಯತ್ನಗಳನ್ನು ನಾವು ಮುಂದುವರಿಸಿಕೊಂಡು ಬರುತ್ತಾ ಇದ್ದೇವೆ. ಕೆಲಸಗಳು ನಡೆಯುತ್ತಲೇ ಇವೆ. ಅಲ್ಲೊಂದು ಇಲ್ಲೊಂದು ವಿಘ್ನಗಳು ಬರಬಹುದು. ಆ ವಿಘ್ನಗಳು ಬಂದರೂ ಕೂಡ, ನಾವು ಅದನ್ನು ನಿಭಾಯಿಸುತ್ತೇವೆ. ಅಂಥ ಸನ್ನಿವೇಶಗಳನ್ನು ನಿಭಾಯಿಸತಕ್ಕಂಥ ಶಕ್ತಿಯನ್ನು ಕರ್ನಾಟಕ ರಾಜ್ಯ ಸರಕಾರ ಮತ್ತು ಕರ್ನಾಟಕದ ಜನತೆಯು ಪಡೆದಿದೆ ಎಂದು ಹೇಳಬಯಸುತ್ತೇನೆ.

ಇನ್ನು ಆಡಳಿತ ಸುಧಾರಣೆಯ ವಿಚಾರ. ಆಡಳಿತ ಸುಧಾರಣೆಯನ್ನು ಒಮ್ಮೆಗೆ ತರಲು ಆಗುತ್ತದೇನು? ಮೊರಾರ್ಜಿದೇಸಾಯಿ ಮತ್ತು ಕೆಂಗಲ್ ಹನುಮಂತಯ್ಯನವರು ಮಾಡಿದಂಥ ಆಡಳಿತ ಸುಧಾರಣಾ ವರದಿ ಇನ್ನೂ ಅನುಷ್ಠಾನಕ್ಕೆ ತರುವ ಪ್ರಯತ್ನಕ್ಕೆ ನಾವೂ ಶ್ರಮಪಡುತ್ತಾ ಇದ್ದೇವೆ. ಅದು 1966ನೇ ಇಸವಿಯಲ್ಲಿ ಬಂದ ವರದಿ ಇರಬೇಕು.. ಅದನ್ನು ತೆರಿಗೆ ಕೊಡಲಿಕ್ಕೆ ಇನ್ನೂ ಕೇಂದ್ರ ಸರಕಾರ ಪ್ರಯತ್ನ ಮಾಡುತ್ತಾ ಇದೆ, ರಾಜ್ಯ ಸರಕಾರಗಳು ಪ್ರಯತ್ನ ಮಾಡುತ್ತಾ ಇವೆ. ಆದ್ದರಿಂದ ನಮ್ಮ ಆಡಳಿತ ಸುಧಾರಣಾ ಆಯೋಗ, ಮತ್ತು ನಮ್ಮ ಉದ್ದೇಶ ಯಾವುದಿತ್ತು ಅಂದರೆ, ಅದು ಇಡೀ ದೇಶವನ್ನೇ ಒಂದು ಯೂನಿಟ್‌ನ್ನಾಗಿ, ತೆಗೆದುಕೊಂಡು ಅವರು ಅನಾಲೈಸ್ ಮಾಡಿದರು. ಇದು macro level ನಲ್ಲಿ ರಾಜ್ಯವನ್ನು ಗಮನದಲ್ಲಿಟ್ಟುಕೊಂಡು, ಇದನ್ನು ಹೇಗೆ ಆಚರಣೆಗೆ ತರಬಹುದು, ಅಥವಾ ಇನ್ನು ಹೆಚ್ಚು ಸುಧಾರೆಗಳನ್ನು ಹೇಗೆ ಮಾಡಬಹುದು ಎನ್ನತಕ್ಕಂಥಾದ್ದು ಇದೆ. ಆ ಸುಧಾರಣೆಗಳು ನಮಗೆ ವಿಸಿಬಲ್ ಆಗಿರಬೇಕಾಗಿರುತ್ತದೆ. ಅದಕ್ಕೆ ಟೈಮ್ ಬೇಕಾಗುತ್ತದೆ, ಆ ಟೈಮ್ ಕೆಲವೊಂದು ಸಾರಿ ಈ ಆಡಳಿತದ ಪದ್ಧತಿಯನ್ನು ನಾವು ಅರ್ಥಮಾಡಿಕೊಂಡರವಾಗಿ ಆ ಮಟ್ಟದಲ್ಲಿ ಅದು ಹೊರಹೋಗಿಸುವುದಕ್ಕೆ ಅದು ಟೈಮ್‌ಕನ್‌ಸ್ಯೂಮಿಂಗ್ ಆಗಿರುತ್ತದೆ. ತೆರಿಗೆ ordinance ಜಾರಿಗೆ ತಂದು ನೀವು ಪ್ರಜಾಪ್ರಭುತ್ವಕ್ಕೆ ಅಪಚಾರ ಮಾಡಿದ್ದೀರಿ, ಏನು ಅಪಚಾರ ಆಯಿತು ಪ್ರಜಾಪ್ರಭುತ್ವಕ್ಕೆ? ವ್ಯಾಟ್ ತರುತ್ತಾರೆ ಎಂದು ನಾವು ಆಶೆ ಇಟ್ಟುಕೊಂಡಿದ್ದೇ ತಪ್ಪಾಯಿತು.

calculations ನಲ್ಲಿ ತಪ್ಪಾಗಿದೆ ನಿಜ. ನಾವು ಮಾಡಿದ calculations ಏನು ಅಂದರೆ ಕೇಂದ್ರ ಸರ್ಕಾರ ಇದರ ಬಗ್ಗೆ with the requisite political will ಮುಂದುವರೆಯುತ್ತದೆಂದು ನಾನು ಆಶಯ ಮಾಡಿದ್ದೆ. ಮಾನ್ಯ ಯಶವಂತ ಸಿನ್ಹಾ ಅವರು Finance Minister ಆಗಿದ್ದಾಗ ಪ್ರಾರಂಭವಾದ ಸುಧಾರಣೆ ಮಾನ್ಯ ಜಸ್ವಂತಸಿಂಗ್‌ರವರ ಕಾಲದಲ್ಲಿ ಮುಂದಕ್ಕೆ ಅದು ಹೋಗಿದೆ. ಆದ್ದರಿಂದ ಏನಾದರೂ ರಾಜ್ಯ ಸರ್ಕಾರ ತಪ್ಪು ಮಾಡಿದ್ದರೆ ಈ ordinance ನ್ನು across the board 1% ಹೆಚ್ಚು ಮಾಡಲಿಕ್ಕೆ ನಾವು ಒಂದು ಆರ್ಡಿನೆನ್ಸ್ ತರಬೇಕಾಗಿದ್ದರೆ ಮತ್ತೆ ನಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕೆಂಬ ದೃಷ್ಟಿಯಿಂದ ಮಾತ್ರ ನಾವು ಈ step ತೆಗೆದುಕೊಂಡೆವು. ಅದರ ಮಂಜೂರಾತಿಗಾಗಿಯೇ ಇವತ್ತು ನಾನು ನಿಮ್ಮ ಮುಂದೆ ನಿಂತಿರುವುದು ಇದರಲ್ಲಿ anti democratic ಏನಿದೆಯೋ ನನಗಂತೂ ಅರ್ಥವಾಗಲಿಲ್ಲ. ನನ್ನ definition of democracy ಕೊಂಚ ವಿಭಿನ್ನವಾಗಿರಬಹುದೇನೋ, ತಮ್ಮ definition of democracy ಗಿಂತ. ನಾವು ನನ್ನ ಬಜೆಟ್‌ನ್ನು frame ಮಾಡಿದಾಗ ಕೇಂದ್ರ ಸರ್ಕಾರದವರು 750 ಕೋಟಿ ರೂ.ಗಳನ್ನು ಕೊಡುತ್ತಾರೆ ಪರಿಹಾರ ಎಂದು ಯೋಚನೆ ಮಾಡಿದ್ದೆವು, ನಮ್ಮ ವ್ಯಾಟ್ ತರತಕ್ಕಂತಹ ಕಾರಣದಿಂದ. ಹೆಚ್ಚುವರಿ ಸಂಪನ್ಮೂಲಗಳ ಅನ್ವೇಷಣೆ ಅದು ನಿರಂತರವಾಗಿ ನಡೆಯುತ್ತದೆ. ಅದನ್ನು ನಾವು ಮುಂದುವರೆಸಿಕೊಂಡು ಬಂದಿದ್ದೇವೆ. ಬರದ ಮೂರನೇ ವರ್ಷ ಇದು. ಆದರೂ ಕಳೆದ ವರ್ಷದ ಜೂನ್ ಅಂತ್ಯಕ್ಕೆ 5124 ಕೋಟಿ ರೂ.ಗಳನ್ನು ನಾವು ವೆಚ್ಚ ಮಾಡಿದ್ದರೆ ಈ ವರ್ಷ ಜೂನ್ ಅಂತ್ಯಕ್ಕೆ 7300 ಕೋಟಿ ರೂ.ಗಳನ್ನು ನಾವು ವೆಚ್ಚ ಮಾಡಿದ್ದೇವೆ. ಅಂದರೆ ಕಳೆದ ವರ್ಷದ 19ಕ್ಕಿಂತ ಈ ಸಾರಿ 26ರಷ್ಟು ಜಾಸ್ತಿಯಾಗಿದೆ. ಮಾನ್ಯ ಸದಸ್ಯರೊಬ್ಬರು LOC ಬಿಡುಗಡೆ ಬಗ್ಗೆ ಮಾತನಾಡಿದರು. ದೊಡ್ಡ ಪ್ರಮಾಣದ LOC ಇದೆ., ನಾನು ಈ ಸದನಕ್ಕೆ ಹೇಳಿದ್ದೆ ಪ್ರತಿ ತಿಂಗಳೂ ಕೂಡ ನೂರು ಕೋಟಿ ರೂ.ಗಳನ್ನು ಬಿಡುಗಡೆ ಮಾಡುತ್ತೇವೆ ಎಂದು. 2003 june ಅಂತ್ಯಕ್ಕೆ 235 ಕೋಟಿ ರೂ. LOC ಬಿಡುಗಡೆ ಮಾಡಿದ್ದೇವೆ. ಸಾಲದೇನು? ಎಲ್ಲರಿಗಿಂತಲೂ ಇದರ ಬಗ್ಗೆ ಹಣಕಾಸಿನ ಮಂತ್ರಿಗೆ ಸ್ಪಷ್ಟವಾದ ಮಾಹಿತಿ ಇರುತ್ತದೆ. ಹೌದು, ಇದು ಸಾಲದು, ಆದರೂ ಕೂಡ ನಮ್ಮ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ನಾವು ಇದರ ಬಗ್ಗೆ ಯೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ವಸತಿ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯಾಗುತ್ತಿದೆ. 2004 March ಅಂತ್ಯಕ್ಕೆ 10 ಲಕ್ಷ ಮನೆಗಳನ್ನು ಮುಗಿಸಬೇಕೆಂಬ ದೃಢ ನಿರ್ಧಾರವನ್ನು ನಾವು ತೆಗೆದುಕೊಂಡಿದ್ದೇವೆ. ಆ ಒಂದು ಟಾರ್ಗೆಟ್ಟನ್ನು ನಾವು ಸಾಧಿಸುತ್ತೇವೆ ಎಂಬುದನ್ನು ಅತ್ಯಂತ ವಿಶ್ವಾಸದಿಂದ ಹೇಳುತ್ತಾ ಇದ್ದೇನೆ. ಈಗಾಗಲೇ 6.90 ಲಕ್ಷ ಮನೆಗಳ ನಿರ್ಮಾಣ ಮಾಡಿಯಾಗಿದೆ. ಇಂದಿರಾ ಅವಾಸ್ ಯೋಜನೆಯಲ್ಲಿ ನೀವು ಡ್ರಾ ಮಾಡಲಿಲ್ಲ ಎಂದು ಹೇಳಿದರು. ಇಂದಿರಾ ಅವಾಸ್ ಯೋಜನೆ ವಿಷಯವನ್ನು ಸಂಬಂಧಪಟ್ಟ ಸಚಿವರು ತಿಳಿಸುತ್ತಾರೆ. ಆದರೆ ನಾನು ಹಣಕಾಸಿನ ಸಚಿವನಾಗಿ total frame, total picture ನೋಡುತ್ತೇನೆ. ಒಟ್ಟು ಎಲ್ಲಾ ಬಾಬುಗಳಿಂದ ಎಷ್ಟು ಮನೆಗಳನ್ನು ನಾವು ನಿರ್ಮಾಣ ಮಾಡಿದ್ದೇವೆ, 1956 ರಿಂದ 99 ರವರೆಗೆ 4.5 ಲಕ್ಷ ಮನೆಗಳನ್ನು ಕಟ್ಟಿದ್ದಾರೆ. ಈ ಮೂರು ಮುಕ್ಕಾಲು ವರ್ಷದಲ್ಲಿ ನಾವು ಆರುಮುಕ್ಕಾಲು ಲಕ್ಷ ಮನೆಗಳನ್ನು ಕಟ್ಟಿದ್ದೇವೆ ಅಂದರೆ ಅದು ಜನಗಳಿಂದ ಎಂತಹ ಪ್ರತಿಕ್ರಿಯೆ ಬರುತ್ತದೆ. ಅದರಲ್ಲಿಯೂ ಬಡತನದ ರೇಖೆಗಿಂತ ಕೆಳಗಿರುವ ಜನರ ಬಗ್ಗೆ ವಿಶೇಷವಾದಂತಹ ಕಾಳಜಿಯನ್ನು ಪಡೆದಿರುವ ಕಾಂಗ್ರೆಸ್ ಪಕ್ಷ ಎಂತಹ ಒತ್ತನ್ನು ಕೊಟ್ಟಿದೆ ಎಂಬುದಕ್ಕೆ ಇದು ಒಂದು ನಿದರ್ಶನ, ಸಣ್ಣ ನಿದರ್ಶನ ಆಗಲು ಸಾಧ್ಯವಿಲ್ಲ. ಮಹಿಳಾ ಸಬಲೀಕರಣ, women

empowerment ಇದರ ಬಗ್ಗೆ ಮಹತ್ವಾಕಾಂಕ್ಷೆ ಭಾಷಣಗಳನ್ನು ನಾವು ಕೇಳಿದ್ದೇವೆ. ಸ್ತ್ರೀಶಕ್ತಿ ಮೂಲಕ ಇದನ್ನು ಸಾಕ್ಷಾತ್ಕಾರಗೊಳಿಸಲಿಕ್ಕೆ ನಾವು ಪ್ರಯತ್ನಗಳನ್ನು ಮುಂದುವರೆಸಿದ್ದೇವೆ. ಬೆಳಿಗ್ಗೆ ತಾನೇ Britain Deputy High Commissioner ರವರನ್ನು ಭೇಟಿ ಮಾಡಿದ್ದೆ. ಅವರಿಗೆ ನಾನು ಬಿಸಿಯೂಟದ ರೂಪರೇಖೆಗಳನ್ನು ವ್ಯಕ್ತಪಡಿಸಿದಾಗ ಅವರು ಬಹಳ ಸಂತೋಷಪಟ್ಟರು. ಯಾಕೆಂದರೆ ಅವರೂ ಕೂಡ ದೇಶದ ಹಲವಾರು ಭಾಗಗಳಿಗೆ ಹೋಗಿ ನೋಡಿದ್ದಾರೆ, ಹೇಗೆ ಬಡತನದ ರೇಖೆಗಿಂತ ಕೆಳಗಿರುವ ಸಂಸಾರಗಳ ಮಕ್ಕಳು ಸರ್ಕಾರಿ ಶಾಲೆಗಳಿಗೆ ಹೋಗುತ್ತವೆ, ಆದ್ದರಿಂದ ಇದಕ್ಕೆ ವಿಶೇಷವಾದ ಒತ್ತು ಕೊಟ್ಟಿದ್ದೇವೆ, ಇದರಲ್ಲಿ ಏನಾದರೂ ನ್ಯೂನತೆಗಳಿದ್ದರೆ ಅವುಗಳನ್ನು ಸರಿಪಡಿಸಿಕೊಳ್ಳಲು ತಯಾರಾಗಿದ್ದೇವೆ. ರೈತರ ವಿಮೆ, ನಿನ್ನೆ ತಾನೇ ನಾವು Insurance Company ಜೊತೆಯಲ್ಲಿ ಸಮಾಲೋಚನೆ ಮುಂದುವರೆಸಿದೆವು. ಅವರು ಯಾವುದೋ ಒಂದು deadline ಕೊಟ್ಟಿದ್ದಾರೆ, ಆ deadline ಒಳಗೆ ನಾವು ಇವೆಲ್ಲವನ್ನೂ ಸರಿದೂಗಿಸುತ್ತೇವೆ, ಮತ್ತು ತೀರ್ಮಾನ ಮಾಡುತ್ತೇವೆ ಎಂದು ಹೇಳಿದ್ದಾರೆ. ಈ ಸಾಲಿನಲ್ಲಿ 80 ಕೋಟಿ ರೂ.ಗಳನ್ನು provide ಮಾಡಿದ್ದೇವೆ, 21 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ, Insurance claims settle ಮಾಡಿದಂತೆಲ್ಲಾ 165 ಕೋಟಿ ರೂ.ಗಳ ಭಾರ ನಮ್ಮ ಮೇಲೇನು ಬಿದ್ದಿದೆ ಅದನ್ನು ನಿಭಾಯಿಸುತ್ತೇವೆಂಬ ಮಾತನ್ನು ಶ್ರೀ ಎಸ್.ಎಸ್. ಪಾಟೀಲರಿಗೆ ನಾನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಆದರೆ ಇವತ್ತೇ 165 ಕೋಟಿ ರೂ. ಕೊಟ್ಟುಬಿಡಿ ಎಂದರು, ಹಾಗಲ್ಲ, ಸರ್ಕಾರದಲ್ಲಿ ಹಾಗೆ ವ್ಯವಹಾರ ನಡೆಯುವುದಿಲ್ಲ. ಅವರು ಕ್ಲೇಮ್ಸನ್ನು settle ಮಾಡಿದಂತೆಲ್ಲಾ ಸರ್ಕಾರವೂ release ಮಾಡುತ್ತಲೇ ಇರುತ್ತೇವೆ. ಕೆಲವು discrepancies ಇದೆ, second time ಇಷ್ಟು ದೊಡ್ಡ ಪ್ರಮಾಣದಲ್ಲಿ ನಾವು Insurance ಪ್ರಯತ್ನಗಳನ್ನು ಮಾಡಿರುವುದು, ಅದೂ ರೈತರ ಹಿತದೃಷ್ಟಿಯಿಂದ. ಆದ್ದರಿಂದ ಆ discrepancy ಗಳನ್ನು ಸರಿದೂಗಿಸುವುದಕ್ಕೋಸ್ಕರ ನ್ಯೂನತೆಗಳು ಅಡ್ಡಿಆತಂಕಗಳು ನಿರ್ಬಂಧಗಳು ಇದ್ದರೆ ಅವುಗಳನ್ನು ಸರಿಪಡಿಸುವುದಕ್ಕೋಸ್ಕರ ಅವರನ್ನು ನಾನು ವಿಶೇಷವಾಗಿ ಬೆಂಗಳೂರಿಗೆ ಬರಬೇಕು ಎಂದು ಕೇಳಿದ್ದೆ. ನಮ್ಮ Agriculture Minister ಹಿಂದೆ ದೆಹಲಿಗೆ ಹೋಗಿದ್ದಾಗ ಸಂಬಂಧಪಟ್ಟವರನ್ನು ಅಲ್ಲಿ ಭೇಟಿ ಮಾಡಿದ್ದರು. ನಿನ್ನೆ ಅವರು ಬಂದು ನಾವೆಲ್ಲರೂ ಒಂದು ಒಡಂಬಡಿಕೆಯಿಂದ ವಿಚಾರವನ್ನು ರೂಪಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಮತ್ತು ಭಾರತ ಸರ್ಕಾರವನ್ನು ನಾವು ಕೇಳಿಕೊಂಡಿದ್ದೇವೆ, ಈ cut-off date ಏನಿದೆ khariff 2002 ಗೆ 31.7.2003ಕ್ಕೆ ಮುಗಿಯುತ್ತದೆ ಅದನ್ನು ಇನ್ನೊಂದು ತಿಂಗಳು extend ಮಾಡಬೇಕೆಂದು ವಿಶೇಷವಾದ ಪ್ರಾರ್ಥನೆ ಅವರಲ್ಲಿ ಮಾಡಿದ್ದೇವೆ. ಅವರು ಮಾಡುತ್ತಾರೆ ಎಂಬ ವಿಶ್ವಾಸ ನಮಗಿದೆ. ಬರದ ಬಗ್ಗೆ ಬಹಳ ಸದಸ್ಯರು ಮಾತನಾಡಿದ್ದಾರೆ. ಈಗ ತಾನೇ ನಮ್ಮ ಗೃಹಸಚಿವರು ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆಗಳನ್ನು ಮಾಡಿಕೊಂಡು ಬಂದಿದ್ದಾರೆ. ಇನ್ನೂ ಹೆಚ್ಚು ಆಹಾರಧಾನ್ಯಗಳು ನಮಗೆ ಬೇಕು. ಏಕೆಂದರೆ ಇಡೀ ದೇಶದಲ್ಲಿ ರಾಜಾಸ್ತಾನದಲ್ಲಿ ಒಳ್ಳೆಯ ಮಳೆಯಾಗಿದೆ, ಮಧ್ಯಪ್ರದೇಶದಲ್ಲಿ ಒಳ್ಳೆಯ ಮಳೆಯಾಗಿದೆ.

**1.10 ಪಿಎಂ**

ಚತ್ತೀಸ್‌ಗಡ್‌ದಲ್ಲಿ ಒಳ್ಳೆಯ ಮಳೆಯಾಗಿದೆ. ಒರಿಸ್ಸಾದಲ್ಲಿ ಪ್ರವಾಹಗಳು. ಡೆಲ್ಲಿಯಲ್ಲಿ ಪ್ರವಾಹ. ಆದರೆ ಕರ್ನಾಟಕದಲ್ಲಿ ಮಾತ್ರ ಇವತ್ತು ಈ ಮಳೆ ಬಗ್ಗೆ ಇನ್ನೂ ಪ್ರಶ್ನಾರ್ಥಕ ಚಿಹ್ನೆಗಳಿವೆ. ನಮ್ಮ ರಿಸರ್‌ವಾಯರ್ಸ್ ಲೆವೆಲ್ ಕಳೆದ ವರ್ಷಕ್ಕಿಂತ ಕೊಂಚ ಉತ್ತಮವಾಗಿದ್ದರೂ ಕೂಡ ಇನ್ನೂ ದೊಡ್ಡ ಕ್ವೆಶ್ಚನ್ ಮಾರ್ಕ್

ಇದೆ. ಈ ವರ್ಷದ ಮಳೆ ಹೇಗೆ ಬೀಳುತ್ತದೆ ಎನ್ನತಕ್ಕಂಥದ್ದು ಆದ್ದರಿಂದಲೇ ನಾವು ಮುಂಜಾಗ್ರತೆಯನ್ನು ವಹಿಸಿಕೊಂಡು ಈ ಬರವನ್ನು ಎದುರಿಸಬೇಕಾಗಿದ್ದರೆ ಕೇಂದ್ರ ಸರ್ಕಾರದ ಸಹಾಯ ಬೇಕಾಗುತ್ತದೆ. ನಾನು ಬಹಿರಂಗವಾಗಿ ಹೇಳಿದ್ದೇನೆ, ಬಹಿರಂಗಸಭೆಗಳಲ್ಲಿ ಹೇಳಿದ್ದೇನೆ, ಒಳಗೆ ಹೇಳಿದ್ದೇನೆ, ಕೇಂದ್ರ ಸರ್ಕಾರದವರು ನಮ್ಮ ಸಹಾಯಕ್ಕೆ ಬಂದಿದ್ದಾರೆಂದು. ಈ ವರ್ಷದ ಆರೂವರೆ ಲಕ್ಷ ಟನ್ ಆಹಾರ ಧಾನ್ಯಗಳನ್ನು ಕೊಡದೇ ಹೋಗಿದ್ದರೆ ನಮ್ಮ ಸ್ಥಿತಿ ಬಹಳ ಕೆಟ್ಟದ್ದಾಗಿರುತ್ತಿತ್ತು. ಯಾವ ಯಾವ ರಾಜ್ಯಗಳಿಗೆ ಎಷ್ಟು ಕೊಟ್ಟರು ಎನ್ನತಕ್ಕಂಥ ಪ್ರಶ್ನೆಗೆ ನಾನು ಹೋಗದೆ ನಮ್ಮ ರಾಜ್ಯದ ಬಗ್ಗೆ ನಾವು ನೀವು ಸೀಮಿತಗೊಳಿಸಿ ಮಾತನಾಡತಕ್ಕಂಥದ್ದು ಬುದ್ಧಿವಂತಿಕೆ. ಆದರೆ ಕೆಲವೊಂದು ಬಾರಿ ಏನಾಗುತ್ತದೆ, ಪ್ರವೋಕ್ ಮಾಡುತ್ತಾರೆ, ನೀವು ಸರಿಯಾಗಿ ಚಂಚಲಿಲ್ಲ, ನೀವು ಸರಿಯಾಗಿ ಚರಣೆ ಮಾಡಲಿಲ್ಲ ಹಾಗೆ ಎಂದು ಹೇಳಿ. ಅದಕ್ಕೆ ಕೌಂಟರ್ ಮಾಡತಕ್ಕ ಉದ್ದೇಶದಿಂದ ನಾಲ್ಕು ಮಾತುಗಳನ್ನು ಹೆಚ್ಚು ಆಡಿರಬಹುದು ಅಥವಾ ನಾಲ್ಕು ಮಾತುಗಳನ್ನು ಕಡಿಮೆ ಆಡಿರಬಹುದು. ಆದರೆ ಕೇಂದ್ರ ಸರ್ಕಾರ ಇದರ ಬಗ್ಗೆ ತೆಗೆದುಕೊಂಡಿರತಕ್ಕ ಅಬ್ಜೆಕ್ಟೀವ್ ನಿಲುವೇನು ಇದೆ, ಅದರಿಂದ ಅವರು ವಿಚಲಿತರಾಗಲಿಲ್ಲ ಎನ್ನತಕ್ಕಂಥದ್ದು ನನ್ನ ಅಭಿಪ್ರಾಯ. ಈ ವರ್ಷ ಬಹುಶಃ ಕೇವಲ ಕರ್ನಾಟಕ ಒಂದಕ್ಕೆ ಮಾತ್ರ ಅವರು ಆಹಾರಧಾನ್ಯಗಳನ್ನು ಈ ಒಂದು ರೋಜ್‌ಗಾರ್ ಸ್ಪೆಷಲ್ ಕಾಂಪೊನೆಂಟ್ ಈ ಸ್ಕೀಮ್‌ನಲ್ಲಿ ಕೊಡಬೇಕಾಗಿ ಬರುತ್ತೋ ಏನೋ ಎಂದು ಹೇಳಿ ಇದೆ. ಆದ್ದರಿಂದ ನಾವು ಕೇಳಿರತಕ್ಕ ಅಡಿಷನಲ್ ದವಸಧಾನ್ಯ ಏನು ಇದೆ, ಮತ್ತು ಫೈನಾನ್ಸಿಯಲ್ ಸಪೋರ್ಟ್ ಏನು ಇದೆ ಅದನ್ನು ಕೊಡಬೇಕು ಹಾಗೆ ಎಂದು ಹೇಳಿ ಈಗಾಗಲೇ 126 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳು ಹಾಗೆ ಎಂದು ಹೇಳಿ ಘೋಷಣೆಯನ್ನು ಮಾಡಿದ್ದೇವೆ. 32.37 ಕೋಟಿ ರೂಪಾಯಿ central share of CSCRF ಸೆಕೆಂಡ್ ಇನ್‌ಸ್ಟಾಲ್‌ಮೆಂಟ್, ಅದನ್ನು ತತ್‌ಕ್ಷಣ ರಿಲೀಸ್ ಮಾಡಬೇಕು ಹಾಗೆ ಎಂದು ಹೇಳಿ ಅವರನ್ನು ಕೇಳಿದ್ದೇವೆ. ಮತ್ತು 627 ಕೋಟಿ 1/3 of the total assistance which we have sought from Government of India, ಅದನ್ನೂ ಕೊಡಬೇಕು ಹಾಗೆ ಎಂದು ಹೇಳಿ ಹೇಳಿದ್ದೇವೆ. 3 ಲಕ್ಷ 36 ಸಾವಿರ ಟನ್ ಆಹಾರಧಾನ್ಯಗಳನ್ನು ಕೊಡಬೇಕೆಂದು ಹೇಳಿದ್ದೇವೆ. ನಿನ್ನೆ ತಾನೇ ಮಾನ್ಯ ಗೃಹಸಚಿವರ ನೇತೃತ್ವದಲ್ಲಿ 16 ಜನ ಸಂಸತ್ ಸದಸ್ಯರು ನಮ್ಮ ಡೆವಲಪ್‌ಮೆಂಟ್ ಕಮಿಷನರ್, ರೆವಿನ್ಯೂ ಕಮಿಷನರ್, ಅವರು ಕೇಂದ್ರದ ಅಗ್ರಿಕಲ್ಚರ್ ಮಿನಿಸ್ಟರ್ ಶ್ರೀ ರಾಜಾನಾಥ ಸಿಂಗ್ ಅವರನ್ನು ಭೇಟಿ ಮಾಡಿ, ಯೋಜನಾ ಆಯೋಗದ ಉಪಾಧ್ಯಕ್ಷರಾದ ಕೆ.ಸಿ.ಪಂತ್ ಅವರನ್ನು ಭೇಟಿ ಮಾಡಿ ಅವರಿಗೆ ಬ್ರೀಫ್ ಮಾಡಿದ್ದೇವೆ. ಬಹಳ ತಾಲ್ಲೂಕುಗಳಲ್ಲಿ ನಮ್ಮ ನಿರೀಕ್ಷೆಗೆ 30 ಪರ್‌ಸೆಂಟ್ ಕಡಿಮೆ ಹೇಗೆ ಮಳೆ ಬಂದಿದೆ ಎನ್ನತಕ್ಕಂಥದ್ದನ್ನು ಅವರ ಗಮನಕ್ಕೆ ತಂದಿದ್ದೇವೆ. ಅದರ ಬಗ್ಗೆ ಒಂದು ಮೆಮೊರ್ಯಾಂಡಂನ್ನು ಕೊಟ್ಟಿದ್ದೇವೆ. ಆದ್ದರಿಂದ ಮಾನ್ಯ ರಾಜಾನಾಥ ಸಿಂಗ್ ಅವರು ಇಲ್ಲಿಗೆ ಬಂದಿದ್ದರು. ರೆವ್ಯೂ ಮಾಡಿದರು. ಇದಕ್ಕೆ ಸಂಬಂಧಪಟ್ಟಂಥ ಕೇಂದ್ರದ ಸೆಕ್ರೆಟರಿಯವರು ಮೂರು-ನಾಲ್ಕು ಪ್ರದೇಶಗಳಿಗೆ ಹೋಗಿ ಬಂದರು. ಅವರು ಭೇಟಿ ಮತ್ತು ಅವರ ರೆವ್ಯೂ ಇದರ ಹಿನ್ನೆಲೆಯಲ್ಲಿ ಅವರು ನಮ್ಮ ಈ ಹೊಸ ಮೆಮೊರ್ಯಾಂಡಂನ್ನು ಏನು ಕೊಟ್ಟಿದ್ದೇವೆ, ಆ ಮೆಮೊರ್ಯಾಂಡಂ ಬಗ್ಗೆ ಇನ್ನು ಎರಡು-ಮೂರು ದಿವಸದಲ್ಲಿ ನಾವು ನಿರ್ಣಯ ತೆಗೆದುಕೊಳ್ಳುತ್ತೇವೆ ಹಾಗೆ ಎಂದು ಹೇಳಿ ಅವರು ಹೇಳಿರತಕ್ಕಂಥದ್ದು ನಮ್ಮಲ್ಲಿ ಕೊಂಚ ಆಸೆ ಚಿಗುರಲಿಕ್ಕೆ ಅವರು ದಾರಿ ಮಾಡಿಕೊಟ್ಟಿದ್ದಾರೆ ಹಾಗೆ ಎಂದು ಹೇಳಿ ನಾನು ನಿರೀಕ್ಷೆ ಮಾಡಿದರೆ ಅದು ತಪ್ಪಾಗಲಾರದು ಹಾಗೆ ಎಂದು ಹೇಳಿ ನಾನು

ಭಾವಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ತರಹ ಕೆಲವು ವಿಚಾರಗಳ ಬಗ್ಗೆ ಸಂಬಂಧಪಟ್ಟಂಥ ಇಲಾಖೆಯವರು ಸದನ ಅವರಿಗೆ ಅವಕಾಶವನ್ನು ಒದಗಿಸಿದಂಥ ಕಾಲದಲ್ಲಿ ಅದರ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲುತ್ತಾರೆ. ಬೀದರ್‌ನಲ್ಲಿ ಪಶು ವಿಶ್ವವಿದ್ಯಾನಿಲಯ ಇನ್ನೂ ಪ್ರಾರಂಭ ಮಾಡಿಲ್ಲ ಹಾಗೆ ಎಂದು ಹೇಳಿದರು. ಆದರೆ ಅದು ಬಜೆಟ್ ಘೋಷಣೆ ಅದು. ಆ ಬಜೆಟ್ ಘೋಷಣೆಯನ್ನು ನಾವು ಅನುಷ್ಠಾನಕ್ಕೆ ತರಲಿಕ್ಕೆ ಹಲವಾರು ಏರ್ಪಾಡುಗಳನ್ನು ಮಾಡುತ್ತಿದ್ದೇವೆ. ಇನ್ನು ವಿದ್ಯುತ್ ವಿಚಾರ. ಲಿಂಗನಮಕ್ಕಿಗೆ ಕೊಂಚ ಪ್ರಮಾಣದಲ್ಲಿ ನೀರು ಬರುತ್ತಿರತಕ್ಕಂಥದ್ದು ಈ ವರ್ಷ ಉಂಟಾಗಬಹುದಾದಂಥ ಆಶಾದಾಯಕವಾದಂಥ ಬೆಳವಣಿಗೆ ಕಾರಣವಾಗಬಹುದು ಹಾಗೆ ಎಂದು ಹೇಳಿ ನನ್ನ ನಿರೀಕ್ಷೆ ಇದೆ. ಕಳೆದ ವರ್ಷಕ್ಕೆ ಈ ವರ್ಷಕ್ಕೆ ಹೋಲಿಸಿ ನೋಡಿದಾಗ ಕಳೆದ ವರ್ಷವನ್ನು ನಾವು rock bottom ಎಂದು ಕರೆಯುತ್ತೇವೆ; ಕೊಂಚ ಮಟ್ಟಿಗೆ ಉತ್ತಮವಾಗಿದೆ. ಆಗಸ್ಟ್ ತಿಂಗಳಲ್ಲಿ ಹೇಗೆ ಮಳೆ ಪರಿಣಮಿಸುತ್ತದೆ, ಅದರ ಮೇಲೆ ನಾವು ನಮ್ಮ ಮುಂದಿನ ಸಾಲಿನ ಈ ವಿದ್ಯುತ್ ಸಮಸ್ಯೆಯನ್ನು ಸರಿಪಡಿಸಬಹುದು. ಇಷ್ಟನ್ನು ತಮ್ಮಲ್ಲಿ ಹೇಳಿಕೊಂಡು ಸರ್ವೇಸಾಧಾರಣವಾಗಿ ಕೊಟ್ಟಿರತಕ್ಕಂಥ ಈ ಮುಂಗಡಪತ್ರದ ಬಗ್ಗೆ ಈ ಸದನದಲ್ಲಿ ಕಂಡುಬಂದಿರತಕ್ಕಂಥ ಒಳ್ಳೆಯ ಭಾವನೆಗಳಿಗೆ ನಾನು ಅಭಾರಿಯಾಗಿದ್ದೇನೆ ಮತ್ತು ಈ ಕೆಲಸವನ್ನು ಮುಂದುವರಿಸಲಿಕ್ಕೆ ಈ ಹಣಕಾಸನ್ನು ಮಂಜೂರು ಮಾಡಬೇಕು ಹಾಗೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೇ, ಇವತ್ತು ಈ ಭಾಗದಲ್ಲಿದ್ದಂಥ ಪ್ರತಿಪಕ್ಷದ ಶಾಸಕರು ಏನು ಹಲವಾರು ವಿಚಾರಗಳನ್ನು ಈ ಒಂದು ಡಿಮ್ಯಾಂಡ್ಸ್ ಮೇಲೆ ಚರ್ಚೆ ಸಂದರ್ಭದಲ್ಲಿ ಹೇಳಿದ್ದರು, ಹಲವಾರು ಸ್ಪಷ್ಟೀಕರಣವನ್ನು ಕೊಟ್ಟರು. ಅದರಲ್ಲಿ ಪ್ರಮುಖವಾಗಿ ಇಲ್ಲಿ ಈ ರಾಜ್ಯದ ಒಂದು ಸಾಲ ಎಷ್ಟಿದೆ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದು 26 ಸಾವಿರ ಕೋಟಿ ರೂಪಾಯಿ. ಆದರೆ ವಿಧಾನ ಪರಿಷತ್ತಿನಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುವ ಸಂದರ್ಭದಲ್ಲಿ ಸರ್ಕಾರದವರು ಒಟ್ಟು ರಾಜ್ಯದ ಸಾಲದ ಭಾರ 39 ಸಾವಿರ ಕೋಟಿ ರೂ. ಎಂದು ಹೇಳಿ ವಿಧಾನ ಪರಿಷತ್ತಿನಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಟ್ಟಂಥ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂದಂಥದ್ದು ಇದೆ. ಹೀಗಾಗಿ 39 ಸಾವಿರ ಕೋಟಿ ರೂ. ಸರಿಯೇ ಅಥವಾ 26 ಸಾವಿರ ಕೋಟಿ ರೂ. ಸರಿಯೋ ಅಥವಾ ರಾಜ್ಯ ಸರ್ಕಾರ ಇವತ್ತು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸರ್ಕಾರ ಬಂದಮೇಲೆ 26 ಸಾವಿರ ಕೋಟಿ ರೂ. ಮಾಡಿರತಕ್ಕಂಥದ್ದೋ ಅದರಲ್ಲಿ ಹಿಂದಿನ ಸರ್ಕಾರದ 15 ಸಾವಿರ ಕೋಟಿ ರೂಪಾಯಿ ಇನ್‌ಕ್ಲೂಡ್ ಆಗಿ 39 ಸಾವಿರ ಕೋಟಿ ರೂಪಾಯಿಯಾಗಿದೆ. ಅಂದರೆ ಈಗ ಇಡೀ ರಾಷ್ಟ್ರದಲ್ಲಿ ಅತ್ಯಂತ ಹೆಚ್ಚು ಸಾಲ ಮಾಡಿದಂಥ ಸರ್ಕಾರಗಳಲ್ಲಿ ನಮ್ಮದು 5–6ನೇ ಸ್ಥಾನದಲ್ಲಿದೆ. ಅದನ್ನೂ ತಾವು ಪರಿಗಣನೆಗೆ ತೆಗೆದುಕೊಳ್ಳಬೇಕು ಎನ್ನುವಂಥದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮತ್ತೆ ಇನ್ನೊಂದು ಇದು ರೀಪೇಮೆಂಟ್ ಬಹಳ ಮುಖ್ಯವಾದುದು. ರೀಪೇಮೆಂಟ್‌ನ್ನು ಯಾವರೀತಿ ಮಾಡುತ್ತೇವೆ ಎನ್ನುವಂಥದ್ದು ಬಹಳ ಮುಖ್ಯವಾದುದು. ಏಕೆಂದರೆ ಕೇಂದ್ರ ಸರ್ಕಾರವೂ ಸಾಕಷ್ಟು ಸಾಲವನ್ನು ಇಲ್ಲಿಯವರೆಗೂ ತೆಗೆದುಕೊಂಡು ಬಂದಿದೆ. ಆದರೆ ಬಹುಶಃ ಎನ್‌ಡಿಎ ಸರ್ಕಾರ ಬಂದಮೇಲೆ, ವಾಜಪೇಯಿ ನೇತೃತ್ವದ ಸರ್ಕಾರ ಬಂದಮೇಲೆ ಬಹುಮುಖ್ಯವಾದಂಥ ಸಾಲಗಳನ್ನು ಮರುಪಾವತಿ ಮಾಡುವಂಥದ್ದು ಇವತ್ತು ಆಗುತ್ತಿದೆ. ಮತ್ತು ಮೊನ್ನೆ ಮಾನ್ಯ ಪ್ರಧಾನಮಂತ್ರಿಗಳದ್ದು ಒಂದು ಸ್ಟೇಟ್‌ಮೆಂಟ್ ಬಂದಿತ್ತು; ಹೆಚ್ಚು

ಯಾವುದು ಬಡ್ಡಿ ಇದೆ, ಆ ಸಾಲವನ್ನು ಪ್ರಾಮುಖ್ಯವಾಗಿ ನಾವು ಮರುಪಾವತಿ ಮಾಡುವಂಥ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇವೆ ಎನ್ನುವಂಥ ಮಾತು ವಾಜಪೇಯಿಯವರ ಕಡೆಯಿಂದ ಬಂದಿದೆ. ಹೀಗಾಗಿ ರಾಜ್ಯ ಸರ್ಕಾರ ನಾವು ಯಾವ ರೀತಿಯಾಗಿ ಸಾಲವನ್ನು ಮಾಡುತ್ತೇವೆ, ಅದೇ ರೀತಿ ರೀಪೇಮೆಂಟ್ ಮಾಡುವಂಥದ್ದರಲ್ಲಿ ಅದರ ಬಗ್ಗೆಯೂ ಒಂದು ಪ್ರಕ್ರಿಯೆಯನ್ನು ತೋರಿಸಿದರೆ ನಮ್ಮ ಒಂದು ಆರ್ಥಿಕ ಸ್ಥಿತಿ ಸರಿ ಇರಲಿಕ್ಕೆ ಸಾಧ್ಯ ಇದೆ ಎನ್ನುವಂಥ ನನ್ನ ಭಾವನೆಗಳನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ಮತ್ತು ಇನ್ನೊಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಈ ಒಂದು ಆರ್ಡಿನೆನ್ಸ್ ಹೊರಡಿಸಿದರೂ ಇವತ್ತು ಈ ವ್ಯಾಟ್ ಜಾರಿಗೆ ಬರಲಿಲ್ಲ, ವ್ಯಾಟ್ ಜಾರಿಗೆ ಬಂದಿದ್ದರೆ ಈ ಆರ್ಡಿನೆನ್ಸ್ ಹೊರಡಿಸುವಂಥ ಪ್ರಶ್ನೆಯೇ ಬರುತ್ತಿರಲಿಲ್ಲ ಎನ್ನುವಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಯಾವಾಗ ಸದನ ಇರಲಿಲ್ಲ, ಆ ಸಂದರ್ಭದಲ್ಲಿ ಆರ್ಡಿನೆನ್ಸ್ ಹೊರಡಿಸಬಹುದು. ಬಹುಶಃ ನನಗೆ ಅನಿಸುತ್ತದೆ, ನಮ್ಮ ರಾಜ್ಯದ ಈ ಒಂದು ಇತಿಹಾಸದಲ್ಲಿಯೇ ಕಾನೂನನ್ನು ತರಲಾರದೇ ಬಜೆಟ್ ಮಂಡನೆ ಆದ ಮೇಲೆ ಒಂದು ಆರ್ಡಿನೆನ್ಸ್ ಮುಖಾಂತರ ಟ್ಯಾಕ್ಸನ್ನು ಇನ್‌ಕ್ರೀಸ್ ಮಾಡಿರುವಂತಹದ್ದು, ಅದು ಒನ್ ಪರ್ಸೆಂಟ್ ಇರಬಹುದು, ಟೂ ಪರ್ಸೆಂಟ್ ಇರಬಹುದು; ಇದು ಫಸ್ಟ್ ಟೈಮ್ ಎಂದು ನಾನು ಹೇಳುತ್ತಿದ್ದೇನೆ. ಇದಕ್ಕಾಗಿ ಒಂದು ಸ್ಪೆಷಲ್ ಸೆಕ್ಷನ್ ತಾವು ಕರೆಯಬಹುದಾಗಿತ್ತು. ಕರೆದು ಚರ್ಚೆ ಮಾಡಿ ಎರಡು ದಿವಸದಲ್ಲಿ ಅದನ್ನು ಪಾಸ್ ಮಾಡಿಕೊಳ್ಳಬಹುದಾಗಿತ್ತು. ಹೊಸದಾಗಿ ಕಾನೂನು ತರಬಹುದಾಗಿತ್ತು. ಅದು ಆಗಲಿಲ್ಲ. ಆ ಕೊರತೆ ಇದೆಯೆಂದು ನಾನು ಹೇಳುತ್ತಿದ್ದೇನೆ. ಮತ್ತು ಪರಿಣಾಮ ಏನಾಗುತ್ತದೆ, ಈ ಒನ್ ಪರ್ಸೆಂಟ್, ಹೆಚ್ಚಿಸಿದ ಪರಿಣಾಮ ಏನಾಗುತ್ತದೆ ಎನ್ನುವಂತಹದನ್ನು ನಾವು ಚರ್ಚೆ ಮಾಡಬೇಕಾಗುತ್ತದೆ. ಆ ಒಂದು ಬಿಲ್ ತಂದಾಗ ಅದರ ಬಗ್ಗೆ ಚರ್ಚೆ ಮಾಡೋಣ. ಏಕೆಂದರೆ ಅಕ್ಕಪಕ್ಕದ ರಾಜ್ಯಗಳಲ್ಲಿ ಆ ಟ್ಯಾಕ್ಸ್ ಸಿಸ್ಟಂ ಎಷ್ಟು ಇದೆ ಎಂಬುದನ್ನು ನೋಡಬೇಕಾಗುತ್ತದೆ. ಇವತ್ತು ನಮ್ಮಲ್ಲಿ ಜಾಸ್ತಿ ಆಗಿ ನಾಳೆ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರದಲ್ಲಿ ಒಂದೊಂದು ಐಟಂ ಮೇಲೆ ಆ ಟ್ಯಾಕ್ಸ್ ಕಡಿಮೆ ಇದ್ದಾಗ ಮಾರುಕಟ್ಟೆಯೆಲ್ಲಾ ಅಲ್ಲಿ ಶಿಫ್ಟ್ ಆಗುವಂತಹ ಛಾನ್ಸ್ ಇದೆ. ಅದರ ಪರಿಣಾಮಗಳೂ ಇವೆ, ದುಷ್ಪರಿಣಾಮಗಳೂ ಇವೆ. ಹೀಗಾಗಿ ಅದರ ಬಗ್ಗೆ ಹೆಚ್ಚು ಚಿಂತನೆ ಆಗಬೇಕಾಗಿದೆ; ಬಿಲ್ ಬಂದಂತಹ ಸಂದರ್ಭದಲ್ಲಿ ನಾವು ಹೆಚ್ಚು ಚರ್ಚೆ ಮಾಡುವವರು ಇದ್ದೇವೆ ಎಂಬ ಮಾತನ್ನು ಹೇಳುತ್ತೇನೆ. ಇಲ್ಲಿ ಒಂದೆರಡು ವಿಷಯಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ತಾವು ಬಜೆಟ್‌ನಲ್ಲಿ ಒಂದು ಪ್ರಾಮಿಸ್ ಮಾಡಿದ್ದೀರಿ. ಅದರ ಪ್ರಕಾರ ಈ ಒಂದು ರೈತರ ಐಪಿ ಸೆಟ್ಸ್ ಏನು ಇವೆ ಅವುಗಳ ಮೇಲಿನ ಅಸಲು ಬಾಕಿ ಬಿಲ್ಲನ್ನು ಜುಲೈ 31ರೊಳಗೆ ತುಂಬಿದರೆ ಅಲ್ಲಿಯವರೆಗೂ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂಬ ಮಾತನ್ನು ತಾವು ಹೇಳಿದ್ದೀರಿ. ಈಗಾಗಲೇ ಅದರ ಒಂದು ಸದುಪಯೋಗವನ್ನು ಸಾಕಷ್ಟು ಜನ, ಲಕ್ಷಾಂತರ ಜನ ರೈತರು ತೆಗೆದುಕೊಂಡಿದ್ದಾರೆ. ಆದರೆ ಇವತ್ತು ಏನಾಗುತ್ತಿದೆ ಅಂದರೆ ಬರಗಾಲ ಮತ್ತೆ ಮೂರನೇ ವರ್ಷಕ್ಕೆ ಕಾಲಿಡುತ್ತಿದೆ. ಇದನ್ನು ತಾವೇ ಹೇಳಿದಿರಿ, ಒಪ್ಪಿಕೊಳ್ಳುತ್ತಿದ್ದೀರಿ; ಮತ್ತು ನಿನ್ನೆ ಪತ್ರಿಕೆಯಲ್ಲಿ ಕೂಡ ಬಂದಿದೆ. 126 ತಾಲ್ಲೂಕುಗಳನ್ನು ತಾವು ಬರಗಾಲ ಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಿದ್ದೀರಿ. ಹೀಗಾಗಿ ಇವತ್ತು ಐಪಿ ಸೆಟ್ ಹೊಂದಿದಂತಹ ರೈತರ ಒಂದು ಬೇಡಿಕೆ ಇದೆ. ಈ ಒಂದು ಬಡ್ಡಿ ಮನ್ನಾ ಮಾಡುವ ಯೋಜನೆ ಏನು ಇದೆ ಅದಕ್ಕೆ ಬದಲು ನಾವು ಕೇಳುತ್ತಿರುವುದು ಬಾಕಿ ಇದ್ದಂತಹ ಅಸಲನ್ನೇ ಮನ್ನಾ ಮಾಡಬೇಕು

ಎಂದು. ಆ ಬೇಡಿಕೆ ನಮ್ಮದು ಇದೆ. ಆದರೆ ಸರ್ಕಾರ ಈಗ ಕೊಟ್ಟಂತಹ ಉತ್ತರದ ಧೋರಣೆ ನೋಡಿದರೆ, 31.7.03ರೊಳಗೆ ಅಸಲು ಪಾವತಿ ಮಾಡಿದರೆ ಬಡ್ಡಿ ಮನ್ನಾ ಮಾಡುವುದಾಗಿ ಹೇಳಿದ್ದೀರಿ. ಪೂರ್ತಿಯಾಗಿ ಮನ್ನಾ ಮಾಡಬೇಕು. ಏಕೆಂದರೆ ಮೊನ್ನೆ ನಡೆದಂತಹ ಬರಗಾಲದ ವಿಷಯದ ಚರ್ಚೆಯ ಸಂದರ್ಭದಲ್ಲಿ ಮತ್ತು ಸರ್ಕಾರ ಹಾಗೂ ಪ್ರತಿಪಕ್ಷದ ನಾಯಕರ ನಡುವೆ ಚರ್ಚೆ ನಡೆದಂತಹ ಸಂದರ್ಭದಲ್ಲಿ ಆ ಒಂದು ಐದನೇ ನಿರ್ಣಯದಲ್ಲಿ ಐಪಿ ಸೆಟ್ಟನ್ನು ಉಪಯೋಗಿಸುತ್ತಿರುವ ರೈತಾಪಿ ವರ್ಗದ ಜನರ ವಿದ್ಯುತ್ ಬಾಕಿಯ ಬಗ್ಗೆ ಮುಂಗಡ ಪತ್ರದ ಚರ್ಚೆಯ ಸಂದರ್ಭದಲ್ಲಿ ಸೂಕ್ತ ಉತ್ತರವನ್ನು ಕೊಡಲಾಗುವುದೆಂದು ಸರ್ಕಾರ ಒಪ್ಪಿದೆ ಎನ್ನುವಂತಹದ್ದು ಇದೆ. ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಬೇಕಾಗಿತ್ತು. ಮೊನ್ನೆ ನಾವು ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಹೇಳಬೇಕಾಗಿತ್ತು. ಹೀಗಾಗಿ ನಾವು ಸರ್ಕಾರಕ್ಕೆ ಇವತ್ತು ಒತ್ತಾಯ ಮಾಡುವುದು ಏನೆಂದರೆ ಇವತ್ತು ಬರಗಾಲ ಪರಿಸ್ಥಿತಿ ಮುಂದುವರೆದಿದೆ. ರೈತರು ಸಂಕಷ್ಟದಲ್ಲಿ ಇದ್ದಾರೆ. ಈ ಐಪಿ ಸೆಟ್‌ನ ಬಾಕಿ ಏನು ಇದೆ ಅದನ್ನು ದಯವಿಟ್ಟು ಮನ್ನಾ ಮಾಡುವಂತಹ ಕ್ರಮವನ್ನು ಸರ್ಕಾರ ಕೈಗೊಂಡರೆ ನಮ್ಮ ರೈತಾಪಿ ವರ್ಗಕ್ಕೆ ಬಹಳ ದೊಡ್ಡ ಅನುಕೂಲವನ್ನು ಮಾಡಿದಂತಾಗುತ್ತದೆ. ಆ ಒಂದು ದಿಸೆಯಲ್ಲಿ ಸರ್ಕಾರ ಒಂದು ದಿಟ್ಟ ಹೆಜ್ಜೆಯನ್ನು ಇಡಬೇಕು. ಕೊನೆಯ ಪಕ್ಷ ಈ ಬಡ್ಡಿ ಮನ್ನಾ ಮಾಡುವಂತಹದು ಏನು ಇದೆ, 31.7.03ರ ಅವಧಿ ಏನು ಇದೆ, ಆ ಅವಧಿಯನ್ನು ಕನಿಷ್ಟ ಪಕ್ಷ ಇನ್ನೂ ಎರಡು ಮೂರು ತಿಂಗಳಾದರೂ ವಿಸ್ತರಣೆ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ತಕ್ಷಣ ಒಂದು ಸ್ಪಷ್ಟೀಕರಣ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಬೆಳೆ ವಿಮೆ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಬೆಳೆ ವಿಮೆಗೆ ಪ್ರೀಮಿಯಂ ತುಂಬುವಂತಹ ಅವಧಿ ಸಹ ನಾಳೆಗೇ ಅಂದರೆ 31.7.03ಕ್ಕೆ ಮುಗಿಯುತ್ತದೆ. ಹೀಗೆ ಎಷ್ಟೋ ಕಡೆಯಿಂದ ನನಗೆ ಫೋನುಗಳು ಬರುತ್ತಿವೆ. ಆ ಬ್ಯಾಂಕುಗಳ ಮುಂದೆ ದೊಡ್ಡ ದೊಡ್ಡ ಸಾಲುಗಳು ನಿಂತಿವೆ. ಸಾವಿರಾರು ಸಂಖ್ಯೆಯಲ್ಲಿ ರೈತಾಪಿ ಜನರು ಆ ಪ್ರೀಮಿಯಂ ತುಂಬಲು ಕ್ಯೂ ಹಚ್ಚುತ್ತಿದ್ದಾರೆ. ಕೆಲವೊಂದು ಏನೋ ಟೆಕ್ನಿಕಲ್ ತೊಂದರೆಗಳು ಇವೆ. ಉತ್ತರ ಸರಿಯಾಗಿ ಸಿಗುತ್ತಿಲ್ಲ, ಆ ಮಾಹಿತಿಗಳು ಸಿಗುತ್ತಿಲ್ಲ. ಹೀಗಾಗಿ ಆ ಪ್ರೀಮಿಯಂ ತುಂಬಲಿಕ್ಕೂ ನಮ್ಮ ರೈತಾಪಿ ವರ್ಗದವರಿಗೆ ಇವತ್ತು ಅವಕಾಶ ಬೇಕಾಗಿದೆ, ಅವಧಿ ಬೇಕಾಗಿದೆ. ಈಗಾಗಲೇ ತಾವು ಒಂದು ತಿಂಗಳ ಅವಧಿಯ ವಿಸ್ತರಣೆಗಾಗಿ ನಾವು ಪತ್ರವನ್ನು ಬರೆದಿದ್ದೇವೆ ಎಂದು ಹೇಳಿದಿರಿ. ಅದಕ್ಕೆ ಇನ್‌ಸಿಸ್ಟ್ ಮಾಡಬೇಕು. ಇನ್‌ಸಿಸ್ಟ್ ಮಾಡಿ ಆ ಒಂದು ತಿಂಗಳ ಅವಧಿಯನ್ನು ವಿಸ್ತರಣೆ ಮಾಡಲಿಕ್ಕೆ ಎಲ್ಲಾ ರೀತಿಯ ಪ್ರಯತ್ನ ಸರ್ಕಾರದ ಕಡೆಯಿಂದ ಆಗಬೇಕು ಎಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಅದರ ಜೊತೆಗೆ ಇನ್ನೊಂದೆರಡು ವಿಷಯಗಳನ್ನು ಇಲ್ಲಿ ನಾನು ಹೇಳುವಂತಹದು ಏನೆಂದರೆ, ಇವೆರಡೂ ಬಹು ಮುಖ್ಯವಾದಂತಹದ್ದು. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಇವತ್ತು ಆಂಧ್ರ ಪ್ರದೇಶ, ತಮಿಳುನಾಡು, ಅಕ್ಕಪಕ್ಕದ ರಾಜ್ಯಗಳ ಜೊತೆ ನಾವು ಈ ಒಂದು ನೀರಿನ ಹಕ್ಕಿಗಾಗಿ ಹೋರಾಟ ಮಾಡುತ್ತಿದ್ದೇವೇನೋ ಎಂಬಂತಹ ಮಾತನ್ನು ಹೇಳಿದರು. ಆದರೆ ಇವತ್ತು ಪತ್ರಿಕೆಯಲ್ಲಿ ಬರುತ್ತಿದೆ. ಕರ್ನಾಟಕ ರಾಜ್ಯವನ್ನು ಖಳನಾಯಕನ ಸ್ಥಾನದಲ್ಲಿ ನಿಲ್ಲಿಸುವಂತಹ ಪ್ರಯತ್ನ ನಡೆಯುತ್ತಿದೆ. ಅದು ಬಿಬಿಸಿ ವೆಬ್‌ಸೈಟ್‌ನ ಮುಖಾಂತರ ಇರಬಹುದು ಅಥವಾ ಮತ್ತೊಂದರ ಮುಖಾಂತರ ಇರಬಹುದು. ಆದರೆ ಯಾರಿಂದ ನಡೆಯುತ್ತಿದೆ,

ಏನು ಎನ್ನುವಂತಹದನ್ನು ವಿಚಾರ ಮಾಡಬೇಕು. ಈ ಖಳ ನಾಯಕನ ಸ್ಥಿತಿಯಲ್ಲಿ ನಿಲ್ಲಿಸುವಂತಹ ಪರಿಸ್ಥಿತಿ ಏಕಾಗುತ್ತಿದೆ ಎಂಬ ಬಗ್ಗೆ ದಯವಿಟ್ಟು ಈ ಹಿನ್ನೆಲೆಯನ್ನು ತಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಮತ್ತು ಆಂಧ್ರ ಪ್ರದೇಶ ಅನಧಿಕೃತವಾದಂತಹ ಕಾಮಗಾರಿಗಳನ್ನು ಕೈಗೊಂಡಂತಹ ಸಂದರ್ಭದಲ್ಲಿ ಅದರ ಬಗ್ಗೆ ನಾವು ಎಲ್ಲಾ ರೀತಿಯಲ್ಲಿ ಕಾನೂನು ಬದ್ಧವಾಗಿ ಹೋರಾಟ ಮಾಡಿ ಕೇಂದ್ರದ ಮೇಲೆ ಒತ್ತಡ ತಂದು, ಅದನ್ನು ನಿಲ್ಲಿಸುವಂತಹ ಪ್ರಯತ್ನ ನಮ್ಮ ಕಡೆಯಿಂದ ಆಗಬೇಕಾಗಿದೆ. ಹಿಂದಕ್ಕೆ ಎಲ್ಲಾ ಆಲ್ಮಟ್ಟಿ ಮೀಟಿಂಗ್ ನಡೆದಂತಹ ಸಂದರ್ಭದಲ್ಲಿ ಆ ಒಂದು ಅನಧಿಕೃತವಾದಂತಹ ಯೋಜನೆಗಳನ್ನು ಅವರೇನು ಜಾರಿ ಮಾಡುತ್ತಿದ್ದಾರೆ ಅದನ್ನು ನಿಲ್ಲಿಸುವುದಕ್ಕೆ ನಾವು ಕಾನೂನು ಪ್ರಕಾರ ಹೋರಾಟವನ್ನು ಕೈಗೊಳ್ಳುತ್ತೇವೆಂದು ಆ ಸಂದರ್ಭದಲ್ಲಿ ಹೇಳಿದ್ದಿರಿ. ಆದರೆ ಅದು ಇಲ್ಲಿಯವರೆಗೆ ಆಗಲಿಲ್ಲ. ಅದು ಆಗಬೇಕು ಎನ್ನುವಂತಹದು ನಮ್ಮ ಒತ್ತಾಯ ಇದೆ. ಮತ್ತೊಂದು ವಿಚಾರ; ಮಹಾರಾಷ್ಟ್ರದ ಭೀಮಾ ನದಿ ವಿಚಾರ ಇದೆ. ಮೂರನೆಯ ವರ್ಷ ಬರಗಾಲ ಇದೆ. ಭೀಮಾನದಿಯಲ್ಲಿ ಒಂದು ಹನಿ ನೀರು ಇಲ್ಲ. ಎರಡು ನೂರು ಕ್ಯೂಸೆಕ್ಸ್ ನೀರು ಬಿಡಬೇಕು ಎಂದು ಹೇಳಿ ಇವತ್ತು ಸುಪ್ರೀಂ ಕೋರ್ಟಿನ ಮಧ್ಯಂತರ ಆಜ್ಞೆ ಇದ್ದಾಗಲೂ ಸಹಿತ ಮಹಾರಾಷ್ಟ್ರ ಅದನ್ನು ಪಾಲನೆ ಮಾಡುತ್ತಿಲ್ಲ. ಹೀಗಾಗಿ ಮಹಾರಾಷ್ಟ್ರ ಸರ್ಕಾರದ ಮೇಲೆ ನಮ್ಮ ಒತ್ತಡ ಇಲ್ಲ ಎನ್ನುವಂತಹ ಒಂದು ಕೊರಗು ಇದೆ. ಅದಕ್ಕೆ ರಾಜ್ಯ ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳು ಇವತ್ತು ಮಹಾರಾಷ್ಟ್ರದ ಸರ್ಕಾರದ ಮೇಲೆ ಒತ್ತಡ ತರಬೇಕು. ಒತ್ತಡ ತಂದು ಈ ಸುಪ್ರೀಂ ಕೋರ್ಟಿನ ಮಧ್ಯಂತರ ಆಜ್ಞೆ ಏನು ಇದೆ, ಪ್ರತಿ ದಿವಸ 200 ಕ್ಯೂಸೆಕ್ಸ್ ನೀರು ಬಿಡುವಂತಹದ್ದು, ಆ ಒಂದು ವಿಚಾರದ ಬಗ್ಗೆ ಒತ್ತಡ ತರುವಂತಹ ಕೆಲಸ ಆಗಬೇಕು. ಅದು ಆಗಿಲ್ಲ ಎನ್ನುವಂತಹ ಕೊರಗು ಆ ಭಾಗದ ರೈತರಲ್ಲಿ ಇದೆ. ಅದಕ್ಕಾಗಿ ಸರ್ಕಾರ ಇದರ ಬಗ್ಗೆ ಒಂದು ದಿಟ್ಟ ನಿರ್ಧಾರವನ್ನು ಕೈಗೊಳ್ಳಬೇಕಾಗುತ್ತದೆ. ಏಕೆಂದರೆ ಕೋರ್ಟಿನ ಆಜ್ಞೆ ಇದ್ದಾಗಲೂ ಸಹಿತ ಅದರ ಬಗ್ಗೆ ಸರ್ಕಾರ ಏನೂ ಒತ್ತಾಯ ಮಾಡದೇ ಇದ್ದರೆ ಆ ರೈತರ ಬದುಕು, ಅಲ್ಲಿರುವಂತಹ ಗ್ರಾಮೀಣ ಜನರ ಕುಡಿಯುವ ನೀರಿನ ಸಮಸ್ಯೆ ಇದೆ. ಭೀಮಾ ನದಿ ಬತ್ತಿ ಹೋಗಿದೆ. ಅದರ ಬಗ್ಗೆಯೂ ಸರ್ಕಾರ ತನ್ನ ಒಂದು ದಿಟ್ಟ ನಿಲುವನ್ನು ತೋರಿಸಬೇಕು ಎನ್ನುವಂತಹದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಯಾವ ರೀತಿ ಇವತ್ತು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರು ಕೃಷಿ ಸಾಲಗಳ ಮೇಲೆ 9 ಪರ್ಸೆಂಟ್ ಅಷ್ಟು ಬಡ್ಡಿ ಪರಿಷ್ಕರಣೆ ಮಾಡಿದ್ದಾರೆ. ಹಿಂದೆ ಅದು 16,17,18 ಪರ್ಸೆಂಟ್ ಇರಬಹುದು. ಹಿಂದೆ ಅತೀ ತುಟ್ಟಿ ಬಡ್ಡಿಯಲ್ಲಿ ಕೃಷಿ ಸಾಲ ಸಿಗುತ್ತಿತ್ತು. ಆದರೆ ಇವತ್ತು ಕೇಂದ್ರದಲ್ಲಿ ಮಾನ್ಯ ವಾಜಪೇಯಿ ಅವರು ಅನೌನ್ಸ್ ಮಾಡಿದ್ದಾರೆ. 9 ಪರ್ಸೆಂಟ್ ಇವತ್ತು ಕೃಷಿ ಸಾಲದ ಮೇಲೆ ಬಡ್ಡಿ, ಮೊದಲು 50 ಸಾವಿರ ಲಿಮಿಟ್ ಇದ್ದುದ್ದು ಈಗ ಎರಡು ಲಕ್ಷದವರೆಗೆ ಮಿತಿಯನ್ನು ವಿಸ್ತರಣೆ ಮಾಡಿದ್ದು ನಮ್ಮ ರೈತಾಪಿ ವರ್ಗಕ್ಕೆ ಒಳ್ಳೆಯ ಸಂತೋಷದ ಸಂಗತಿ. ಅದೇ ರೀತಿ ಇವತ್ತು ರಾಜ್ಯ ಸರ್ಕಾರ ನಮ್ಮ ಈ ಸೊಸೈಟಿಗಳ ಮುಖಾಂತರ, ಕೆಸಿಸಿ ಬ್ಯಾಂಕ್ ಮುಖಾಂತರ ಸಹಕಾರಿ ಸಾಲವನ್ನು ಏನು ಕೊಡುತ್ತೀರಿ ಅದರಲ್ಲಿ ಸಹಿತ ಈ ಒಂದು ಬಡ್ಡಿ ಇಳಿಕೆಯನ್ನು ಮಾಡುವಂತಹದು ಹಾಗೂ ಇನ್ನಿತರ ಸೌಲಭ್ಯಗಳನ್ನು ನಮ್ಮ ರೈತಾಪಿ ವರ್ಗಕ್ಕೆ ಕೊಡುವಂತಹ ದಿಟ್ಟ ನಿಲುವನ್ನು ಸರ್ಕಾರದ ಕೈಗೊಳ್ಳಬೇಕು. ಅದನ್ನು ಅನೌನ್ಸ್ ಮಾಡಬೇಕು ಎನ್ನುವಂತಹ ಒಂದು ಒತ್ತಾಯವನ್ನು ಮಾಡುತ್ತೇನೆ. ಇವು ನಮ್ಮ ಕೆಲವೊಂದು ಪ್ರಮುಖವಾದಂತಹ ಬೇಡಿಕೆಗಳು ಆಗಿವೆ.

ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು ಎನ್ನುವಂತಹ ಒತ್ತಾಯವನ್ನು ನಾನು ಮಾಡುತ್ತೇನೆ.

**ಶ್ರೀ ಎಸ್.ಎಂ. ಕೃಷ್ಣ** : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಗಮನಾರ್ಹವಾದಂತಹ ಪಾಯಿಂಟನ್ನು ರೈಸ್ ಮಾಡಿದ್ದಾರೆ. ಅದೇನೆಂದರೆ ಈ ಪಬ್ಲಿಕ್ ಡೆಟ್ ಏನು ಇದೆ ಅದರಲ್ಲಿ ನಮ್ಮ ಗವರ್ನಮೆಂಟ್ ಎಂಪ್ಲಾಯೀಸ್ ಏನು 6 ಲಕ್ಷ ಜನ ಇದ್ದಾರಲ್ಲಾ, ಅವರ ಪ್ರಾವಿಡೆಂಟ್ ಫಂಡ್, ಹಾಗೇನೇ ಅವರ ಎಂಪ್ಲಾಯಿಸ್ ಇನ್‌ಶ್ಯೂರೆನ್ಸ್ ಪ್ರೀಮಿಯಂ ಇವುಗಳ ಬಗ್ಗೆ ನಾವು ಕೊಟ್ಟು ತೆಗೆದುಕೊಳ್ಳತಕ್ಕಂಥ ಪ್ರಕ್ರಿಯೆ ಮಾಡುತ್ತಿದ್ದೇವೆ. ಅದು ಪ್ರತಿವರ್ಷವೂ ನಡೆಯುತ್ತಿರತಕ್ಕಂಥದ್ದು. ನಾನು 1999ನೇ ಇಸವಿಯಲ್ಲಿ 15 ಕೋಟಿ ರೂಪಾಯಿಗಳು ನಮ್ಮ ರಾಜ್ಯದ ಒಟ್ಟು ಸಾಲ ಎಂದು ಹೇಳಿದೆ, ಆಗ ಈ 13 ಸಾವಿರ ಕೋಟಿ ರೂ. ವಹಿವಾಟಿನಲ್ಲಿ ಬರುತ್ತದೆ. ಅದೇನೆಂದರೆ ಅದು ಎಂಪ್ಲಾಯೀಸ್ ಪ್ರಾವಿಡೆಂಟ್ ಫಂಡ್ ಮತ್ತು ಎಂಪ್ಲಾಯೀಸ್ ಇನ್‌ಶ್ಯೂರೆನ್ಸ್ ಫಂಡ್ ಬರುತ್ತದೆ. ಇವುಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ರಿಟೈರ್ ಆದವರಿಗೆ ಯಾವ್ಯಾವಾಗ ಪ್ರಾವಿಡೆಂಟ್ ಫಂಡ್ ಕೊಡಬೇಕೋ ಆಗ ನಾವು ಪಾವತಿ ಮಾಡತಕ್ಕದ್ದು. ಆದ್ದರಿಂದ ಅದನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ 39 ಸಾವಿರ ಕೋಟಿ ರೂಪಾಯಿ ಆಗುತ್ತದೆ. ಆದರೆ ಇದು ಪ್ರತಿ ಒಂದು ರಾಜ್ಯದಲ್ಲಿ ಕೂಡ ನಡೆದುಕೊಂಡು ಬಂದಿರತಕ್ಕಂಥ ಫಿಸ್ಕಲ್ ಪದ್ಧತಿ. ಒಂದು ಫೈನಾನ್ಸಿಯಲ್ ಪ್ರಾಕ್ಟೀಸ್. ಅದೇನೆಂದರೆ ಪ್ರಾವಿಡೆಂಟ್ ಫಂಡ್ ಹೇಗಿದ್ದರೂ ನಾವು ಕೊಡಬೇಕಲ್ಲಾ ಆದ್ದರಿಂದ ಪ್ರತಿ ತಿಂಗಳೂ ಹಿಡಿಯುತ್ತೇವೆ. ಪ್ರತಿ ತಿಂಗಳು ಹಿಡಿದಿದ್ದು ಎಲ್ಲಾದರೂ ಜಮಾ ಆಗಬೇಕಲ್ಲಾ. ಆದ್ದರಿಂದ ಅದನ್ನು ಸಾಲ ಹಾಗೆ ಎಂದು ಹೇಳಿ ವಿಶ್ಲೇಷಣೆ ಮಾಡಿದರೆ ಆಗ ನಮ್ಮದು 39 ಸಾವಿರ ಕೋಟಿ ರೂಪಾಯಿ ಆಗುತ್ತದೆ. ಆಗ 15 ಪ್ಲಸ್ 13 ಅದಷ್ಟು ಆಗುತ್ತದೆ. ಆದರೆ ನಮ್ಮ ಸಾಲದ ಒಟ್ಟು ಹೊರೆ 26 ಸಾವಿರ ಕೋಟಿ ರೂಪಾಯಿ ಎನ್ನತಕ್ಕದ್ದನ್ನು ಮತ್ತೊಮ್ಮೆ ರುಜುವಾತು ಮಾಡುತ್ತೇನೆ. ಕೇಂದ್ರ ಸರ್ಕಾರದವರು ನಮಗೆ ಆಗಿಂದಾಗ್ಗೆ ಈ ಸ್ವಾಪಿಂಗ್ ಆಫ್ ಲೋನ್ಸ್ ವಿಚಾರದಲ್ಲಿ ನಮಗೆ ಬುದ್ಧಿವಾದ ಹೇಳುತ್ತಾರೆ. ಏಕೆಂದರೆ ಇಂಟರ್‌ಸ್ಟ್ ರೇಟ್ಸ್ ಎಲ್ಲಾ ಕಡಿಮೆ ಆಗುತ್ತಿದೆ. ಆ ಕಾರಣ ನಾವು ಕೃಷ್ಣಾ ಜಲಭಾಗ್ಯ ನಿಗಮ, ಕರ್ನಾಟಕ ನೀರಾವರಿ ನಿಗಮ, ಮತ್ತಿತರ ಸಂಸ್ಥೆಗಳಿಗೆ ಸಾಲವನ್ನು ನಾವು ಎತ್ತುತ್ತೇವೆ. ಹಿಂದೆ ಎತ್ತಿದ್ದೆವು. ನಾವು ನೆಗೋಷಿಯೇಟ್ ಮಾಡಿದಾಗ ಆ ಸಾಲಗಳ ಮೇಲಿನ ಬಡ್ಡಿ 12,13 ಪರ್ಸೆಂಟ್ ಈಗಾಗಲೇ ನಾವು ವ್ಯವಸ್ಥಿತವಾದಂತಹ ಪ್ರಯತ್ನಗಳನ್ನು ಮುಂದುವರಿಸಿದ್ದೇವೆ. ಚೀಪರ್ ಲೋನ್ಸ್‌ನ್ನು ನಾವು ಕಾಂಟ್ರ್ಯಾಕ್ಟ್ ಮಾಡಿ ಈ ಕಾಸ್ಟ್‌ಲಿಯರ್ ಲೋನ್ಸ್ ಏನು ಇವೆ, ಅದನ್ನೆಲ್ಲಾ ರಿಟೈರ್ ಮಾಡಬೇಕು ಎನ್ನುವಂತಹದ್ದು. ಕಳೆದ ಎರಡು ವರ್ಷದಲ್ಲಿ ಇದನ್ನು ಈಗಾಗಲೇ ನಾವು ಜಾರಿಗೆ ತಂದಿದ್ದೇವೆ. ಮಾನ್ಯ ಪ್ರಧಾನ ಮಂತ್ರಿಯವರು ಒಂದು ಘೋಷಣೆ ಮಾಡಿದ್ದಾರೆ. 2 ಪರ್ಸೆಂಟ್ ಇಂಟರೆಸ್ಟ್ ರೇಟ್ ಕಡಿಮೆ ಮಾಡಬೇಕು ಹಾಗೆ ಎಂದು ಘೋಷಣೆ ಮಾಡಿದ್ದಾರೆ. ಇದನ್ನು ನಾವು ಎರಡು ವರ್ಷದ ಕೆಳಗೇ ನಾವು ಜಾರಿಗೆ ತಂದೆವು. ಕೋ ಅಪರೇಟಿವ್ ಲೋನ್ಸ್‌ನಲ್ಲಿ ಎರಡು ಪರ್ಸೆಂಟ್ ಇಂಟ್ರೆಸ್ಟ್ ರೇಟನ್ನು ಕಡಿಮೆ ಮಾಡುತ್ತೇವೆಂದು ಏನು ಆಶ್ವಾಸನೆ ನೀಡಿದ್ದೆವು, ಅದನ್ನು ಈಗಾಗಲೇ ನಾವು ಜಾರಿಗೆ ತಂದಿದ್ದೇವೆ. ಆದುದರಿಂದ, ನಾವು ಹೇಳಬಹುದಾದರೆ...

**ಶ್ರೀ ಜಗದೀಶ್ ಶೆಟ್ಟರ್** : ಅದು ಆಗಲಿಲ್ಲ.

**ಶ್ರೀ ಎಸ್.ಎಂ. ಕೃಷ್ಣ** : ಸ್ವಲ್ಪ ನಿಧಾನವಾಗಿರಬಹುದು. ಆದರೆ, ಆಗಿದೆ.

ಶ್ರೀ ಆರಗ ಜ್ಞಾನೇಂದ್ರ : ಪ್ರೈಮರಿ ಸೊಸೈಟಿಗಳಲ್ಲಿ ಲೋನ್ ಮೇಲಿನ ಬಡ್ಡಿ ದರ 14.5 ಪರ್ಸೆಂಟ್‌ನಷ್ಟಾಗಿದೆ.

ಶ್ರೀ ಹೆಚ್. ವಿಶ್ವನಾಥ್ : ರಾಜ್ಯದ ಕೆಲವು ಕಡೆಗಳಲ್ಲಿ ಬಡ್ಡಿ ದರ ಶೇಕಡ 11, 13ರಷ್ಟಿದೆ. ಅಂತಹ ಕಡೆಗಳಲ್ಲಿ ಅದನ್ನು ಶೇಕಡ 9ಕ್ಕೆ ತರಲು ನಾವು ಕ್ರೆಡಿಟ್ ಕಾರ್ಡುಗಳನ್ನು ಸಂಪೂರ್ಣವಾಗಿ ಹಂಚುವುದರ ಮೂಲಕ ಬ್ಯಾಂಕಿಂಗ್ ಸಿಸ್ಟಮ್‌ನಲ್ಲಿ ರೈತರು ತಮ್ಮನ್ನು ತೊಡಗಿಸಿಕೊಳ್ಳುವುದಕ್ಕೆ ಸುಮಾರು ಶೇಕಡ 9, 7.5 ರಷ್ಟಿದ್ದರೆ... ತಾವೇ ಇದನ್ನು ಮಾಡಿರುವಂಥಾದ್ದು. ಮಾನ್ಯ ಶಿವಾನಂದ ಪಾಟೀಲರೇ, ವಿಜಾಪುರದಲ್ಲಿ ತಮಗೆ ಇದರ ಅನುಭವ ಆಗಿದೆಯಲ್ಲಾ.

ಶ್ರೀ ಶಿವಾನಂದ ಎಸ್. ಪಾಟೀಲ್ : ಅಧ್ಯಕ್ಷರೇ, That is exceptional to one Bank. ಅವರು ಹೇಳುತ್ತಿರುವುದು it is a State Policy. ನಾವು 2 ಪರ್ಸೆಂಟ್ ರೆಡ್ಯೂಸ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದು ಎಂಟೈರ್ ಸ್ಟೇಟ್‌ನಲ್ಲಿ ಆಗಿದೆಯೇ? ನಿಮಗೂ ಗೊತ್ತಿರುವಂತೆ different Banks prime lending rate ಏನಿದೆ, cost of fund ಏನಿದೆ, ಯಾವುದೂ ಆಗಿಲ್ಲ.

ಶ್ರೀ ಎಸ್.ಎಂ. ಕೃಷ್ಣ : ರಾಜ್ಯ ಸರ್ಕಾರ ಅದನ್ನು ಕೈಗೆತ್ತಿಕೊಂಡಿದ್ದು, ಎಲ್ಲಿ ಜಾರಿಗೆ ತರಲು ಆಗಲಿಲ್ಲವೋ ಅಲ್ಲಿ ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತೇವೆ. ಇನ್ನು ಕೆ.ಪಿ.ಟಿ.ಸಿ.ಎಲ್ ವಿಚಾರದಲ್ಲಿ ಅಂದರೆ ಕೃಷಿ ಪಂಪುಸೆಟ್ಟುಗಳಿಗೆ ವಿದ್ಯುತ್ ಬಾಕಿ ಮೇಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ನಾಳೆಗೆ, 31ನೇ ತಾರೀಖಿಗೆ ಅವಧಿ ಮುಕ್ತಾಯಗೊಳ್ಳುವುದರಿಂದ ಇನ್ನು ಎರಡು ತಿಂಗಳು ಮುಂದುವರೆಸಲು ಕ್ರಮ ಕೈಗೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಬಹುಶಃ ನಾವು ಯಾವ್ಯಾವ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೋ, ಆ ಎಲ್ಲಾ ವಿಚಾರಗಳ ಬಗ್ಗೆಯೂ ಸರಿಯಾಗಿ ಉತ್ತರಿಸುತ್ತಾರೆಂದು ತಿಳಿದುಕೊಂಡಿದ್ದೆವು. ಆದರೆ, ಆರ್‌ಬಿಐ ಲೆಟರ್ ತೋರಿಸಿ ತಮ್ಮ ಬೆನ್ನು ತಾವೇ ತಟ್ಟಿಕೊಂಡರು. ಉಳಿದಂತೆ ಬೇರೆಲ್ಲಾ ವಿಚಾರಗಳ ಬಗ್ಗೆ ನನಗನ್ನಿಸುತ್ತಿದೆ. ನಮ್ಮನ್ನೆಲ್ಲಾ ತಪ್ಪು ದಾರಿಗೆಳೆಯುವ ಪ್ರಯತ್ನ ಮಾಡಿದ್ದರಲ್ಲಿ ಅನುಮಾನವಿಲ್ಲ. ಆರ್‌ಬಿಐ ಲೆಟರ್ ತೋರಿಸಿದ್ದು ಹೊರತುಪಡಿಸಿದರೆ ಬೇರೆಲ್ಲಾ ವಿಚಾರಗಳಲ್ಲೂ ವಿರೋಧ ಪಕ್ಷದವರಿಗೆ ಟೋಪಿ ಹಾಕುವ ಪ್ರಯತ್ನ ಇಲ್ಲಿ ನಡೆದಿದೆ. ಎಕನಾಮಿಕ್ ಸರ್ವೆ, ಇದನ್ನು ನಾವು ಬರೆದಿದ್ದಲ್ಲ. ಇದರ ಪ್ರಕಾರ ಆರ್ಥಿಕ ಕೊರತೆ ಬಗ್ಗೆ ಅವರು ಏನು ಹೇಳಿದ್ದಾರೆಂದರೆ, 2.4 ಇದ್ದುದ್ದು ಇವೊತ್ತು 2.66 ಕ್ಕೆ ಜಾಸ್ತಿಯಾಗಿದೆ. ರೆವಿನ್ಯೂ ಡಿಫಿಸಿಟ್ ಏನಿದೆ, 1999–2000 ಸಾಲಿನ ವರ್ಷದ ವಿವರ ಹೇಳಿ, ಈ ವರ್ಷದ ಬಗ್ಗೆ ಹೇಳಿದ್ದಾರೆ. ಮೂರು ವರ್ಷಗಳ ಅಂತರದಲ್ಲಿ ಯಾವ್ಯಾವ ವರ್ಷ ಎಷ್ಟೆಷ್ಟು ಡಿಫಿಸಿಟ್ ಆಗಿದೆ ಎಂದು ಕಳೆದ ವರ್ಷದ ಬಜೆಟ್ ಭಾಷಣದಲ್ಲಿ ಹೇಳಿದ್ದೆ. ಅದರ ಬಗ್ಗೆಯೂ ಹೇಳಿಲ್ಲ. ಅದರ ಪ್ರಕಾರ 2003–04ರಲ್ಲಿ ಅಂದಾಜು ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳಷ್ಟಾಗಬಹುದೆಂದು ಹೇಳಿದ್ದೇವೆ. ಏಕೆಂದರೆ, 2000–01ರಲ್ಲಿ 1.862 ಕೋಟಿ ರೂ. 2001–02ರಲ್ಲಿ 3.284 ಕೋಟಿ ರೂ. 2002–03 ರಲ್ಲಿ 3.400 ಕೋಟಿ ರೂಪಾಯಿಗಳಷ್ಟು ಅಂದಾಜು ಮಾಡಿ ಅಂಕಿ–ಅಂಶಗಳ ಪ್ರಕಾರ ಹೇಳಿದ್ದರೂ ಅದರ ಬಗ್ಗೆಯೂ ಅವರು ಹೇಳಲಿಲ್ಲ. ಯಾವುದೇ

ಒಂದು ಅಳತೆಗೋಲು GSDP ಅಂದರೆ, Gross State Domestic Product. ಇದೂ ಸಹ ಪ್ರತಿ ವರ್ಷವೂ ಕಡಿಮೆಯಾಗುತ್ತಾ ಬಂದಿರುವುದು ಅವರಿಗೆ ಗೊತ್ತಿದೆ. 1999–2000ರಲ್ಲಿ ಸುಮಾರು 7 ಪರ್ಸೆಂಟ್ ಇದ್ದದ್ದು ಇವೊತ್ತು 4.4 ಪರ್ಸೆಂಟ್ ಆಗಿದೆಯೆಂದು ಅವರೇ ಹೇಳಿದ್ದಾರೆ. ಕೇಂದ್ರದ ಆವರೇಜ್ ಇರುವುದು 8 ಪರ್ಸೆಂಟ್ ಆಗಬೇಕೆಂಬುದು, ಅದನ್ನೂ ಹೇಳಿದ್ದಾರೆ. ಮತ್ತು ನಾನು ಪ್ರಸ್ತಾಪಿಸಿದ ಇನ್ನೊಂದು ವಿಚಾರದ ಬಗ್ಗೆ ಮುಖ್ಯಮಂತ್ರಿಗಳು ಯಾವುದೇ ಚಕಾರವೆತ್ತಲಿಲ್ಲ. ಪ್ಲಾನ್ ಸೈಜ್ ಅನ್ನು ಪ್ರಥಮ ಬಾರಿಗೆ 2001–02ರಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಕಡಿಮೆ ಮಾಡಿದ್ದಾರೆ. ಇಡೀ ಕರ್ನಾಟಕದ ಇತಿಹಾಸದಲ್ಲೇ ಆ ರೀತಿ ಆಗಿಲ್ಲ. ಪ್ಲಾನಿಂಗ್ ಕಮೀಷನ್‌ಗೆ ಇವರೇ ಕೊಟ್ಟಂಥ ಮಾಹಿತಿ ಪ್ರಕಾರ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಕಡಿತವಾಗಿದೆಯೆಂದು ನಾನು ಹೇಳಿದ್ದೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನೂ ಹೇಳಲಿಲ್ಲ. ಇನ್ನೊಂದು ವಿಚಾರ ಏನು ಹೇಳಿದ್ದಾರೆಂದರೆ, ಇವೊತ್ತು ಸಾಲ ತೆಗೆಯುವುದು ನಿಲ್ಲಿಸಿದ್ದೇವೆಂಬುದು. ಹಣಕಾಸು ಇಲಾಖಾ ವಿಷಯ ಸಮಿತಿಯ ಅಧ್ಯಕ್ಷರಾದ ಶ್ರೀ ವೈ.ಕೆ. ರಾಮಯ್ಯನವರು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ವರದಿಯಲ್ಲಿನ ಅಂಶದ ರೀತ್ಯ ಸುಮಾರು ನಲವತ್ತೈದು ಸಾವಿರ ಕೋಟಿ ರೂಪಾಯಿಗಳಷ್ಟು ಸಾಲವಾಗಿದೆ. 2001–02 ಮತ್ತು 2002–03 ಈ ಎರಡು ವರ್ಷಗಳಲ್ಲಿ 10,500 ಕೋಟಿ ರೂಪಾಯಿಗಳ ಸಾಲವಾಗಿದೆ ಎಂದು ನಾನು ಹೇಳಿದ್ದೆ. ಇವೊತ್ತು GSDP 33 ಪರ್ಸೆಂಟ್ ಒಳಗಡೆ ಮಾತ್ರ ನಾವು ಸಾಲ ಮಾಡಬೇಕಾದಂಥ ಅಂತರವಿರುವುದು. ಆದರೆ, ಇವೊತ್ತು 38 ಪರ್ಸೆಂಟ್ ಆಗಿದೆ. ಆ ಸೀಲಿಂಗ್ ಜಾಸ್ತಿ ಮೀರಿರುವುದರಿಂದ ನಾವು ಸಾಲ ಪಡೆಯುವುದಕ್ಕಾಗುವುದಿಲ್ಲ. ಸಾಲ ಪಡೆದುಕೊಳ್ಳುವುದನ್ನು ನಿಲ್ಲಿಸಿದ್ದೇವೆಂದು ಅವರು ಹೇಳಬಹುದು. ಇವೊತ್ತು we have crorssed the limit of 33% of GSDP and we have already reached 38% of the GSDP. ಆದುದರಿಂದ ನಾವು ಸಾಲ ಪಡೆಯುವುದು ಅಷ್ಟೊಂದು ಸುಲಭವಲ್ಲವೆಂಬುದನ್ನು ಹೇಳಬಯಸುತ್ತಿದ್ದೇನೆ. ಇನ್ನು ವಿದ್ಯುಚ್ಛಕ್ತಿ ಉತ್ಪಾದನೆ ಕುರಿತಂತೆ ಮಾನ್ಯ ಮುಖ್ಯಮಂತ್ರಿಗಳು ಒಂದು ಚೂರೂ ಚಕಾರವೆತ್ತಲಿಲ್ಲ. T&D Losses ನಾವು ಅಧಿಕಾರ ಬಿಟ್ಟುಹೋದಂಥ ಸಂದರ್ಭದಲ್ಲಿ 1999–2000ರಲ್ಲಿ 19.5 ಪರ್ಸೆಂಟ್ ಇತ್ತು. ಈ ವರ್ಷ 32 ಪರ್ಸೆಂಟ್ ಆಗಿದೆ. ಅದರ ಬಗ್ಗೆಯೂ ಹೇಳಲಿಲ್ಲ. ನಮ್ಮ ಅಧಿಕಾರದ ಕಾಲದಲ್ಲಿ ಖಾಸಗಿ ವಲಯದಿಂದ ಸುಮಾರು 327 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆ ಮಾಡಿದೆವು. ಅದು ರಾಯಲ್‌ಸೀಮ ಇರಬಹುದು, ಟಾಟಾ ಇರಬಹುದು, ತಣ್ಣೀರುಬಾವಿ ಇರಬಹುದು, ಒಟ್ಟು 327 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾಸಿದೆವು. ಆದರೆ, ಕಳೆದ ಮೂರೂವರೆ ವರ್ಷಗಳಲ್ಲಿ ಖಾಸಗಿ ವಲಯದಿಂದ ಒಂದು ಮೆಗಾವ್ಯಾಟ್‌ನಷ್ಟು ನೀವು ವಿದ್ಯುತ್ ಉತ್ಪಾದಿಸಲು ಪ್ರಾರಂಭಿಸಿಲ್ಲ. ಮಾನ್ಯ ಹಿರಿಯ ಸದಸ್ಯರಾದ ವೈ.ಕೆ. ರಾಮಯ್ಯನವರು ಮಾತನಾಡುತ್ತಾ, "ನೀವು ತಂದಂಥ ಒಂದು ಯೋಜನೆಯಿಂದ ಸುಮಾರು ನೂರಾರು ಕೋಟಿ ರೂಪಾಯಿಗೂ ಹೆಚ್ಚು ನಾವು ಸಾಲವನ್ನು ಕಟ್ಟಬೇಕಾಗಿದೆ" ಎಂದರು. ಅಂದಿನ ಪರಿಸ್ಥಿತಿಯಲ್ಲಿ ಖಾಸಗಿ ವಲಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಗೆ ನಾವೇನಾದರೂ ಅನುಮತಿ ಕೊಟ್ಟಿರದಿದ್ದರೆ, ಕೇಂದ್ರ ಸರ್ಕಾರದ ನಿಯಮದ ಪ್ರಕಾರ ಎಸ್ಕ್ರೋ ಅಗ್ರಿಮೆಂಟ್ ಮಾಡಿಕೊಳ್ಳದಿದ್ದಿದ್ದರೆ, ಅವೊತ್ತಿನ ತಾಂತ್ರಿಕ ಸಮಿತಿಯ ಶಿಫಾರಸ್ಸಿನ ಮೇರೆಗೆ ನಾವು ಅನುಮತಿ ನೀಡದಿದ್ದರೆ ಇವೊತ್ತು ರಾಜ್ಯದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕಾಗುತ್ತಿರಲಿಲ್ಲ. ಅನಿವಾರ್ಯತೆ ಇದ್ದುದರಿಂದ

ಅವೊತ್ತು ಮೂರು ವಲಯಗಳಲ್ಲಿ ಕೊಟ್ಟಿದ್ದೇವೆ. ಇವೊತ್ತು ತಾವು ಒಂದು ಮೆಗಾವ್ಯಾಟ್‌ನಷ್ಟು ವಿದ್ಯುತ್ ಅನ್ನು ಖಾಸಗಿ ವಲಯದಲ್ಲಿ ಪ್ರಾರಂಭಿಸಿಲ್ಲ. ಅದರ ಬಗ್ಗೆ ಹೇಳಿಲ್ಲ. ಅನಂತರ, ನಾನು ಇನ್ನೊಂದು ಆರೋಪ ಮಾಡಿದ್ದೇನೆ. ಏನೆಂದರೆ, ಸುಮಾರು 2,300 ಕೋಟಿ ರೂಪಾಯಿಗಳ ಬಳ್ಳಾರಿ ಥರ್ಮಲ್ ಪವರ್ ಪ್ರಾಜೆಕ್ಟ್ ಅನ್ನು ಬಿಹೆಚ್‌ಇಎಲ್‌ನ ತಾಂತ್ರಿಕ ಸಮಿತಿಯರವರ ಪ್ರಕಾರ ಇವೊತ್ತು ಪ್ರಾರಂಭ ಮಾಡದೆ ಖಾಸಗಿ ವಲಯದಲ್ಲಿರುವ ಯಾವುದೇ ಬಹುರಾಷ್ಟ್ರೀಯ ಖೋಡೆ ಕಂಪನಿಗೆ ವಹಿಸಿಕೊಡುವ ಪ್ರಯತ್ನ ನಡೆದಿದೆ. ತಾಂತ್ರಿಕ ಸಮಿತಿಯವರು ಇದನ್ನು ವಿರೋಧಿಸಿದ್ದಾರೆ. ಇದಕ್ಕಾಗಿ ಗ್ಲೋಬಲ್ ಟೆಂಡರ್ಸ್ ಕರೆದಿಲ್ಲ. ಒಳಗೊಳಗೆ ವ್ಯವಹಾರ ಕುದುರಿಸಿಕೊಳ್ಳುವ ಹುನ್ನಾರ ನಡೆಯುತ್ತಿದೆ. ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಇದರಲ್ಲಿ ನಮಗೆ ಅನುಮಾನವಿದೆ ಎನ್ನುವ ಆರೋಪವನ್ನು ನಾನು ಮಾಡಿದ್ದೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನನಗೆ ಯಾವುದೇ ಸ್ಪಷ್ಟೀಕರಣ ಕೊಟ್ಟಿಲ್ಲ. ಇನ್ನು ಸೇವಾ ಶುಲ್ಕ ರದ್ದುಗೊಳಿಸಿರುವ ಸಂಬಂಧ ಒಂದನೇ ತಾರೀಖಿನಿಂದ ಚಿತ್ರಮಂದಿಗಳ ಬಂದ್ ಆಚರಿಸಲಾಗುವುದೆಂದು ಚಿತ್ರಮಂದಿರದ ಮಾಲೀಕರು ಅಸೋಸಿಯೇಷನ್ ಮೂಲಕ ರಾಜ್ಯಾದ್ಯಂತ ಕರೆ ನೀಡಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದಾರೆ ಮತ್ತು ವಿಧಾನಸಭೆಯಲ್ಲಿ ಮಾನ್ಯ ಶಾಸಕರುಗಳು ಈ ಕುರಿತಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದರೂ ಸೇವಾ ಶುಲ್ಕ ರದ್ದುಗೊಳಿಸುವ ಕುರಿತಂತೆ ತಾವು ಏನೂ ಹೇಳಲಿಲ್ಲ. ಆದುದರಿಂದ, ಪ್ರಸ್ತಾಪಿಸಿರುವ ಇಷ್ಟೂ ವಿಚಾರಗಳಿಗೆ ತಾವು ಸ್ಪಷ್ಟೀಕರಣ ನೀಡಬೇಕೆಂದು ತಮ್ಮಲ್ಲಿ ಕೇಳುತ್ತೇನೆ.

**ಶ್ರೀ ಎಸ್.ಎಂ. ಕೃಷ್ಣ** : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ನನಗೆ ಒಂದು ಉಪಕಾರ ಮಾಡಿದರು. ಏನೆಂದರೆ, ಈ ವಿಚಾರವನ್ನು ನಾನು ಮರೆತುಬಿಟ್ಟಿದ್ದರಿಂದ ನೆನಪಿಸಿದ್ದಾರೆ. ತಾವು ಪ್ಲಾನ್ ಸೈಜ್ ವಿಚಾರದ ಬಗ್ಗೆ ಪ್ರಸ್ತಾಪಿಸಿದ್ದೀರಿ. ತಾವು ಯಾವ ಪ್ಲಾನ್ ಸೈಜ್ ಬಗ್ಗೆ ಮಾತನಾಡುತ್ತಿದ್ದೀರೆಂದು ನನಗೆ ಅರ್ಥವಾಗುತ್ತಿಲ್ಲ. ನನ್ನ ಹತ್ತಿರ ಇರುವುದು ಅಧಿಕೃತ ದಾಖಲೆ ಪ್ಲಾನಿಂಗ್ ಕಮೀಷನ್‌ನವರು ಕೊಟ್ಟಿರುವುದು 2002–03. ನಮ್ಮ approved size of the plan was Rs. 8,611 crores, achievement 8.421 crores, 98%. 2003–04ನೇ ಸಾಲಿಗೆ 9.600 ಕೋಟಿ ರೂಪಾಯಿಗಳಿಗೆ ಪ್ಲಾನ್ ಸೈಜನ್ನು ನಾವು ಸ್ಯಾಂಕ್ಷನ್ ಮಾಡಿಸಿಕೊಂಡು ಬಂದಿದ್ದೇವೆ. ಅದು ಏನು ರಿಫ್ಲೆಕ್ಟ್ ಮಾಡುತ್ತದೆಂದರೆ, 16% increase. So, Planning Commission ನವರು ಪ್ಲಾನ್ ಸೈಜನ್ನು ಜಾರಿಗೊಳಿಸುವಾಗ ಅಥವಾ ಶಿಫಾರಸ್ಸು ಮಾಡುವಾಗ, ಅಪ್ರೂವ್ ಮಾಡುವಾಗ ಖಂಡಿತವಾಗಿಯೂ ಅವರು ನಮ್ಮ ಹಿಂದಿನ ವರ್ಷದ ಪರ್‌ಫಾರ್ಮೆನ್ಸ್ ಅನ್ನು ಗಮನದಲ್ಲಿಟ್ಟುಕೊಳ್ಳುತ್ತಾರೆ. ಮತ್ತು ಇವೊತ್ತು ಅದರ ಬಗ್ಗೆ ಏನು ಡಾಕ್ಯುಮೆಂಟ್ ಇಡುತ್ತೇವೋ, ಅದನ್ನೂ ಕೂಡ ಗಮನಿಸುತ್ತಾರೆ.

## 1.40 ಪಿಎಂ

ನೀವು ಟಿ ಅಂಡ್ ಡಿ ಲಾಸಸ್ ವಿಚಾರವನ್ನು ಮಾತನಾಡುತ್ತೀರಿ. ಅದು 38.2 ಪರ್‌ಸೆಂಟ್ ಇದೆಯೆಂಬುದು ನಮ್ಮ ವರ್ತಮಾನ, ಅದನ್ನು 31.68ಕ್ಕೆ ಇಳಿಸಿದ್ದೇವೆ. ಅದನ್ನು ಚೆಕ್ ಮಾಡುವುದು ಹೇಗೆ? ಯೂನಿವರ್ಸಲ್ ಮೀಟರಿಂಗ್ ಇನ್ನೂ ಬಂದಿಲ್ಲ. ಆದ್ದರಿಂದ ನೀವು ಒಂದು ಫಿಗರ್‌ನ್ನು ಹೇಳಿಕೊಂಡು ಹೋಗಿ, ನಾನು ಒಂದು ಫಿಗರ್‌ನ್ನು ಹೇಳಿಕೊಳ್ಳುತ್ತಾ ಹೋಗುತ್ತೇನೆ, ಇನ್ನೊಬ್ಬರು ಇನ್ನೊಂದು ಫಿಗರ್‌ನ್ನು ಹೇಳುತ್ತಾ ಹೋಗುತ್ತಾರೆ, ಆದರೆ ಇಬ್ಬರದ್ದೂ ಕರೆಕ್ಟ್ ನಿಮ್ಮದು ತಪ್ಪು

ಎಂದು ನಾನು ಹೇಳುವುದಿಲ್ಲ. ನೀವೂ ಕರೆಕ್ಟ್ ನಾನೂ ಕರೆಕ್ಟ್ ಅವರದ್ದೂ ಕರೆಕ್ಟ್ ಆದ್ದರಿಂದ ಕುರುಡರು ಲೆಕ್ಕಾಚಾರ ಮಾಡಿದಂತಾಗುತ್ತಿದೆ. ಏಕೆಂದರೆ, ಎಲ್ಲಿಯವರೆಗೆ ಯೂನಿವರ್ಸಲ್ ಮೀಟರ್ ಬರುವುದಿಲ್ಲ ಅಲ್ಲಿಯವರೆಗೆ ಇದು ಹೀಗೆಯೇ ಇರುತ್ತದೆ. ಇಲ್ಲದಿದ್ದರೆ ಎಲ್ಲವನ್ನೂ ದಾಮಶಾ ಮೇಲೆ, ನದಿಯನ್ನು ಕ್ರಾಸ್ ಮಾಡುವಾಗ ಆವರೇಜ್ ಕೆಲವೊಂದು ಸಲ ಲೆಕ್ಕಾ ಮಾಡುತ್ತೇವಲ್ಲಾ ಹಾಗಾಗುತ್ತದೆ. ಯಾವುದೋ ಖೋಡೇಸ್‌ಗೆ ಕೊಟ್ಟಿರುವ ಬಗ್ಗೆ ಹೇಳಿದರು. ಇವೆಲ್ಲಾ ಬಹಿರಂಗವಾಗಿ ನಡೆಯತಕ್ಕದ್ದು ಪಾರದರ್ಶಕತೆಯಿಂದ ನಡೆಯತಕ್ಕದ್ದು, ಟೆಂಡರ್‌ನ್ನು ಕರೆದು ಮಾಡತಕ್ಕದ್ದು ಆದ್ದರಿಂದ, ಈ ಸರ್ಕಾರ ವಿಚಲಿತವಾಗತಕ್ಕ ಪ್ರಶ್ನೆ ಇಲ್ಲ. With the excellent track record of the Karnataka Power Corporation, I am sure they will take all these factors into consideration before they decide about it.

**ಶ್ರೀ ಬಿ. ಸೋಮಶೇಖರ್** : ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ಒತ್ತಡವನ್ನು ತಂದಾಗ, ಆ ಸಂದರ್ಭದಲ್ಲಿ ಬಾಕಿಯನ್ನು ರದ್ದು ಮಾಡತಕ್ಕದ್ದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದಿರಿ. ಇದು ರಾಜ್ಯಾದ್ಯಂತ ರೈತರಿಗೆ ಬೇಕಾಗಿರತಕ್ಕಂಥ ಬೇಡಿಕೆ. ಅದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಇದು ತಮ್ಮ ಕಮಿಟ್‌ಮೆಂಟ್. ಆನಂತರ, ಶಾಸಕರ ನಿಧಿಯ ಬಗ್ಗೆಯೂ ಹೇಳಲಿಲ್ಲ. ತಾವು ಅಲ್ಲಿ ಹೇಳಿದ್ದಿರಿ, ಇಲ್ಲಿ ಹೇಳದೆ ಇನ್ನೆಲ್ಲಿ ಹೇಳುತ್ತೀರಿ? ಈ ಸಭೆಯಲ್ಲಿ ಹೇಳದೆಯೇ ತಾವು ಬೇರೆ ಕಡೆ ಎಲ್ಲಿ ಹೇಳುತ್ತೀರಿ?

**ಶ್ರೀ ಎಸ್.ಎಂ. ಕೃಷ್ಣ** : ಶಾಸಕರ ನಿಧಿಗೆ ನಾವು ಪ್ರಾವಿಜನ್ ಮಾಡಿದ್ದೇವೆ ಈಗ ಬರಗಾಲವಿದೆ, ಅದನ್ನೂ ಕೂಡ ಗಮನದಲ್ಲಿಟ್ಟುಕೊಂಡಿದ್ದೇವೆ, ಮುಂದೆ ಹೇಗೆ ಮಳೆ ನಡೆಯುತ್ತದೆ ಅದರ ಆಧಾರದ ಮೇಲೆ ಶಾಸಕರ ನಿಧಿಯ ವಿಷಯವೂ ನಿರ್ಧಾರವಾಗುತ್ತದೆ ಎನ್ನತಕ್ಕಂಥ ಒಂದು broad approach ಪ್ರತಿಯೊಬ್ಬ ಶಾಸಕರಿಗೆ 40 ಲಕ್ಷ ರೂ.ಗಳನ್ನು ಕೊಡಬೇಕೆಂದು ನಮ್ಮ ಕಮಿಟ್‌ಮೆಂಟ್ ಏನಿದೆ ಅದರಿಂದ ಹಿಂದೆ ಹೋಗತಕ್ಕ ಪ್ರಶ್ನೆ ಬರುವುದಿಲ್ಲ. ನನಗನ್ನಿಸುತ್ತದೆ, ಈ ವರ್ಷ ಈ 40 ಲಕ್ಷ ರೂಪಾಯಿಗಳನ್ನು ನಿಮ್ಮ ನಿಮ್ಮ ಕ್ಷೇತ್ರಗಳ ವಿಶೇಷ ಅಭಿವೃದ್ಧಿಗೋಸ್ಕರ ಬಿಡುಗಡೆ ಮಾಡತಕ್ಕಂಥ ವಿಶ್ವಾಸ ನಮಗೆ ಇದೆ.

**ಶ್ರೀ ಪಿ.ಜಿ.ಆರ್ ಸಿಂಧ್ಯಾ (ಕನಕಪುರ)** : ಮಾನ್ಯ ಅಧ್ಯಕ್ಷರೆ, ಈ ಸಲದ ಬಜೆಟ್ ವಿಚಾರದಲ್ಲಿ ನಮ್ಮ ಪಕ್ಷದ ಗಾತ್ರ, ಸಮಯದ ಅಭಾವ, ಇವೆಲ್ಲದರಿಂದ ನಾನು ಮಾತನಾಡಲು ಆಗಲಿಲ್ಲ. ಆದರೆ ಎರಡು ಮೂರು ಪ್ರಮುಖವಾದ ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಯವರಿಗೆ specific answer ರೂಪದಲ್ಲಿ ಬಯಸುತ್ತಿದ್ದೇನೆ. VAT system of taxation ಪದ್ಧತಿಯನ್ನು ಏನು ಕೇಂದ್ರ ಸರ್ಕಾರದವರು ತರಬೇಕೆಂದಿದ್ದರು ಅದನ್ನು ಬೇರೆ ರಾಜ್ಯಗಳ ಧೋರಣೆಯಿಂದಾಗಿ ತರಲು ಆಗಲಿಲ್ಲ. ಹೀಗಾಗಿ ಒಂದು ಪರ್‌ಸೆಂಟ್ ಟ್ಯಾಕ್ಸ್‌ನ್ನು ಎಲ್ಲಾದರಲ್ಲೂ ಸಾರಾಸಗಟಾಗಿ ಜಾಸ್ತಿ ಮಾಡಿ ಒಂದು ಆರ್ಡಿನೆನ್ಸ್ ಮೂಲಕ ತೆಗೆದುಕೊಂಡು ಬಂದಿದ್ದೇನೆ ಎನ್ನತಕ್ಕ ವಿಚಾರವನ್ನು ಅವರು ಸೂಕ್ಷ್ಮವಾಗಿ ಹೇಳಿದ್ದಾರೆ. ಮತ್ತು ಎರಡು ವರ್ಷಗಳ ಹಿಂದಿನಿಂದಲೂ ಇದನ್ನು ಹೇಳಿಕೊಂಡು ಬಂದಿದ್ದಾರೆ. ಹೆಚ್ಚಿಗೆ ಬಡ್ಡಿ ಇರುವಂಥ ಹಳೆಯ ಸಾಲವನ್ನು ತೀರಿಸಿ ಕಡಿಮೆ ಬಡ್ಡಿ ಇರುವಂಥ ಕಡೆ ತೆಗೆದುಕೊಂಡು ಬರತಕ್ಕದ್ದನ್ನು ಎಷ್ಟು ಮಾಡಿದ್ದಾರೆ ಎನ್ನತಕ್ಕ ಮಾಹಿತಿಯ ಬಗ್ಗೆ ಹೇಳುವುದಕ್ಕೆ ಹೋದರೆ ಇನ್ನೊಂದು ವಿಶ್ಲೇಷಣಾ ಭಾಷಣವಾಗುತ್ತದೆ. ಆದ್ದರಿಂದ ಈ ಎರಡು ವಿಚಾರಗಳನ್ನು ನಾನು ಕೇಳಲು

ಹೋಗುತ್ತಿಲ್ಲ. ಬಹುಶಃ ಅಪ್ರೋಪ್ರಿಯೇಷನ್ ಬಿಲ್ಲಿನ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಅದರ ಬಗ್ಗೆ ಮಾತನಾಡಬೇಕೆಂದಿದ್ದೇನೆ. ಈಗ ಬಹಳ ಪ್ರಮುಖವಾಗಿ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳತಕ್ಕದ್ದು. ನಿಮ್ಮ ಪ್ರಕಾರವೇ ರಾಜ್ಯದ 121 ತಾಲ್ಲೂಕುಗಳಲ್ಲಿ ಬಹಳ ತೀವ್ರತರವಾದ ಬರಗಾಲವಿದೆ ಎಂಬುದನ್ನು ನಿನ್ನೆ ಸಬ್‌ಮಿಟ್ ಮಾಡಿರುವ ಮೆಮೊರ್‍ಯಾಡಂನಲ್ಲಿ ಹೇಳಿದ್ದೀರಿ. ನಾನು ಕೇಳತಕ್ಕದ್ದು 121 ತಾಲ್ಲೂಕುಗಳಲ್ಲೂ ಸಹ ಬರಗಾಲದ ಪರಿಹಾರದ ಕೆಲಸಗಳು ಸಂಪೂರ್ಣವಾಗಿ ಸ್ಥಗಿತವಾಗಿವೆ. ಆ ಕೆಲಸಗಳನ್ನು ಯಾವತ್ತಿನಿಂದ ನೀವು ಪ್ರಾರಂಭ ಮಾಡುತ್ತೀರಾ? ಮಾನ್ಯ ಖರ್ಗೆಯವರು ಅಧ್ಯಕ್ಷತೆಯಲ್ಲಿರುವ ಸಮಿತಿಯ ಕೆಲಸಗಳೇನಿವೆ ಅವು ನಡೆಯುತ್ತಿಲ್ಲ. ಕಳೆದ ಒಂದು ತಿಂಗಳಿನಿಂದ ಬರಗಾಲದ ಪರಿಹಾರದ ಕೆಲಸಗಳು ಸ್ಥಗಿತವಾಗಿವೆ. ಎಲ್ಲೂ ಸಹ ಕೆಲಸಗಳು ಆಗುತ್ತಿಲ್ಲ. ಯಾವುದೇ ಜಿಲ್ಲಾಧಿಕಾರಿಯವರನ್ನು ಕೇಳಿ? ಅದನ್ನು ಯಾವಾಗಿನಿಂದ ಪ್ರಾರಂಭ ಮಾಡುತ್ತೀರಾ ಎಂಬುದು ಮೊದಲನೆಯ ಪ್ರಶ್ನೆ? ಕರ್ನಾಟಕದಲ್ಲಿ ತೋಟಗಾರಿಕಾ ಬೆಳೆಗಾರರಿಗೆ ಸುಮಾರು 12 ಸಾವಿರ ಕೋಟಿ ರೂ.ಗಳಷ್ಟು ನಷ್ಟವಾಗಿದೆ, ಅದಕ್ಕೆ ಪರಿಹಾರ ಕೊಡುವುದಕ್ಕೆ ನಿಮ್ಮ ಹತ್ತಿರ ಏನು ಉತ್ತರ ಇದೆ? ಇನ್ನೊಂದು, ಕಬ್ಬು ಬೆಳೆಗಾರರಿಗೆ ಬರಬೇಕಾಗಿರುವ ಬಾಕಿ. ಆ ಬಾಕಿಯ ಬಗ್ಗೆ ಏನಾದರೂ ಒಂದು ಕಾರ್ಯಕ್ರಮವನ್ನು ಈ ಸಂದರ್ಭದಲ್ಲಿ ಹೇಳಬೇಕು. ಸುಮಾರು 1200 ಕೋಟಿ ರೂ. ರೈತರಿಗೆ ದುಡ್ಡು ಬರತಕ್ಕದ್ದು ಇದೆ. ನಿಮ್ಮ ಕ್ಷೇತ್ರದಲ್ಲೇ ನಿಮ್ಮ ಮನೆ ಮುಂದೆ ರೈತರೆಲ್ಲಾ ಬಂದು ಧರಣಿ ಮಾಡಿರುವುದು ನಿಮ್ಮ ಗಮನಕ್ಕೆ ಬಂದಿದೆ. ಅದಕ್ಕೆ ಯಾವುದಾದರೂ ಒಂದು ರೂಪದಲ್ಲಿ ಪರಿಹಾರವನ್ನು ಕೊಡಬೇಕೆಂದು ಎರಡನೆಯದಾಗಿ ಕೇಳುತ್ತಿದ್ದೇನೆ. ಮೂರನೆಯದಾಗಿ, ನಾನು ಕಳೆದ ಸಲದ ಅಧಿವೇಶನದಲ್ಲೂ ಈ ಪ್ರಶ್ನೆ ಮಾಡಿದ್ದೆ. ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಬರತಕ್ಕಂಥ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಫೀಸ್ ಏನಿದೆ, ಸುಮಾರು 60 ಕೋಟಿ ರೂ ಅದು ಕಳೆದ ಮೂರು ವರ್ಷಗಳಿಂದ ಹಾಗೆಯೇ ಉಳಿದಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಬರತಕ್ಕಂಥ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಫೀಜು ಇದುವರೆಗೂ ಒಂದು ರೂಪಾಯಿ ಬಿಡುಗಡೆಯಾಗಿಲ್ಲ. ತಾವು ಮಾರ್ಚ್ 31ನೇ ತಾರೀಖು ನಾಲ್ಕು ತಿಂಗಳಿಗೆ ಓಟ್ ಆನ್ ಅಕೌಂಟ್ ತೆಗೆದುಕೊಂಡ ಸಂದರ್ಭದಲ್ಲಿ ಇನ್ನು ಎರಡು ತಿಂಗಳಿನಲ್ಲಿ ಹಣ ಬಿಡುಗಡೆ ಮಾಡುತ್ತೇನೆಂದು ಭರವಸೆಯನ್ನು ಕೊಟ್ಟಿದ್ದೀರಿ. ಆ ಭರವಸೆ ಹಾಗೆಯೇ ಉಳಿದಿದೆ. ಅದನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ಎಂದು ಕೇಳಬಯಸುತ್ತೇನೆ. ಅನಂತರ, ಗುತ್ತಿಗೆದಾರರದ್ದು ಸುಮಾರು 1400 ಕೋಟಿ ರೂಪಾಯಿ ಬಾಕಿ ದುಡ್ಡು ಉಳಿದಿದೆಯೆಂದು ನಾನು ಹೇಳಿದ್ದೆ. ತಾವು 800 ಕೋಟಿ ರೂಪಾಯಿ ಎಂದು ಹೇಳಿದ್ದಿರಿ. ಈಗ 237 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇನೆಂದು ಹೇಳಿದ್ದೀರಿ. ಕೆಲವು ಕಡೆ LOC ಬಿಡುಗಡೆಯಾಗಿರತಕ್ಕದ್ದು ನಿಜ. ಆದರೆ, ನಾನು ಹೇಳತಕ್ಕದ್ದು 1400 ಕೋಟಿ ರೂಪಾಯಿ ಬಾಕಿ ಇರುವ ಕಡೆ 1200 ಕೋಟಿ ರೂಪಾಯಿ ಬಾಕಿ ಉಳಿದಿದ್ದರೆ ಇವತ್ತು ಗುತ್ತಿಗೆದಾರರ ಪರಿಸ್ಥಿತಿ ಏನಾಗಬೇಕು? ಇವತ್ತು ವಿಶೇಷವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್‌ಗಳು ಒಂದೆರಡು ಲಾರಿ ಜಲ್ಲಿ ತೆಗೆದುಕೊಂಡು ಬಂದು ಮೇಂಟೆನೆನ್ಸ್ ಮಾಡು ಎಂದರೆ ಯಾವ ಗುತ್ತಿಗೆದಾರರೂ ಮುಂದೆ ಬರತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಅದಕ್ಕೆ ಏನಾದರೂ ವಿಶೇಷವಾದ ಯೋಜನೆಯನ್ನು ಮಾಡಲು ಸಾಧ್ಯವೇ? ಹಣಕಾಸಿಗೆ ಸಂಬಂಧಪಟ್ಟಂತೆ ನಾನು ನಾಲ್ಕೈದು ಪ್ರಶ್ನೆಗಳನ್ನು ಕೇಳಿದ್ದೇನಷ್ಟೆ.

**ಶ್ರೀ ಎಸ್.ಎಂ. ಕೃಷ್ಣ** : ಕಬ್ಬು ಬೆಳೆಗಾರರ ಸಮಸ್ಯೆಗಳು ಎಲ್ಲಾ ರಾಜ್ಯಗಳಲ್ಲೂ ಇವೆ. ನನಗೆ ಕೆಲವೊಂದು ಸಾರಿ ಕೇಂದ್ರ ಸರ್ಕಾರದ ಧೋರಣೆಯಿಂದ ಒಂದು ರೀತಿ ಭ್ರಮನಿರಸನವಾಗುತ್ತದೆ. ಇಡೀ ದೇಶದಲ್ಲಿ ಕಬ್ಬು ಬೆಳೆಯುವ ವಿಚಾರದಲ್ಲಿ ಮಹಾರಾಷ್ಟ್ರ ನಂಬರ್ ಒನ್. ಆದಾದಮೇಲೆ ಉತ್ತರ ಪ್ರದೇಶ. ನಮ್ಮ ಕರ್ನಾಟಕ ಮೂರನೆಯದು. ಎರಡನೇ ಸ್ಥಾನಕ್ಕೆ ಪೈಪೋಟಿ ಇರಬಹುದು. ಉತ್ತರ ಪ್ರದೇಶವನ್ನು ಹಿಂದಕ್ಕೆ ಹಾಕಿ ಮುಂದೆ ಹೋಗಬೇಕು ಎಂಬುದು ನಮ್ಮ ಇಚ್ಛೆ. ಹೋಗುತ್ತೇವೆ. ಕೇಂದ್ರ ಸರ್ಕಾರದವರು ಈಗ 600 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದರು. ಕರ್ನಾಟಕ ಅವರ ಕಣ್ಣಿಗೇಕೆ ಬೀಳಲಿಲ್ಲವೋ ನನಗೆ ಗೊತ್ತಾಗಲಿಲ್ಲ?

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ನೀವು ಅವರನ್ನು ಕೇಳಿಯೇ ಇಲ್ಲವಲ್ಲಾ?

**ಶ್ರೀ ಎಸ್.ಎಂ. ಕೃಷ್ಣ** : ನಾವು ಕೇಳಿದ್ದೇವೆ.

**ಶ್ರೀ ಜಗದೀಶ್ ಶೆಟ್ಟರ್** : ತಾವು ಯಾವ ರೀತಿಯಲ್ಲಿ ಪ್ರಪೋಸಲ್ ಕೊಟ್ಟಿದ್ದೀರಿ? ಏನು ಕೊಟ್ಟಿದ್ದೀರಿ? ಎಷ್ಟು ಕೇಳಿದ್ದೀರಿ? ಇನ್ನೇನನ್ನು ಕೇಳಿದ್ದೀರಿ? ಅದು ಬಹಳ ಮುಖ್ಯ.

**ಶ್ರೀ ಎಸ್.ಎಂ. ಕೃಷ್ಣ** : ಬೇಕಾದರೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅದರ ಬಗ್ಗೆ ಮಾಹಿತಿಯನ್ನು ಒದಗಿಸುತ್ತೇನೆ. ಅದರ ಪ್ರತಿಯನ್ನು ಮಾನ್ಯ ಶಿವಾನಂದ ಪಾಟೀಲರಿಗೂ ಕಳುಹಿಸುತ್ತೇನೆ. ನಾವು ಕೇಳಲಿಲ್ಲ ಎನ್ನತಕ್ಕ ಕಾರಣ ಸರಿಯಲ್ಲ. ಏಕೆಂದರೆ, ಇಷ್ಟೊಂದು ಜ್ವಲಂತ ಸಮಸ್ಯೆಯ ಬಗ್ಗೆ ಕೇಂದ್ರ ಸರ್ಕಾರದಿಂದ ಪರಿಹಾರವನ್ನು ಕೇಳದಿದ್ದರೆ, ಯಾರು ಕಬ್ಬನ್ನು ಬೆಳೆದರೋ ಅವರನ್ನು ಪರಿಹಾರ ಕೇಳಲು ನಮಗೆ ಸಾಧ್ಯವಾಗುತ್ತದೆಯೇ? ಆದ್ದರಿಂದ ನಾವು ಕೇಳಿದ್ದೇವೆ. ಆದರೆ ಅವರು ಕೊಡಲಿಲ್ಲ. ಏಕೆ ಕೊಡಲಿಲ್ಲ ಎನ್ನುವ ಬಗ್ಗೆ ಮತ್ತೆ ಮರುಚಿಂತನೆ ಮಾಡಿ ಎಂದು ಅವರನ್ನು ಕೇಳಿದ್ದೇವೆ. ಜೊತೆಗೆ revenue recovery dues ಎಂದು ಹೇಳಿ ಕೆಲವು ಕಬ್ಬಿನ ಕಾರ್ಖಾನೆಗಳು ಎಲ್ಲೆಲ್ಲಿ ಅವರು ಡಿಫಾಲ್ಟ್ ಮಾಡಿದ್ದಾರೆ, ಅದನ್ನು ನಾವು ಈಗ ಜಾರಿಗೆ ತಂದು ಕೊಟ್ಟಿದ್ದೇವೆ. ಆದ್ದರಿಂದ ಇನ್ನೊಂದು ಹದಿನೈದು ಇಪ್ಪತ್ತು ದಿವಸಗಳಲ್ಲಿ ಅದರಿಂದ ಯೋಗ್ಯವಾದಂಥ ಪ್ರತಿಕ್ರಿಯೆ ಬರಬಹುದು ಎಂದು ನಿರೀಕ್ಷಿಸಿದ್ದೇವೆ. ಮೊನ್ನೆ ತಾನೇ ನಾನು Can Development Director (Sugar Director) ಅವರ ಜೊತೆ ಮಾತನಾಡುತ್ತಿದ್ದೆ. ಒಂದು ಇರತಕ್ಕ ಸಕ್ಕರೆಯ ಸ್ಟಾಕ್‌ನ್ನು dispose of ಮಾಡಬೇಕು. ಆದರೆ, ಕೇಂದ್ರ ಸರ್ಕಾರದವರು ನಮಗೆ ಇಂತಿಷ್ಟೇ ಸ್ಟಾಕನ್ನು ಕರಗಿಸಬಹುದು ಎಂದು ನಿರ್ಬಂಧವನ್ನು ಹಾಕುತ್ತಾರೆ. ನಮಗೆ one time ಒಂದು order ಕೊಟ್ಟು ನೀವು ನಿಮ್ಮ ಸಕ್ಕರೆ ಸ್ಟಾಕನ್ನು ಕರಗಿಸಿ, ಆ ಮೂಲಕ ರೈತರಿಗೆ ಹಣ ಪಾವತಿ ಮಾಡಿ ಎಂದು ಹೇಳಿದರೆ, ಯಾವ್ಯಾವ ಸಕ್ಕರೆ ಕಾರ್ಖಾನೆಗಳು ಇದೆ ಅದನ್ನೆಲ್ಲಾ ಫೈಸಲ್ ಮಾಡಲು ಅನುಕೂಲವಾಗುತ್ತದೆ. ಎರಡನೆಯದಾಗಿ, ದ್ರಾಕ್ಷಿ ತೋಟಗಳೆಲ್ಲಾ ಒಣಗಿ ಹೋಗಿದೆ ಎಂದು ಹೇಳಿದ್ದಾರೆ; ನಿಜ. ಬರಗಾಲದಲ್ಲಿ ಕೇವಲ ಕಬ್ಬು, ಭತ್ತ ಎರಡೇ ಒಣಗಿ ಹೋಗುತ್ತದೆ ಎಂದೇನಲ್ಲ. ಈ ಬಿಜಾಪುರದಲ್ಲಿ ಮತ್ತು ಬೆಳಗಾಂನಲ್ಲಿ ದ್ರಾಕ್ಷಿ ತೋಟಗಳೆಲ್ಲಾ ಒಣಗಿ ಹೋಗಿರತಕ್ಕದ್ದು ನಮ್ಮ ರಾಜ್ಯದಲ್ಲಿ ಎಷ್ಟು ತೀಕ್ಷ್ಣವಾದಂತಹ ಬರಗಾಲದ ಇದೆ ಎನ್ನುವುದಕ್ಕೆ ಒಂದು ಇಂಡಿಕೇಷನ್ ಆಗಿದೆ. ನಾನು ಅವರಿಗೆ ಸಜೆಸ್ಟ್ ಮಾಡತಕ್ಕಂಥದ್ದು ಏನೆಂದರೆ, ಅವರುಗಳು ಈ insurance ಚೌಕಟ್ಟನ್ನು ಉಪಯೋಗಿಸಿಕೊಂಡರೆ ಮುಂದಿನ ದಿನಗಳಲ್ಲಿ ಇಂತಹ ಒಂದು contingency ಬಂದಾಗ ಅದು ಅವರಿಗೆ ಅನುಕೂಲವಾಗಬಹುದು. VAT ಬಗ್ಗೆ ತಾವು ಹೇಳಿದಿರಿ. ನಿಜ, ಎರಡು ವರ್ಷಗಳಿಂದ

ಅದರ ಜಾರಿಯನ್ನು ನಾವು ನಿರೀಕ್ಷೆ ಮಾಡುತ್ತಲೇ ಇದ್ದೇವೆ. ಕರ್ನಾಟಕ ಮತ್ತು ಮಧ್ಯಪ್ರದೇಶ, ಈ ಎರಡೂ ರಾಜ್ಯಗಳು VAT ಜಾರಿಗೆ ಬರಬೇಕು ಎಂದು ಪ್ರತಿಪಾದನೆ ಮಾಡಿದಂತಹ ಎರಡು ಪ್ರಮುಖವಾದಂತಹ ರಾಜ್ಯಗಳಾಗಿವೆ. ನಾವಿಬ್ಬರೂ ಪ್ರಮುಖವಾಗಿ ಇವತ್ತು distress ಗೆ ಒಳಪಟ್ಟಿದ್ದೇವೆ. ಅದಕ್ಕೆ ಏನೋ ಒಂದು ಕಾರಣ ಇರಬೇಕು, ಆಡಳಿತಾತ್ಮಕವಾದಂತಹ ಕಾರಣಗಳಿರಬಹುದು, ಆದ್ದರಿಂದಾಗಿ ಅವರು VAT ಅನ್ನು ಜಾರಿಗೆ ತರಲಿಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಈ budgetary adjustments ನಾವು ಮಾಡಬೇಕಾಯಿತು ಎನ್ನತಕ್ಕಂಥದ್ದನ್ನು ನಾನು ಈ ಸಮಯದಲ್ಲಿ ಹೇಳುತ್ತೇನೆ. ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಹಣ ಬಿಡುಗಡೆ ಮಾಡುವ ಬಗ್ಗೆ ಮಾನ್ಯ ಸಿಂಧ್ಯಾರವರು ಹಿಂದೆ ಪ್ರಸ್ತಾಪ ಮಾಡಿದಂತಹ ಕಾಲದಲ್ಲಿ ಆ ಹಣವನ್ನು ರಿಲೀಸ್ ಮಾಡುತ್ತೇವೆಂದು ನಾನು ಒಪ್ಪಿಕೊಂಡಿದ್ದೆ. ಒಂದು ವಿಚಾರವನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಮ್ಮ ಈ insurance cover release, ಬಡ್ಡಿ ಮನ್ನಾದಿಂದಾಗಿ ನಾವೇನು ಹಣ ಕಟ್ಟಬೇಕಾಗಿ ಬಂತು, ಇವೆಲ್ಲಾ ಒತ್ತಡಗಳ ಮಧ್ಯೆ ಇದಕ್ಕೆ ನಾವು ವಿಶೇಷವಾದಂತಹ ಗಮನವನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಮಾನ್ಯ ಸಿಂಧ್ಯಾರವರು ಈ ಬಗ್ಗೆ ಮತ್ತೆ ಜ್ಞಾಪಕ ಮಾಡಿ ನನಗೆ ಉಪಕಾರ ಮಾಡಿದ್ದಾರೆ. ಅದನ್ನು ಆದಷ್ಟು ಬೇಗ ಅದನ್ನು ಇತ್ಯರ್ಥ ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಮಾನ್ಯ ಮುಖ್ಯಮಂತ್ರಿಗಳೇ, ನಾಲ್ಕು ವರ್ಷಗಳಿಂದ ಪೆಂಡಿಂಗ್ ಇದೆ. Atleast, ಕಳೆದ 2–3 ವರ್ಷದ್ದಾದರೂ ರಿಲೀಸ್ ಮಾಡಿಕೊಡಿ.

**ಶ್ರೀ ಎಸ್.ಎಂ. ಕೃಷ್ಣ** : ಕಳೆದ ಎರಡು ವರ್ಷದ್ದನ್ನು ನಾನು ರಿಲೀಸ್ ಮಾಡಿಸಿಕೊಡುತ್ತೇನೆ. ಕಂಟ್ರಾಕ್ಟರ್‌ಗಳು ಬಹಳ ತೊಂದರೆಯಲ್ಲಿದ್ದಾರೆ ಎಂಬುದು ನಿಜ. ಮಾನ್ಯ ಹನುಮೇಗೌಡರಂತೂ ಈ ಬಗ್ಗೆ ನನ್ನ ಬಳಿ ಆಗ್ಗಿಂದಾಗ್ಗೆ ಬರುತ್ತಲೇ ಇರುತ್ತಾರೆ. ಕಂಟ್ರಾಕ್ಟರ್‌ಗಳು ಸತ್ತು ಹೋದರು ಎಂದು ಅವರು ಹೇಳುತ್ತಿರುತ್ತಾರೆ. ನಿಜ, ಕಂಟ್ರಾಕ್ಟರ್‌ಗಳು ಸತ್ತು ಹೋಗಿದ್ದಾರೆ. ಆದರೆ ಸ್ವಲ್ಪ ಭರಿಸಬೇಕಾಗುತ್ತದೆ. ನಾವು 235 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ ಎಂದು ಹೇಳುತ್ತೇವೆ. ಕಂಟ್ರಾಕ್ಟರ್‌ಗಳು ಬಹಳ ಕಷ್ಟದಲ್ಲಿದ್ದಾರೆ, ಅದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ನಮ್ಮ financial ಚೌಕಟ್ಟಿನಲ್ಲಿ ಇದನ್ನು ನಾವು ಅನುಸರಿಸಿಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ ಅದರ ಬಗ್ಗೆ ನಾವು ಗಮನ ಕೊಡುತ್ತೇವೆ.

**ಶ್ರೀ ಸಿ. ಚೆನ್ನಿಗಪ್ಪ** : ಮಾನ್ಯ ಅಧ್ಯಕ್ಷರೇ,..................;

**ಅಧ್ಯಕ್ಷರು** : ಮಾನ್ಯ ಚೆನ್ನಿಗಪ್ಪನವರೇ, ಎಲ್ಲಾ ಉತ್ತರ ಹೇಳಿಯಾಗಿದೆ. ನೀವು ಕೇಳುವುದೇನು ಉಳಿದಿದೆ? Come on tell me. ಮಾನ್ಯ ಜ್ಞಾನೇಂದ್ರರವರು initiate ಮಾಡಿದ್ದಾರೆ. ಅವರೊಬ್ಬರಿಗೆ ಮಾತ್ರ ನಾನು ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಸಿ. ಚೆನ್ನಿಗಪ್ಪ** : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ನಿಮಿಷ.

**ಅಧ್ಯಕ್ಷರು** : ಆಯಿತು, ಬೇಗ ಅದೇನು ಹೇಳಿ ಮುಗಿಸಿ.

**ಶ್ರೀ ಸಿ. ಚೆನ್ನಿಗಪ್ಪ** : ಮಾನ್ಯ ಅಧ್ಯಕ್ಷರೇ, ಆಧುನಿಕ ಶಿಕ್ಷಣಕ್ಕೆ ಹೆಚ್ಚಿಗೆ ಒತ್ತು ಕೊಟ್ಟಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ಉತ್ತರ ಕೊಡುವ ಸಮಯದಲ್ಲಿ ಶಿಕ್ಷಕರ ನೇಮಕ ಬಗ್ಗೆ ಹೇಳಿದರು. ಆಯಾ ವಿಷಯಗಳಿಗೆ ತಕ್ಕಂತೆ ಪ್ರೌಢಶಾಲೆಗಳಿಗೆ

ಇವತ್ತು ಶಿಕ್ಷಕರ ನೇಮಕಾತಿ ಆಗಿಲ್ಲ. ಅದರ ಬಗ್ಗೆ ಉತ್ತರ ಕೊಟ್ಟಿಲ್ಲ. ನೇಮಕಾತಿ ಯಾವಾಗ ಮಾಡುತ್ತೀರಿ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು** : ಆಯಿತು. ಒಂದೇ ಒಂದು ಕ್ಲಾರಿಫಿಕೇಷನ್ ಸಾಕು. ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಡಿ.ವಿ. ಸದಾನಂದಗೌಡ** : ಮಾನ್ಯ ಅಧ್ಯಕ್ಷರೇ, ........

**ಅಧ್ಯಕ್ಷರು** : ಮಾನ್ಯ ಜ್ಞಾನೇಂದ್ರರವರು ವಿರೋಧ ಪಕ್ಷದ ಕಡೆಯಿಂದ ಚರ್ಚೆಯನ್ನು initiate ಮಾಡಿದರು. ಅವರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ** : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ನಿಮಿಷ, ನಾನು ಕ್ಲಾರಿಫಿಕೇಷನ್ ಕೇಳಿ ಬಿಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಒಂದು ವಿಚಾರದ ಬಗ್ಗೆ ಕ್ಲಾರಿಫೈ ಮಾಡಬೇಕು. ಮೊನ್ನೆ ನಾವು ಬರದ ಚರ್ಚೆಯ ಸಂದರ್ಭಗಳಲ್ಲಿ ನಾವೆಲ್ಲಾ ಒಮ್ಮತಕ್ಕೆ ಬಂದ ರೀತಿಯಲ್ಲಿ 127 ಕೋಟಿ ರೂಪಾಯಿಗಳ ಬಡ್ಡಿ ಮನ್ನಾ ಮಾಡುವ ಸಂಬಂಧದಲ್ಲಿ ಸರ್ಕಾರ ಈಗಾಗಲೇ 33 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದೆ. ಈ ತಿಂಗಳ ಅಂತ್ಯದೊಳಗೆ, ಅಂದರೆ 31ನೇ ಜುಲೈಯೊಳಗೆ ಉಳಿದ 45 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡುತ್ತೇವೆ ಎಂದು ತಾವು ಹೇಳಿದ್ದಿರಿ. ಅದು ಈಗ ಯಾವ ಹಂತದಲ್ಲಿದೆ? ನಾವು ಮಾತುಕತೆ ಆಡಿದಾಗ ಭರವಸೆ ಕೊಟ್ಟಾಗ ನಾಳೆಯೇ ರಿಲೀಸ್ ಮಾಡುತ್ತೀರೋ! ಹೇಗೆ! ಎಂಬ ಬಗ್ಗೆ ಹೇಳಬೇಕು. ಎರಡನೆಯದಾಗಿ, insurance ಬಗ್ಗೆ ಹೇಳುವುದಾದರೆ Insurance Company ಯವರನ್ನು ಕರೆಸಿ ನಾವು ಎಲ್ಲವನ್ನೂ ಕೂಡ ಮಾತನಾಡಿದ್ದೇವೆ ಎಂದು ತಾವು ತಿಳಿಸಿದ್ದೀರಿ. ಪರಿಹಾರದ ವರದಿ ಬಂತ ತಕ್ಷಣ ಇದಕ್ಕೆ ಬೇಕಾದಂತಹ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಮೊನ್ನೆ ನಾವು ಒಪ್ಪಿಕೊಂಡಿದ್ದೇವು. ಈಗಾಗಲೇ ಆ ವರದಿ ಬಂದಿದೆಯೇ? ಆ ವರದಿ ಬಂದಿದ್ದಲ್ಲಿ, ಆ ಹಣವನ್ನು ಸರ್ಕಾರ ಯಾವಾಗ ಬಿಡುಗಡೆ ಮಾಡುತ್ತದೆ ಎಂಬುದನ್ನು ಹೇಳಬೇಕು. ಮೂರನೆಯದಾಗಿ, .....

**ಅಧ್ಯಕ್ಷರು** : ಒಬ್ಬೊಬ್ಬರು 3–4 ಕ್ಲಾರಿಫಿಕೇಷನ್‌ಗಳನ್ನು ಕೇಳುತ್ತಾ ಹೋದರೆ ಹೇಗೆ?

**ಶ್ರೀ ಡಿ.ವಿ. ಸದಾನಂದಗೌಡ** : ಮಾನ್ಯ ಅಧ್ಯಕ್ಷರೇ, This is a discussion on finance bill.

**ಅಧ್ಯಕ್ಷರು** : ಅದು ನನಗೂ ಗೊತ್ತಿದೆ. ಒಂದೊಂದು ಪಾರ್ಟಿಯವರೇ 7–8 ಜನ ಕ್ಲಾರಿಫಿಕೇಷನ್‌ಗಳನ್ನು ಕೇಳುತ್ತಾ ಹೋದರೆ ಹೇಗೆ? ನಿಮ್ಮ ನಾಯಕರು ಈಗಾಗಲೇ ಕ್ಲಾರಿಫಿಕೇಷನ್ ಕೇಳಿದ್ದಾರಲ್ಲಾ. ಮಾನ್ಯ ಜ್ಞಾನೇಂದ್ರರವರು discussion initiate ಮಾಡಿದರು, ಆದ್ದರಿಂದ ಅವರಿಗೆ ಒಂದು ಅವಕಾಶ ಕೊಡೋಣ. ಪ್ರತಿಯೊಬ್ಬರೂ ಮಾತನಾಡಿದ್ದನ್ನೇ ರಿಪೇಟ್ ಮಾಡುತ್ತಾ ಹೋದರೆ ಹೇಗೆ?

**ಶ್ರೀ ಡಿ.ವಿ. ಸದಾನಂದಗೌಡ** : ಆಯಿತು, ನಾನು ಈಗ ಪ್ರಸ್ತಾಪ ಮಾಡಿದ ಎರಡು ವಿಷಯಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಕ್ಲಾರಿಫಿಕೇಷನ್ ನೀಡಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು** : ಸಾಕು. ಮಾನ್ಯ ಜ್ಞಾನೇಂದ್ರರವರು discussion initiate ಮಾಡಿದ್ದರು. ಅವರು ಕೇಳುವುದಕ್ಕೆ ನಂತರ ಉತ್ತರ ಕೊಡುತ್ತಾರೆ. ಈಗ ನಿಮ್ಮ ಪ್ರಸ್ತಾಪಗಳಿಗೆ ಉತ್ತರ ಕೊಡುತ್ತಾರೆ.

**ಶ್ರೀ ಎಸ್.ಎಂ. ಕೃಷ್ಣ** : ಏನೇನನ್ನು ನಾವು ಒಪ್ಪಿಕೊಂಡಿದ್ದೇವೋ ಅದನ್ನೆಲ್ಲಾ ನಾವು ರಿಲೀಸ್ ಮಾಡುತ್ತೇವೆ. Insurance ಬಗ್ಗೆ ಕೂಡ ಅದೇ ಮಾತು ಹೇಳಬಯಸುತ್ತೇನೆ. ನಿನ್ನೆ ನಡೆದಂತಹ ನಮ್ಮ ಆ ಮಾತುಕತೆಯ ಉದ್ದೇಶ, ಅವರನ್ನು ಜರೂರು ದೆಹಲಿಯಿಂದ ಇಲ್ಲಿಗೆ ಮಾತುಕತೆ ಮಾಡಲಿಕ್ಕಾಗಿ ಬರಬೇಕು ಎಂದು ಕರೆಸಿದ್ದೇ ಅದಕ್ಕೆ ನಾವು ಕೊಟ್ಟಿರತಕ್ಕಂಥ ವಿಶೇಷವಾದಂತಹ ಒತ್ತು ಎಂದು ಮಾನ್ಯ ಸದಸ್ಯರ ಗಮನಕ್ಕೆ ನಾನು ತರಬಯಸುತ್ತೇನೆ. ನಾವು ಮತ್ತು ನೀವು ಏನೆಲ್ಲವನ್ನೂ ಕುರಿತು ಮಾತನಾಡಿದ್ದೇವೋ ಅದೆಲ್ಲವನ್ನೂ ಕೂಡ ನಾವು ಕಾರ್ಯರೂಪಕ್ಕೆ ತರುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

**ಅಧ್ಯಕ್ಷರು** : ಕೊನೆಯದಾಗಿ, ಮಾನ್ಯ ಜ್ಞಾನೇಂದ್ರರವರು ಸ್ಪಷ್ಟೀಕರಣ ಕೇಳಿ.

**ಶ್ರೀ ಸಿ. ಚೆನ್ನಿಗಪ್ಪ** : ಮಾನ್ಯ ಮುಖ್ಯಮಂತ್ರಿಗಳ ಶಿಕ್ಷಕರ ಬಗ್ಗೆ ಹೇಳಲೇ ಇಲ್ಲವಲ್ಲಾ.

**ಅಧ್ಯಕ್ಷರು** : ಅದನ್ನು ಮಾಡುತ್ತಾರೆ ಬಿಡಿ. ನೀವು ಹೇಳಿದ ಮೇಲೆ ಆಗುತ್ತದೆ ಬಿಡಿ.

**ಶ್ರೀ ಆರಗ ಜ್ಞಾನೇಂದ್ರ** : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು Reserve Bank ನಿಂದ ಅವರಿಗೆ ಬಂದಂತಹ ಪತ್ರವನ್ನೇ ಸದನದಲ್ಲಿ ತಾವು ಕ್ಯಾಷ್ ಅನ್ನು ಯಾವ ರೀತಿ ಹ್ಯಾಂಡಲ್ ಮಾಡಿದ್ದೇವೆ ಎನ್ನುವುದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕಾಗಿ ಉಪಯೋಗಿಸಿದರು. ಈಗಾಗಲೇ ಹೇಳಿದ್ದಾರೆ. ಅದರ ಬಗ್ಗೆ ನಾನು ಚರ್ವಿತಚರ್ವಣ ಮಾಡುವುದಕ್ಕೆ ಹೋಗುವುದಿಲ್ಲ. PWD ಮತ್ತು ನೀರಾವರಿ ಇಲಾಖೆಗಳಲ್ಲಿ ಇರುವಂತಹ ಬಿಲ್‌ಗಳ ಬಾಕಿ ಮತ್ತು ಸಣ್ಣ ಕೈಗಾರಿಕೆಗಳ ಸಹಾಯ ಧನ ಪಾವತಿ, ಇವುಗಳನ್ನು ಯಾವಾಗ ರಿಲೀಸ್ ಮಾಡುತ್ತಾರೆ ಎನ್ನುವುದನ್ನು ಹೇಳಿಬಿಟ್ಟರೆ ನಮಗೆ ಬಹುಶಃ ಅವರು ಕ್ಯಾಷ್ ಬ್ಯಾಲೆನ್ಸ್ ಅನ್ನು ಹೇಗೆ ಹ್ಯಾಂಡಲ್ ಮಾಡಿದ್ದಾರೆ ಎನ್ನುವಂತಾದ್ದು ಇಡೀ ರಾಜ್ಯಕ್ಕೆ ಗೊತ್ತಾಗುತ್ತದೆ. ಅದರ ಬಗ್ಗೆ ಹೇಳಬೇಕು.

**ಮಾನ್ಯ ಸದಸ್ಯರು** : ಅದು ಹಿಂದಿನ ಸರ್ಕಾರದ ಬಾಕಿಯಾಗಿದೆ.

**ಅಧ್ಯಕ್ಷರು** : ಅದರ ಬಗ್ಗೆ ಆಗಲೇ ಹೇಳಿದರಲ್ಲಾ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದರಲ್ಲಾ.

**ಗೊಂದಲ**

**ಶ್ರೀ ಆರಗ ಜ್ಞಾನೇಂದ್ರ** : ....... ನಿಮಗೆ ಬೇಕಾದಂತೆ ನನಗೆ ಮಾತನಾಡಲಿಕ್ಕಾಗುವುದಿಲ್ಲ.

**ಗೊಂದಲ**

**ಅಧ್ಯಕ್ಷರು** : ನೋಡಿ, ಜ್ಞಾನೇಂದ್ರರವರೇ, LOC ಅಂದರೆ ಒಂದೇ. PWD ಸಾಲ ಅಂದರೂ ಒಂದೇ. ಹಣಕಾಸಿನ ವ್ಯವಸ್ಥೆಯನ್ನು ನೋಡಿಕೊಂಡು ರಿಲೀಸ್ ಮಾಡುತ್ತೇನೆ ಎಂದು ಆಗಲೇ ಅದರ ಬಗ್ಗೆ ಹೇಳಿದರಲ್ಲಾ.

**ಮಾನ್ಯ ಸದಸ್ಯರು** : ಮಾನ್ಯ ಜ್ಞಾನೇಂದ್ರರವರೇ, ಅದು ಹಿಂದಿನ ಸರ್ಕಾರದ ಬಾಕಿ. ಅದನ್ನು ಕೇಳೋ ರೀತಿಯಲ್ಲಿ ಕೇಳಿ.

**ಶ್ರೀ ಆರಗ ಜ್ಞಾನೇಂದ್ರ** : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ದೊಡ್ಡ ದೊಡ್ಡ ಕೈಗಾರಿಕೆಗಳು ನಮ್ಮ ರಾಜ್ಯಕ್ಕೆ ಬರುತ್ತವೆ ಹಾಗೂ ಅವುಗಳು ಇಲ್ಲಿಗೆ ಯಾವ ದೃಷ್ಟಿಯಿಂದ ಬರುತ್ತಿವೆ ಎನ್ನುವುದನ್ನೂ ಸಹ ಅವರು ಇಂದು ಇಲ್ಲಿ ಹೇಳಿದರು. ನಮ್ಮ ರಾಜ್ಯದಲ್ಲಿ ಈ ಒಂದು ಸಬ್ಸಿಡಿಯನ್ನು ಕೊಡಲಿಕ್ಕೆ ಬಾಕಿ ಇದ್ದು, ಮುಚ್ಚಿರತಕ್ಕಂಥ ಕೈಗಾರಿಕೆಗಳು ಎಷ್ಟು ಎಂಬುದನ್ನು ಹೇಳಿದರೆ

ಬಹುಶಃ ಚೆನ್ನಾಗಿ ಆಗುತ್ತಿತ್ತು ಎನ್ನುವುದನ್ನು ಹೇಳುತ್ತಾ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 16 ಸಾವಿರ ಮಜರೆ ಹಳ್ಳಿಗಳು ಯಾವುವಿವೆ, ದಲಿತರು, ಬಡವರು, ನಮಗೆ ನಿಮಗೆ ಓಟು ಕೊಟ್ಟಂತಹವರು, ಅವರು ವಿದ್ಯುತ್ ಸಂಪರ್ಕದಿಂದ ವಂಚಿತರಾಗಿದ್ದಾರೆ. ಆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಿಕ್ಕಾಗಿ ಬಡ್ಡಿ ರಹಿತವಾಗಿರತಕ್ಕಂಥ ಸಾಲವನ್ನು ನಿಮಗೆ ಕೊಡುತ್ತೇವೆ ಎಂದು ಕೇಂದ್ರ ಸರ್ಕಾರ ರಾಜ್ಯಕ್ಕೆ ಕಳೆದೆರಡು ವರ್ಷಗಳಿಂದ ಹೇಳುತ್ತಿದೆ. ನೀವು ಇವತ್ತಿಗೂ ಸಹ ಸರ್ಕಾರದ ಗ್ಯಾರಂಟಿಯನ್ನು ಕೊಡದೇ, 16 ಸಾವಿರ ಮಜರೆ ಹಳ್ಳಿಗಳನ್ನು ಇವತ್ತೂ ಕೂಡ ಕತ್ತಲಲ್ಲಿ ಇಡುವಂತಹ, ಚಿಮಣಿ ಬುಡ್ಡಿಯಲ್ಲಿ ಅವರು ಬದುಕತಕ್ಕಂಥ ಕೆಲಸವನ್ನು ಮಾಡಿದ್ದೀರಿ, ಆ ಒಂದು ಗ್ಯಾರಂಟಿಯನ್ನು ಯಾವಾಗ ಕೊಡುತ್ತೀರಿ ಎನ್ನುವಂತಾದ್ದನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕೆಂದು ಕೋರುತ್ತೇನೆ. ಐ.ಪಿ ಸೆಟ್‌ಗಳ ಬಗ್ಗೆ ವಿಶೇಷವಾಗಿ ಇಲ್ಲಿ ಪ್ರಸ್ತಾಪವಾಗಿದೆ. ಬೇರೆ ಬೇರೆ ಬೆಳೆಗಳು ಉರಿದು ಹೋಗಿವೆ, ನಮ್ಮ ರೈತರು ಇಂತಹ ಒಂದು ಕಷ್ಟದಲ್ಲಿದ್ದಾರೆ, ಈ ಸ್ಥಿತಿಯಲ್ಲಿ ಏನು ಇದುವರೆಗಿನ ಕಟ್ಟತಕ್ಕಂಥ ಅಸಲಿನ ಹಣ ಏನಿದೆಯೋ, ಅದನ್ನು ಮನ್ನಾ ಮಾಡತಕ್ಕಂಥ ಒಂದು ನಿಲುವನ್ನು ತಾವು ತೆಗೆದುಕೊಳ್ಳಬೇಕು. ಈ ಸಂದರ್ಭದಲ್ಲಿ ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದರೆ ನಮ್ಮ ರೈತರಿಗೆ ಸ್ವಲ್ಪವಾದರೂ ಕೂಡ ಸಹಾಯವಾಗುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.

**ಶ್ರೀ ಎ. ರಾಮದಾಸ್** : ಮಾನ್ಯ ಅಧ್ಯಕ್ಷರೇ, .........

**ಅಧ್ಯಕ್ಷರು** : ಅವರು ಈಗಾಗಲೇ ಎಲ್ಲದಕ್ಕೂ ಉತ್ತರ ಹೇಳಿದ್ದಾರೆ.

**ಶ್ರೀ ಎ. ರಾಮದಾಸ್** : ....... ಇಲ್ಲಿ ನನ್ನ ಹೆಸರು ಪ್ರಸ್ತಾಪವಾಗಿದ್ದು, ಆ ಬಗ್ಗೆ ರೆಕಾರ್ಡ್‌ಗೆ ಹೋಗಿರುವುದರಿಂದ, ಮಾನ್ಯ ಅಧ್ಯಕ್ಷರು ನನಗೆ ಅವಕಾಶ ಕೊಟ್ಟರೆ ನಾನು ಇಲ್ಲಿ ಕ್ಲಾರಿಫಿಕೇಷನ್ ಕೊಡಬಹುದು. ಇಲ್ಲವೆನ್ನುವುದಾದರೆ, ಅದನ್ನು ನಾನು ಹೊರಗಡೆ ಹೇಳಬೇಕಾಗುತ್ತದೆ.

**ಅಧ್ಯಕ್ಷರು** : ಒಂದೇ ಒಂದು ಕ್ಲಾರಿಫಿಕೇಷನ್ ..........

**ಶ್ರೀ ಡಿ.ಬಿ. ಚಂದ್ರೇಗೌಡ** : ಮಾನ್ಯ ಸದಸ್ಯರು ಈ ರೀತಿಯಗಿ threat ಮಾಡುವುದು ಬೇಡ.

**ಗೊಂದಲ**

**ಅಧ್ಯಕ್ಷರು** : ಐ.ಪಿ. ಸೆಟ್‌ಗಳಿಗೆ ಸಂಬಂಧಿಸಿದ ಯೋಜನೆಯನ್ನು ಎಕ್ಸ್‌ಟೆಂಡ್ ಮಾಡುತ್ತೇನೆ ಎಂದು ಆಗಲೇ ಹೇಳಿದರಲ್ಲಾ.

**ಗೊಂದಲ**

**ಅಧ್ಯಕ್ಷರು** : ನೀವು ಏಕೆ ನಿಂತಿದ್ದೀರಿ ಎಂಬುದು ನಮಗೆ ಗೊತ್ತಿದೆ ಬಿಡಿ.

**ಗೊಂದಲ**

***

**ಅಧ್ಯಕ್ಷರು** : ವರದಿಗಾರರೇ, ಏನನ್ನೂ ಬರೆದುಕೊಳ್ಳಬೇಡಿ. 10–15 ಜನ ಮಾತನಾಡಲು ಎದ್ದು ನಿಂತುಕೊಂಡರೆ ಏನನ್ನೂ ಬರೆದುಕೊಳ್ಳಬೇಡಿ. Please, don't take down.

* * * ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಿರುವುದಿಲ್ಲ.

**ಗೊಂದಲ**

**ಅಧ್ಯಕ್ಷರು** : ಮಾನ್ಯ ಮುಖ್ಯಮಂತ್ರಿಗಳು ಎಲ್ಲದಕ್ಕೂ ಸಮಂಜಸವಾದ ಉತ್ತರವನ್ನು ಕೊಟ್ಟಿದ್ದಾರೆ. ಸುಮ್ಮನೆ ಏಕೆ ಗಲಾಟೆ ಮಾಡುತ್ತೀರಿ?

**ಗೊಂದಲ**

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರುಗಳು ಸದನದಿಂದ ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)**

**ಶ್ರೀ ಬಿ. ಸೋಮಶೇಖರ್** : ಮಾನ್ಯ ಅಧ್ಯಕ್ಷರೇ, Crop insurance premium ಅನ್ನು ಕಟ್ಟುವಂತದ್ದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದಂತಹ ಉತ್ತರವನ್ನು ಕೊಡಲಿಲ್ಲ...

**ಅಧ್ಯಕ್ಷರು** : ಮಾನ್ಯ ಸೋಮಶೇಖರ್‌ರವರೇ, ತಾವು ಕೇಳಿದ ಕ್ಲಾರಿಫಿಕೇಷನ್‌ಗಳಿಗೆಲ್ಲಾ ಮಾನ್ಯ ಮುಖ್ಯಮಂತ್ರಿಗಳು ಆಗಲೇ ಉತ್ತರ ಹೇಳಿದ್ದಾರಲ್ಲಾ?

**ಶ್ರೀ ಬಿ. ಸೋಮಶೇಖರ್** : ಎರಡು – ಮೂರು ವಿಚಾರಗಳಲ್ಲಿ ನಾವು ಸ್ಪಷ್ಟವಾದ ಉತ್ತರವನ್ನು ಕೇಳಿದ್ದೆವು. ಒಂದು ಕ್ರಾಪ್ ಇನ್‌ಶೂರೆನ್ಸ್ ಪ್ರೀಮಿಯಮ್ ಕಟ್ಟುವುದರಲ್ಲಿ ಸರ್ಕಾರ ಸ್ಪಷ್ಟವಾದ ಉತ್ತರ ಕೊಡಲಿಲ್ಲ. ಹುಲಗುಡ್ಡೆ ನೀರಾವರಿ ಯೋಜನೆ ಬಗ್ಗೆ ಸರ್ಕಾರ ಉತ್ತರ ಕೊಟ್ಟಿಲ್ಲ. ಈ ಪಂಪ್‌ಸೆಟ್‌ಗಳ ಬಾಕಿ ಬಡ್ಡಿ ಅಸಲು ರದ್ದು ಮಾಡಬೇಕೆಂದು ಅನೇಕರ ಬೇಡಿಕೆ ಇತ್ತು, ಅದರ ಬಗ್ಗೆಯೂ ಸ್ಪಷ್ಟವಾದ ಉತ್ತರ ಹೇಳಲಿಲ್ಲ. ಆದ್ದರಿಂದ ಈ ಉತ್ತರವನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

**(ಅಖಿಲ ಭಾರತ ಪ್ರಗತಿಪರ ಜನತಾದಳದ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡಿದರು)**

**ಗೊಂದಲ**

**ಅಧ್ಯಕ್ಷರು** : LOC ಯಿಂದ ಹಿಡಿದು ಎಲ್ಲವನ್ನು ಹೇಳಿದ್ದಾರಲ್ಲಾ, ಕುಳಿತುಕೊಳ್ಳಿ.

**ಶ್ರೀ ಪಿ.ಜಿ.ಆರ್. ಸಿಂಧ್ಯ** : ಮಾನ್ಯ ಅಧ್ಯಕ್ಷರೆ, ಕೋಪ ಮಾಡಿಕೊಳ್ಳಬೇಡಿ. ನಾವು ಅವರಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇವೆ.

**ಅಧ್ಯಕ್ಷರು** : ಕೋಪದ ಪ್ರಶ್ನೆ ಅಲ್ಲ. ನನಗೂ ಗೊತ್ತಿದೆ. ನಾನೂ ರೈತ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಪಿ.ಜಿ.ಆರ್. ಸಿಂಧ್ಯ** : ದಯಮಾಡಿ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಕ್ಲಾರಿಫಿಕೇಷನ್ ಕೇಳಿದ್ದೇನೆ. ಬರಗಾಲದ ಕೆಲಸಗಳು ಎಲ್ಲ ಕಡೆಗಳಲ್ಲಿಯೂ ಸ್ಥಗಿತ ಆಗಿವೆ. ಯಾವಾಗ ಪುನರಾರಂಭ ಮಾಡುತ್ತೀರಿ ಎಂದು ಕೇಳುತ್ತಿದ್ದೇನೆ. ಅದಕ್ಕೆ ಉತ್ತರವನ್ನು ನಾನು ಅವರಿಂದ ಆದರೂ ಅಥವಾ ಮಾನ್ಯ ಖರ್ಗೆಯವರಿಂದ ಆದರೂ ನಿರೀಕ್ಷೆ ಮಾಡುತ್ತೇನೆ. ಎಲ್ಲ ಕಡೆ ಕೆಲಸ ಸ್ಥಗಿತ ಆಗಿದೆ. ಅದನ್ನು ಯಾವಾಗಿನಿಂದ ಪ್ರಾರಂಭ ಮಾಡುತ್ತೀರಿ? ನೀವೇ ಹೇಳಿರುವ ಹಾಗೆ 128 ತಾಲ್ಲೂಕುಗಳಲ್ಲಿ ತೀವ್ರತರವಾದ ಬರಗಾಲ ಇದೆ. ಅದಕ್ಕೆ ನಾನು ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ** : ನನ್ನಿಂದ ಉತ್ತರ ನಿರೀಕ್ಷೆ ಮಾಡಿದರೆ ನಾಳೆ ನಾನು ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆ.

**ಶ್ರೀ ಎಸ್.ಎಂ. ಕೃಷ್ಣ** : ಮಾನ್ಯ ಅಧ್ಯಕ್ಷರೆ, 'ದಿನಾಂಕ 31.3.2004ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28 ಇವುಗಳಿಗೆ ಸಂದಾಯವಾಗುವ

ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.'

**ಅಧ್ಯಕ್ಷರು** : ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ, "ದಿನಾಂಕ 31.3.2004ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28 ಇವುಗಳಿಗೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು".

**ಪ್ರಸ್ತಾಪವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು**

(ಮಾನ್ಯ ಅಧ್ಯಕ್ಷರು ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

**ಅಭಿಯಾಚನೆ ಕ್ರಮಾಂಕ 3 – ಆರ್ಥಿಕ**

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರ್ಥಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,85,977.34 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,218.75 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

**ಅಭಿಯಾಚನೆ ಕ್ರಮಾಂಕ 4 – ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ**

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,523.53 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ .......... ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

**ಅಭಿಯಾಚನೆ ಕ್ರಮಾಂಕ 5 – ಒಳಾಡಳಿತ ಮತ್ತು ಸಾರಿಗೆ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಒಳಾಡಳಿತ ಮತ್ತು ಸಾರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,12,546.33 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,690.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 21 – ಜಲ ಸಂಪನ್ಮೂಲ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜಲ ಸಂಪನ್ಮೂಲ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ

ಖಾತೆಯಲ್ಲಿ 19,816.14 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,17,909.95 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 7 – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 93,633.94 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 24,326.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 8 – ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 34,138.96 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 810.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 11 – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 34,596.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 65.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 9 – ಸಹಕಾರ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಹಕಾರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,162.93 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 790.15 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 20 – ಲೋಕೋಪಯೋಗಿ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 66,392.46 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,12,692.50 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 10 – ಸಮಾಜ ಕಲ್ಯಾಣ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಮಾಜ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 54,679.20 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8,989.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 16 – ವಸತಿ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಸತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14,638.86 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 23 – ಕಾರ್ಮಿಕ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 13,928.59 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ................ ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 18 – ವಾಣಿಜ್ಯ ಮತ್ತು ಕೈಗಾರಿಕೆ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾಣಿಜ್ಯ ಮತ್ತು ಕೈಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 57,056.51 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 12,121.14 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 22 – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,01,000.72 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,940.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 14 – ಕಂದಾಯ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಂದಾಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ

ಖಾತೆಯಲ್ಲಿ 62,275.91 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 0.65 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 27 – ಕಾನೂನು**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾನೂನು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14,140.55 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ............... ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 28 – ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3251.58 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ............. ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 19 – ನಗರಾಭಿವೃದ್ಧಿ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 135,502.13 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 28,567.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 2 – ಪಶು ಸಂಗೋಪನೆ ಮತ್ತು ಮೀನುಗಾರಿಕೆ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶು ಸಂಗೋಪನೆ ಮತ್ತು ಮೀನುಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 18,134.43 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 340.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 26 – ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,679.12 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ............... ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 17 – ಶಿಕ್ಷಣ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಶಿಕ್ಷಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,96,620.29 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 460.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 1 – ಕೃಷಿ ಮತ್ತು ತೋಟಗಾರಿಕೆ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ ಮತ್ತು ತೋಟಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 72,140.15 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 13 – ಆಹಾರ ಮತ್ತು ನಾಗರೀಕ ಸರಬರಾಜು**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಾಗರೀಕ ಸರಬರಾಜು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 20,064.96 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 100.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 12 – ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,122.34 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ................ ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 15 – ಮಾಹಿತಿ ತಂತ್ರಜ್ಞಾನ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಾಹಿತಿ ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 353.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 766.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 6 – ಮೂಲಭೂತ ಸೌಕರ್ಯ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ

ರಾಜಸ್ವ ಖಾತೆಯಲ್ಲಿ 50.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 17,950.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 25 – ಕನ್ನಡ ಮತ್ತು ಸಂಸ್ಕೃತಿ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕನ್ನಡ ಮತ್ತು ಸಂಸ್ಕೃತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3965.51 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 160.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

**ಅಭಿಯಾಚನೆ ಕ್ರಮಾಂಕ 24 – ಇಂಧನ**

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2004 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇಂಧನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 214570.88 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5740.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

## 3) ಶಾಸನ ರಚನೆ

### ವಿಧೇಯಕದ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ

### ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕ, 2003 ಮಂಡನೆಗೆ ಅನುಮತಿ ಕೋರಿಕೆ

**ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, "2003ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ;

"2003ರ ಕರ್ನಾಟಕ ಧನ ವಿನಿಯೋಗ ಸಂಖ್ಯೆ (2) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು**

**ಶ್ರೀ ಎಸ್.ಎಂ. ಕೃಷ್ಣ** : ಮಾನ್ಯ ಅಧ್ಯಕ್ಷರೆ, 2003ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ:2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

### ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2003

### (2003ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 16)

2003–2004ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.